

# ಅವಿತುಕೊಂಡ ಸೂರ್ಯ

ಅಖಿಲ ಭಾರತ ಪತ್ರಿಕೆ

ಮೇ 2016

ಬೆಲೆ : 15/–



*Awaken our slumbering energies,*
*stimulate our courage, enlighten us,*
*O Lord, show us the Way.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಅವಿತುಕೊಂಡ ಸೂರ್ಯ"


**ಅನು : ಶ್ರೀ ಪುರುಷೋತ್ತಮ ಗಲಗಲಿ**
ಇನ್ನೂ ಜನ್ಮ ತಾಳಿರದ ಮಹಿಮೆ 3

**ಅನು : ಶ್ರೀ ವೀರೇಂದ್ರ ಸಿಂಪಿ**
ಕಳೆದು ಹೋದ ದೈವೀ ಸೂರ್ಯ 11

**ಅನು : ಡಾ. ಕೆ.ಎಸ್. ಆಮೂರ**
ಆಧ್ಯಾತ್ಮಿಕ ಹಾಗೂ ಅತಿಮಾನಸ 25
ಅತಿಮಾನಸ ಯೋಗ 41


**ವಾರ್ತಾಪತ್ರ** 51


### (All India Magazine) ಸಂಪಾದಕೀಯ

ವೈದಿಕ ಋಷಿಗಳು ಅದಿತಿಯ ಎಂಟನೆಯ ಮಗನನ್ನು ಕುರಿತು ಹೇಳುತ್ತಾರೆ, ಅವನನ್ನು ಅದಿತಿ ಅಂಧಕಾರದಲ್ಲಿ ಎಸೆದಿದ್ದಳು, ಅಲ್ಲಿ ಅವನು ಹೋರಾಟ ನಡೆಸಿ ವಿಜಯಿಯಾಗಿ ಅಲ್ಲಿಂದ ಹೊರಹೊಮ್ಮಿ ಬರಬೇಕಾಗಿತ್ತು. ಈ ಎಂಟನೆಯ ಮಗ ಅತಿಮಾನಸ ಸೂರ್ಯನಲ್ಲದೆ ಬೇರಾರೂ ಅಲ್ಲ. ಅವನು ಕೆಳಗೆ ಅಂಧಕಾರದಲ್ಲಿ ಅಡಗಿಕೊಂಡಿದ್ದಾನೆ. ಅಲ್ಲಿ ಅಡಗಿ–ಕೊಂಡಿರುವ ಹಾಗೆಯೇ ಮೇಲ್ಗಡೆಗಿರುವ ಅತ್ಯುಚ್ಚ ಅಂತರಿಕ್ಷದಲ್ಲಿ ತನ್ನ ಏಳುಪಟ್ಟು ಪ್ರಕಾಶದಿಂದ ಹೊಳೆಯುತ್ತಾನೆ, ಪೃಥ್ವಿಯ ಉತ್ಕ್ರಾಂತಿ, ಯಾವಾಗಲೂ, ಅಪರೋಕ್ಷವಾಗಿ ಅಂಧಕಾರದ ಪದರುಗಳಲ್ಲಿ ಅಡಗಿಕೊಂಡಿದ್ದ ರಹಸ್ಯ ಸೂರ್ಯನ ಸಾನ್ನಿಧ್ಯದ ಪ್ರಭಾವಕ್ಕೊಳಗಾಗಿದ್ದರೂ ಈ ದೈವೀ ಸತ್ಯದ ಸಾಮರ್ಥ್ಯ ಪೃಥ್ವಿಯ ಸ್ವಭಾವದ ಪದರುಗಳ ಹಿಂದಿನಿಂದ ಕಾರ್ಯ ಕೈಕೊಂಡಿದೆ, ಈ ಪದರುಗಳು, ಏಕರೂಪದಲ್ಲಿ, ಅವುಗಳ ಮೂಲಕ ಸೋಸಿ ಬರುತ್ತಿದ್ದ ದೈವೀ ಕಿರಣಗಳನ್ನು

ವಿರೂಪಗೊಳಿಸಿವೆ. ಆದರೆ 29–2–1956 ರಲ್ಲಾದ ಅತಿಮಾನಸ ಪ್ರಕಟಣೆಯೊಂದಿಗೆ ಮನುಕುಲ ಸಾಕಷ್ಟು ಪರಿಶುದ್ಧವಾಗುವುದಕ್ಕೆ ಮತ್ತು ತಯಾರು ಮಾಡಿಕೊಳ್ಳುವುದಕ್ಕೆ ಸಮಯ ಒದಗಿಬಂದಿದೆ, ಅದರಿಂದಾಗಿ ಮನುಕುಲ ದೈವೀ ಸತ್ಯಕ್ಕೆ ನೇರ ಪ್ರತಿಕ್ರಿಯೆ ನೀಡಬಲ್ಲದಾಗಿದೆ. ಹಾಗಾಗಿ ಈ ದೈವೀ ಜ್ಞಾನವನ್ನು ಹಾಗೂ ಸಾಮರ್ಥ್ಯವನ್ನು ನೇರವಾಗಿ ಪೃಥ್ವಿಯ ಮೇಲಿನ ಲೀಲೆಯಲ್ಲಿ ತರಬಹುದಾಗಿದೆ. ಅದು ಲೀಲೆ ಬದಲಿಸುವುದರಲ್ಲಿ ಕೊನೆಯದಾಗಿದ್ದು, ನೇರವಾದ ದೈವೀ ಕ್ರಿಯೆಯ ರೂಪದಲ್ಲಿ ಎಲ್ಲ ಭವಿಷ್ಯತ್ಕಾಲವನ್ನು ಬದಲು ಮಾಡುತ್ತದೆ. ಈ ಸಂಚಿಕೆಯಲ್ಲಿ ಈ ರಹಸ್ಯ ಅತಿಮನಸ್ಸೆಂದರೆ ಏನು ಎಂಬುದನ್ನು ಕುರಿತು ಚಿಂತನ ಮಾಡುತ್ತೇವೆ. ಅತಿಮನಸ್ಸಿನ ಬಗ್ಗೆ ವೇದಗಳು ಹಾಡಿ ಹೇಳಿವೆ, ಉಪನಿಷತ್ತುಗಳು ಸೂಚನೆ ನೀಡಿವೆ. ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಇವರಿಬ್ಬರ ತಪಸ್ಸಿನಿಂದ, ದೈವೀ ಕೃಪೆಯಿಂದ ಅದನ್ನು ಅದರ ಅತ್ಯುಚ್ಚ ನಿವಾಸದಿಂದ ಪೃಥ್ವಿಯ ಮೇಲೆ ಕೆಳಗಿಳಿಸಿ ತರಲಾಗಿದೆ.

*



ನಮ್ಮೆಲ್ಲ ಸೂರ್ಯರುಗಳು ಪ್ರಜ್ವಲಿಸುವಂತೆ ಮಾಡುವ ದೈವೀ ಸೂರ್ಯ ...

**Savitri, p. 314** – ಶ್ರೀ ಅರವಿಂದರು

*

# ಇನ್ನೂ ಜನ್ಮ ತಾಳಿರದ ಮಹಿಮೆ

## ಅರುಣೋದಯಕ್ಕೆ ಸ್ತೋತ್ರ

ಅಗೋ ನೋಡು, ಪ್ರೀತಿಪಾತ್ರವಾದ ಅರುಣೋದಯ[1] ತನ್ನ ಮಿನುಗುತ್ತಿರುವ ತರುಣ ದೇಹದಲ್ಲಿ ತೋರಿಬರುತ್ತಿದ್ದಾಳೆ. ಗುರಿಯೆಡೆಗಿನ ಮಾರ್ಗದ ಮೇಲೆ ಅವಳು ಎಲ್ಲ ದೈವೀ ಜೀವನವನ್ನು ಮುಂದೆ ತಳ್ಳುತ್ತಾಳೆ. ದೈವೀ ಶಕ್ತಿಯಾದ ಅಗ್ನಿ ಮನುಷ್ಯನಲ್ಲಿ ಹೊತ್ತಿಕೊಳ್ಳಲು ಜನ್ಮತಾಳಿದೆ. ಅರುಣೋದಯದ ದೇವಿ ಎಲ್ಲ ಅಂಧಕಾರವನ್ನು ಹೊಡೆದೋಡಿಸುತ್ತಾಳೆ ಮತ್ತು ದೈವೀ ಪ್ರಕಾಶವನ್ನು ಸೃಷ್ಟಿಸುವುದರಲ್ಲಿ ಫಲಪ್ರದತೆ ಕಂಡುಕೊಳ್ಳುತ್ತಾಳೆ. ದೇವಿಯಾದ ಅವಳು ತನ್ನ ಮುನ್ನಡೆಯ ನೆಟ್ಟ ದೃಷ್ಟಿಯನ್ನು ಮೇಲಕ್ಕೆತ್ತುತ್ತ ದೈವೀ ವಿಶಾಲವಾದುದರತ್ತ, ವಿಶ್ವಂಭರವಾದುದರತ್ತ ಮೇಲೆದ್ದು ಬರುತ್ತಾಳೆ. ಅವಳು ದೈವೀ ಪ್ರಕಾಶದ ನಿಲುವಂಗಿಯನ್ನು ಧರಿಸಿದ್ದಾಳೆ, ಅದರ ದೈವೀ ಸತ್ಯದ ಸೂಕ್ಷ್ಮ ಮಾದರಿಯಲ್ಲಿ ಶ್ವೇತವರ್ಣದ ಉಜ್ವಲತೆಯನ್ನು ಪ್ರದರ್ಶಿಸುತ್ತಾಳೆ. ಅವಳ ವರ್ಣ ಸ್ವರ್ಗೀಯ ಬಂಗಾರದ್ದಾಗಿದೆ, ಅವಳ ದೃಷ್ಟಿ ಸುತ್ತಲೆಲ್ಲ ಬೀರುವಂತಹದು; ನಿಜವಾಗಿಯೂ ಅವಳು ಜ್ಞಾನದ ಉಜ್ವಲತೆಗಳ ಹಿಂಡಿನ (herd) ಮಾತೆಯಾಗಿದ್ದಾಳೆ, ನಮ್ಮ ಪ್ರಕಾಶಮಯ ದಿನಗಳಿಗೆ ನೇತಾರಳಾಗಿದ್ದಾಳೆ, ಅವಳ ಪ್ರಕಾಶಮಯ ದೇಹ ತೆರೆದುಕೊಂಡಿದೆ. ಸರ್ವ–ಸಂತೋಷಮಯಳಾದ ಆ ದೇವಿ ಸೂರ್ಯನನ್ನು ಎತ್ತಿಕೊಂಡು ಬರುತ್ತಾಳೆ, ಆ ಸೂರ್ಯ ದೇವರುಗಳ ಕಣ್ಣಾಗಿದ್ದಾನೆ, ಅವನು ತನ್ನೊಡನೆ ದೈವೀ ಜೀವನವಿರುವ, ವೇಗವಾಗಿ ಓಡುವ ಕುದುರೆಗಳನ್ನು ತರುತ್ತಾನೆ, ಅವುಗಳಿಗೆ ಸ್ಪಷ್ಟ ದೃಷ್ಟಿಯಿರುತ್ತದೆ, ಆ ಸೂರ್ಯನ ಬೆಳಕಿನಲ್ಲಿ ತನ್ನನ್ನು ಇಡಿಯಾಗಿ ತೆರೆದು ತೋರಿಸುತ್ತ ಆ ದೇವಿ ಬರುತ್ತಾಳೆ. ಅವಳ ಅನೇಕ ದೈವೀ ಸಂಪತ್ತುಗಳಲ್ಲಿ ಅವಳನ್ನು ನೋಡಿರಿ, ಎಲ್ಲೆಡೆಯಲ್ಲೂ ಎಲ್ಲ ವಸ್ತುಗಳಲ್ಲೂ ಪ್ರಕಟಳಾಗಿರುವ ಅವಳನ್ನು ನೋಡಿರಿ, ದೈವೀ ತೇಜಸ್ಸಿನ ದೈವೀ ಮಾತೆಯಾದ ಅವಳನ್ನು ನೋಡಿರಿ, ಎಲ್ಲ ದಿವ್ಯಾನಂದ ಒಳಗಿದೆ, ಮನುಷ್ಯನಿಗೆ ವೈರಿಯಾದದ್ದು ದೂರದಲ್ಲಿದೆ, ಅದು ಅದೇ ರೀತಿಯಲ್ಲಿ ನಿಮ್ಮ ಅರುಣೋದಯದಲ್ಲಿರಲಿ. ಸತ್ಯದಿಂದ ಪ್ರಕಾಶಿತವಾದ ನಮ್ಮ ಅನಂತದ ಹುಲ್ಲುಗಾವಲನ್ನು ನಿರ್ಮಿಸಿರಿ, ಭಯದಿಂದ ಮುಕ್ತವಾದ ದಿವ್ಯಾನಂದದ ನಮ್ಮ ನಿವಾಸವನ್ನು ನಿರ್ಮಿಸಿರಿ.

---

1. ಅರುಣೋದಯವನ್ನು ಸ್ತ್ರೀ ರೂಪದಲ್ಲಿ ವರ್ಣಿಸಲಾಗಿದೆ.

ವಿಭಜಿಸುವ ಹಾಗೂ ವೈರುಧ್ಯವನ್ನುಂಟು ಮಾಡುವ ಎಲ್ಲವನ್ನೂ ದೂರ ಓಡಿಸಿರಿ. ಮಾನವ ಆತ್ಮದ ಎಲ್ಲ ಸಂಪತ್ತನ್ನು ನಮ್ಮತ್ತ ತೆಗೆದುಕೊಂಡು ಬನ್ನಿರಿ. ಓ ಸಮೃದ್ಧಿಯ ದೈವೀ ಮಾತೆಯೆ, ಜೀವನದಲ್ಲಿ ದಿವ್ಯಾನಂದದ ಪೂರ್ಣತೆಯನ್ನು ಕಳಿಸಿಕೊಡು.

ಅರುಣೋದಯದ ದೇವಿಯೆ, ನಿನ್ನ ಪರಮೋಚ್ಚ ಪ್ರಭೆಯ ಲೀಲೆಯಲ್ಲಿ ನಮ್ಮ ಹೃದಯಗಳಲ್ಲಿ ಪ್ರಕಟಳಾಗು, ಈ ಮೈವೆತ್ತ ಸತ್ತೆಯ ಜೀವನವನ್ನು ವಿಸ್ತರಿಸು. ಓ ದಿವ್ಯಾನಂದದ ಮಾತೆಯೆ ನಮಗೆ ಸ್ಥಿರವಾದ ಅಂತಃಪ್ರಚೋದನೆಯನ್ನು ಕೊಡು.

ನಮಗೆ ಸಮೃದ್ಧವಾದದ್ದನ್ನು ಕೊಡು, ಅದರ ಸಂಪತ್ತು ದೈವೀ ಸತ್ಯದ ಪ್ರಕಾಶಮಯ ಹಿಂಡಿರುವ ಹಾಗಿರಲಿ, ಅಲ್ಲಿ ಅನಂತದತ್ತ ಚಲಿಸುತ್ತಿರುವ ದೈವೀ ಜೀವನದ ರಥಗಳು ಹಾಗೂ ಕುದುರೆಗಳು ಸಾಲಾಗಿ ನಿಂತುಕೊಳ್ಳಲಿ. ಓ ಪರಿಪೂರ್ಣತೆಯಲ್ಲಿ ಜನ್ಮ ತಾಳಿದ ದೇವಿಯೆ, ಸ್ವರ್ಗದ ಪುತ್ರಿಯೆ, ಏಕಪ್ರಕಾರದಿಂದ ಅಭೀಪ್ಸೆ ಪಡುತ್ತಿರುವ ನಾವು ಈ ಸಿರಿತನಗಳಲ್ಲಿ ಸಿರಿವಂತರಾಗಿದ್ದೇವೆ. ನಮ್ಮ ಯೋಚನೆಗಳ ಪ್ರವಾಹದಿಂದ ನಿನ್ನನ್ನು ಪೋಷಿಸುತ್ತೇವೆ, ನೀನೂ ಕೂಡ, ಜಯಿಸಿದ ಜ್ಞಾನವನ್ನು ಮತ್ತು ದಿವ್ಯಾನಂದದ ವೈಶಾಲ್ಯವನ್ನು ಹಾಗೂ ಸಾಗರಗಳನ್ನು ನಮ್ಮ ಎದೆಗಳಲ್ಲಿ ಹಿಡಿದಿಟ್ಟಿರುವಿ.

**ಬಂಗಾಲಿ ಬರಹಗಳು, ಪು. 7** **– ಶ್ರೀ ಅರವಿಂದರು**

*

**ಜನ್ಮ ತಾಳಿರದ ದೈವೀ ವೈಭವ**

ಮನಸ್ಸೇ ಎಲ್ಲವೂ ಅಲ್ಲ, ಏಕೆಂದರೆ ಮನಸ್ಸಿನಾಚೆಗೆ ಶ್ರೇಷ್ಠತರ ಪ್ರಜ್ಞೆಯೊಂದಿದೆ, ಅಲ್ಲಿ ಅತಿಮನಸ್ಸಿದೆ, ಆತ್ಮವಿದೆ. ಪ್ರಕೃತಿ ಪಶುವಿನ ರೀತಿಯ ಪ್ರಾಣಿಕ ಸತ್ತೆಯಲ್ಲಿ ಯೋಚಿಸುವ ಮನುಷ್ಯ(ಮನು)ನನ್ನು ಪ್ರಕಟಿಸಲು ಸಾಧ್ಯವಾಗುವವರೆಗೆ ಶ್ರಮಪಟ್ಟಿತು. ಅದೇ ರೀತಿಯಲ್ಲಿ ಮಾನಸಿಕ ಸತ್ತೆಯಾದ ಮನುಷ್ಯನಲ್ಲಿ ಆಧ್ಯಾತ್ಮಿಕ ಮತ್ತು ಅತಿಮಾನಸ ದೇವಪ್ರಮುಖನೂ, ಸತ್ಯ ಪ್ರಜ್ಞೆ (ಋತ್‌ಚಿತ್)ಯಿರುವ ಋಷಿಯೂ, ತಾದಾತ್ಮ್ಯದ ಮೂಲಕ ಅರಿತುಕೊಳ್ಳುವವನೂ, ವ್ಯಕ್ತಿಗತ ಸ್ವಭಾವದಲ್ಲಿ ವಿಶ್ವಾತೀತವಾದದ್ದನ್ನು ಹಾಗೂ ವಿಶ್ವಂಭರವಾದದ್ದನ್ನು ಮೈವೆತ್ತವನೂ ಆದವನನ್ನು ಪ್ರಕಟಿಸಲು ಸಾಧ್ಯವಾಗುವವರೆಗೆ ಪ್ರಕೃತಿ ಶ್ರಮಿಸುತ್ತಿದೆ.

ಮಣ್ಣುಹೆಂಟೆ ಹಾಗೂ ಲೋಹ ಇಂತಹವುಗಳಿಂದ ಸಸ್ಯದವರೆಗೆ, ಸಸ್ಯದಿಂದ ಪಶುವಿನವರೆಗೆ, ಪಶುವಿನಿಂದ ಮನುಷ್ಯನವರೆಗೆ ಪ್ರಕೃತಿ ತನ್ನ ಪ್ರಯಾಣವನ್ನು ಪೂರೈಸಿದೆ, ಭವ್ಯವಾದ ವಿಸ್ತರಣ ಇಲ್ಲವೆ ಅಗಾಧ ನೆಗೆತ ಇದಿನ್ನೂ ಅದರ ಮುಂದೆ ಉಳಿದುಕೊಂಡಿದೆ. ಭೌತದ್ರವ್ಯದಿಂದ ಪ್ರಾಣದವರೆಗೆ, ಪ್ರಾಣದಿಂದ ಮನಸ್ಸಿನವರೆಗೆ ಪ್ರಕೃತಿ ಸಾಗಿ ಬಂದ ಹಾಗೆಯೇ ಮನಸ್ಸಿನಿಂದ ಅತಿಮನಸ್ಸಿನವರೆಗೆ, ಮನುಷ್ಯನಿಂದ ಅತಿಮಾನವನೆಡೆಗೆ ಸಾಗಿ ಹೋಗಬೇಕು, ಈ ಕಂದರದ ಮೇಲೆ ಅದು ಸೇತುವೆ ನಿರ್ಮಿಸಬೇಕಾಗಿದೆ, ಸೇತುವೆ ನಿರ್ಮಿಸುವ ಈ ಪರಮೋಚ್ಚ ಪವಾಡವನ್ನು ಅದು ಮಾಡಿ ತೋರಿಸಬೇಕು, ನಂತರ ಅದು ತನ್ನ ಹೋರಾಟ, ಅತೃಪ್ತಿ ಇವುಗಳಿಂದ ಮುಕ್ತಿ ಪಡೆದು ಪರಮೋಚ್ಚ ಪ್ರಜ್ಞೆಯ ತೇಜಸ್ಸಿನಲ್ಲಿ ವೈಭವೋಪೇತವಾಗಿ, ರೂಪಪರಿವರ್ತನೆ ಪಡೆದು, ತನ್ನ ಶ್ರಮದಿಂದ ಸಂತೃಪ್ತಿ ಪಡೆದು ಎದ್ದು ನಿಲ್ಲಬಹುದು. ಇಲ್ಲಿ ಒಮ್ಮೆ ಅಪೂರ್ಣ ಮಾನವ (sub-human) ಪ್ರಕೃತಿಯಲ್ಲಿ ಪರಮೋಚ್ಚನಾಗಿದ್ದ, ಅವನ ಸ್ಥಾನದಲ್ಲಿ ಮಾನವ, ಕಾಲದ ಎದುರಿನಲ್ಲಿ, ನಡೆದಾಡುತ್ತಿದ್ದಾನೆ. ಆದರೆ ಇನ್ನೂ ಗುರಿ ಹಾಗೂ ಧ್ಯೇಯದ ರೂಪದಲ್ಲಿ ಅತಿಮಾನಸ, ಅತಿಮಾನವ, ಇನ್ನೂ ಸಿದ್ಧಿಸಿಕೊಂಡಿರದ ಜನ್ಮ ತಾಳಿರದ ವೈಭವ ಇವೆಲ್ಲ ಕಾದುಕೊಂಡಿವೆ.

**CWSA, 12/168** **– ಶ್ರೀ ಅರವಿಂದರು**

*

ಭಗವಂತನ ರೀತಿಗಳು ಮನುಷ್ಯನ ಮನಸ್ಸಿನ ರೀತಿಗಳ ಹಾಗಿರುವುದಿಲ್ಲ, ಇಲ್ಲವೆ ನಮ್ಮ ನಮೂನೆಗಳಿಗೆ ಅನುಗುಣವಾಗಿರುವುದಿಲ್ಲ, ಅವನ ರೀತಿಗಳನ್ನು ಕುರಿತು ತೀರ್ಮಾನಕ್ಕೆ ಬರುವುದು ಅಸಾಧ್ಯವಾದದ್ದು, ಇಲ್ಲವೆ ಅವನೇನು ಕೈಕೊಳ್ಳಬೇಕು, ಏನನ್ನು ಕೈಕೊಳ್ಳಬಾರದು ಇವುಗಳಿಗೆ ನಿಯಮವನ್ನಿರಿಸಲಾಗುವು–ದಿಲ್ಲ, ಏಕೆಂದರೆ ನಾವು ಅರಿತುಕೊಳ್ಳಬಹುದಾದುದಕ್ಕಿಂತ ಹೆಚ್ಚು ಒಳ್ಳೆಯ ರೀತಿಯಲ್ಲಿ ಅವನು ಅರಿತುಕೊಳ್ಳುತ್ತಾನೆ. ನಾವು ಭಗವಂತನ ಇರವನ್ನು ಒಪ್ಪಿಕೊಳ್ಳುವುದಾದರೆ, ಅಂತರ್ನಿಹಿತ ನಂಬಿಕೆ ಮತ್ತು ಶರಣಾಗತಿ ಇವುಗಳನ್ನು ಒತ್ತಾಯದಿಂದ ಬೇಡುವುದರಲ್ಲಿ, ನಿಜವಾದ ತರ್ಕ ಮತ್ತು ಭಕ್ತಿ ಇವು ಏಕವಾಗಿವೆ ಎಂದು ನನಗೆ ತೋರಿಬರುತ್ತದೆ.

**CWSA, 31/5–6** **– ಶ್ರೀ ಅರವಿಂದರು**

*

## ಮನಸ್ಸು ಹಾಗೂ ದೈವೀ ಪ್ರಜ್ಞೆ

ಅಚ್ಚುಮೆಚ್ಚಿನ ವಿಚಾರಗಳಿಗೆ ಕಡಿಮೆ ರೀತಿಯಲ್ಲಿ ಅಚ್ಚುಮೆಚ್ಚು ತೋರಿಸಿದಾಗ ಅವುಗಳನ್ನು ಕಡಿಮೆ ರೀತಿಯಲ್ಲಿ ಪೋಷಿಸಿಕೊಂಡು ಬಂದಾಗ ಅದು ಅತಿಮಾನಸ ಯೋಗಕ್ಕೆ ಹೆಚ್ಚು ಒಳ್ಳೆಯದಾಗುತ್ತದೆ. ಮನಸ್ಸು, ಯಾವಾಗಲೂ, ವಿಚಾರಗಳನ್ನು ನಿರ್ಮಾಣ ಮಾಡುತ್ತಿರುತ್ತದೆ, ಅವುಗಳಲ್ಲಿ ಕೆಲವು ತಪ್ಪಾದವುಗಳು, ಕೆಲವು ಸತ್ಯ ಹಾಗೂ ದೋಷಗಳಿಂದ ಕೂಡಿದಂತಹವು, ಕೆಲವು ಅವುಗಳದೇ ರೀತಿಯಲ್ಲಿ ಸತ್ಯವಾದವುಗಳು, ಆದರೆ ಕೆಲವೇ ಕ್ಷೇತ್ರಗಳಲ್ಲಿ ಇಲ್ಲವೆ ಕೆಲವೊಂದು ಪರಿಸ್ಥಿತಿಗಳಲ್ಲಿ ಇಲ್ಲವೆ ಕೆಲವೇ ಜನರಿಗೆ ಸತ್ಯವಾದವುಗಳು ಆಗಿರುತ್ತವೆ; ಮನಸ್ಸು ಅವುಗಳನ್ನು ಅಚ್ಚುಮೆಚ್ಚಿನವುಗಳನ್ನಾಗಿ ಮಾಡಿಕೊಳ್ಳುವತ್ತ ಮುಂದುವರಿಯುತ್ತದೆ ಅಷ್ಟೇ ಅಲ್ಲ, ಆದರೆ ಅವು ವಿಶ್ವಂಭರ, ಪರಿಪೂರ್ಣ ಸತ್ಯಗಳೆಂದು ಇಲ್ಲವೆ ಸರ್ವಸಾಧಾರಣವಾಗಿ ಸುಸ್ಥಾಪಿತವಾದವುಗಳೆಂದು ಭಾವಿಸಿ ಇತರರು ಅವುಗಳನ್ನು ಅನುಸರಿಸಲೆಂದು ಅವರ ಮೇಲೆ ಹೇರಲು ಪ್ರಯತ್ನಿಸುತ್ತದೆ. ಮನಸ್ಸು ಕಟ್ಟುನಿಟ್ಟಿನ ಉಪಕರಣವಾಗಿದೆ: ಅದು ಜೀವನದ ಶ್ರೇಷ್ಠತರ ಲೀಲೆಯ ನಮ್ಯತೆಗೆ ಇಲ್ಲವೆ ದಿವ್ಯಾತ್ಮದ ಲೀಲೆಯ ಸ್ವಾತಂತ್ರ್ಯವಿರುವುದಕ್ಕೆ ಹೊಂದಿಕೊಳ್ಳುವುದು ಕಷ್ಟವಾದದ್ದೆಂದು ಕಂಡುಕೊಳ್ಳುತ್ತದೆ. ಸ್ವಯಂಪ್ರೇರಿತವಾದ ಈ ಎರಡೂ ಸಾಮರ್ಥ್ಯಗಳಲ್ಲಿ ಅದು ಒಂದನ್ನು ಇಲ್ಲವೆ ಎರಡನ್ನೂ ಹಿಡಿದುಕೊಳ್ಳಲು ಮತ್ತು ಅವುಗಳನ್ನು ತನ್ನದೇ ಪರಿಮಿತಿಗಳಲ್ಲಿ ತುಂಡರಿಸಲು ಬಯಸುತ್ತದೆ. ಅದು ಜೀವನ ಹಾಗೂ ಆತ್ಮ ಇವೆರಡರ ನಡುವೆ ಮಧ್ಯವರ್ತಿಯೆಂದು, ವಿವರಣಕಾರನೆಂದು ಸೋಗು ಹಾಕುತ್ತದೆ, ಆದರೆ ಅದಕ್ಕೆ ಅವೆರಡರಲ್ಲಿ ಯಾವುದರ ಬಗೆಗೂ ತಿಳಿದಿರುವುದಿಲ್ಲ. ಅದು ಕೇವಲ ತನ್ನ ಬಗೆಗೆ, ಜೀವನದಿಂದ ರೂಪಿಸಿದ ತನ್ನದೇ ರಚನೆಗಳನ್ನು ಮತ್ತು ದಿವ್ಯಾತ್ಮದ ಸತ್ಯ ಕುರಿತು ತಾನೇ ವಿರೂಪಗೊಳಿಸಿದವುಗಳನ್ನು ಇಲ್ಲವೆ ಅರ್ಥಂಬರ್ಥ ಚಿಂತನಗಳನ್ನು ಅರಿತಿರುತ್ತದೆ. ಕೇವಲ ಅತಿಮನಸ್ಸು ನಿಜವಾದ ಮಧ್ಯವರ್ತಿ ಮತ್ತು ವಿವರಣಕಾರ ಆಗಬಲ್ಲದು. ನಿಮಗೆ ಅತಿಮಾನಸ ದೈವೀ ಪ್ರಕಾಶ ಬೇಕಾಗಿದ್ದರೆ, ನೀವು ಮಾನಸಿಕ ವಿಚಾರಗಳೊಂದಿಗೆ ಗಂಟುಹಾಕಿ–ಕೊಂಡಿರಬಾರದು, ಆದರೆ ಅವುಗಳಿಂದ ಹಿಂದೆ ಸರಿದುಕೊಳ್ಳಬೇಕು, ಮತ್ತು ಅವುಗಳನ್ನು ಪಕ್ಷಪಾತರಹಿತ ಸಮತೆಯಿಂದ ಆತ್ಮದ ನಿಶ್ಚಲ ನೀರವತೆಯಲ್ಲಿ ಅವಲೋಕನ ಮಾಡಬೇಕು. ಅತಿಮಾನಸ ಪ್ರಕಾಶ ಅವುಗಳನ್ನು ಸ್ಪರ್ಶಿಸಿದಾಗ

ಅದು ಅವುಗಳನ್ನು ಅವುಗಳಿಗೆ ಸರಿಯಾದ ಸ್ಥಾನದಲ್ಲಿರಿಸುತ್ತದೆ ಮತ್ತು ಕೊನೆಗೆ ವಿಷಯಗಳ ನಿಜವಾದ ಸತ್ಯವನ್ನು ಅವುಗಳ ಸ್ಥಾನದಲ್ಲಿರಿಸುತ್ತದೆ.

**CWSA, 31/5–6** **– ಶ್ರೀ ಅರವಿಂದರು**

*

**ಅನಂತ ದೈವೀ ಸತ್ಯದ ತಳಹದಿ**

ಬುದ್ಧಿಮತ್ತೆಯ ಆಚೆಗಿರುವ ಅತಿಮಾನಸ ತತ್ವ ಅನಂತ ದೈವೀಸತ್ಯದ ತಳಹದಿಯಾಗಿದೆ. ಅತಿಮನಸ್ಸಿನ ಕ್ರಿಯೆಯನ್ನು ಪೃಥ್ವಿ–ಪ್ರಜ್ಞೆಯಲ್ಲಿ ನಿಷೇಧಿಸಲಾಗಿದೆ ಇಲ್ಲವೆ ಅದು ಪರದೆಯ ಹಿಂದಿನಿಂದ ಮಿನುಗುವ ಕ್ಷಣಿಕ ಮಿಂಚಿನ ಹಾಗೆ ಅಪರೂಪದ್ದಾಗಿದೆ. ಅಂಜುಬುರುಕ, ಕುಂಟ ಹಾಗೂ ಮಬ್ಬಾಗಿರುವ ಮನಸ್ಸು ಮತ್ತೆ, ಮತ್ತೆ ಅದೆಲ್ಲಿರುವುದೆಂಬುದನ್ನು ನೋಡುತ್ತದೆ ಮತ್ತು ತನ್ನ ದೈತ್ಯ ಪ್ರಯತ್ನದಿಂದ ಅದರ ಇಣುಕುನೋಟವನ್ನಾದರೂ ಹಿಡಿದುಕೊಳ್ಳಬಹುದು, ಆದರೆ ಸಮಗ್ರ ದೈವೀ ಸತ್ಯದ ವಿಶ್ವಾಸಾರ್ಹ, ಅನಂತ ಮತ್ತು ಪ್ರಕಾಶಮಯ ರೂಪ ಅದರ ಗ್ರಹಿಕೆಯಿಂದ ತಪ್ಪಿಸಿಕೊಳ್ಳುತ್ತದೆ. ಮನಸ್ಸಿನ ಜ್ಞಾನ ಹಾಗೂ ಕ್ರಿಯೆ ಇವು ಅದೇ ಬಗೆಯ ಹೋರಾಟದಿಂದ, ದಾರಿದ್ರ್ಯ ಹಾಗೂ ವಿಫಲತೆಗಳಿಂದ ಸಂಕಟಕ್ಕೊಳಗಾಗಿವೆ. ದೈವೀ ಸತ್ಯದ ಕ್ರಿಯೆಯ ಹಸನ್ಮುಖ ಮತ್ತು ಪ್ರಯತ್ನ ರಹಿತ ದೈವೀ ನೃತ್ಯದ ಬದಲಾಗಿ ಅಲ್ಲಿ ಸತ್ಯ ಮತ್ತು ಮಿಥ್ಯೆ, ಸದ್ಗುಣ ಮತ್ತು ದುರ್ಗುಣ, ವಿಷ ಮತ್ತು ಅಪ್ಯಾಯಮಾನವಾದ ಪಾನೀಯ(nectar), ಕ್ರಿಯೆ, ನಿಷ್ಕ್ರಿಯೆ ಮತ್ತು ತಪ್ಪಾದ ಕ್ರಿಯೆ ಇವುಗಳ ಬಿಡಿಸಿಕೊಳ್ಳಲಾಗದ ಬಂಧನದಿಂದ ದಾರುಣ ಸಂಕಟದಲ್ಲಿ ಹೋರಾಡುತ್ತಿರುವ ನಿಮ್ನ ಸ್ತರದ ಪ್ರಕೃತಿಯ ಸಂಕಲ್ಪದ ಸಾಮರ್ಥ್ಯದ ಸಂಕೋಲೆಗೊಳಗಾದ ಪ್ರಯತ್ನವಿದೆ. ಮುಕ್ತ, ಹಿಂದು ಮುಂದು ನೋಡದ, ಆಶಾರಹಿತವಾದ, ವಿಜಯೋತ್ಸಾಹಿಯಾದ, ಆನಂದದಾಯಕ ಹಾಗೂ ಭಾವೋತ್ತೇಜನಗೊಳಿಸುವ ಕ್ರಿಯೆಯ ದೈವೀ ಸಾಮರ್ಥ್ಯ ಏಕತೆಯ ಮಧುವಿನಿಂದ ಮತ್ತು ಬರಿಸುವಂತೆ ಮಾಡುವುದನ್ನು ಸಿದ್ಧಿಸಿಕೊಳ್ಳುವುದು ಇನ್ನೂ ಹಾಗೇ ಉಳಿದಿದೆ. ಅದರ ಸ್ವಾಭಾವಿಕ ಹಾಗೂ ಸುಲಭವಾದ ವಿಶ್ವಂಭರ ಚಲನೆಗಳು ನಿಮ್ನ ಪ್ರಕೃತಿಯ ಸಂಕಲ್ಪದ ಸಾಮರ್ಥ್ಯಕ್ಕೆ ಅಸಾಧ್ಯವಾಗಿವೆ.

ಪೃಥ್ವಿಯ ಮೇಲಿನ ಪ್ರಕೃತಿ ಸಾಂತತೆ ಮತ್ತು ಮಿಥ್ಯೆ ಇವುಗಳ ಪಾಶದಲ್ಲಿ ಬಂಧನಕ್ಕೆ ಸಿಕ್ಕಿಹಾಕಿಕೊಂಡು ಸೀಮಾತೀತ ಅಸ್ತಿತ್ವವನ್ನು, ಬಂಧನರಹಿತ ದೈವೀ

ಪ್ರಜ್ಞೆಯ ಸಾಮರ್ಥ್ಯವನ್ನು ಮತ್ತು ಆ ಅಳತೆಗೆ ಸಿಗದ ದಿವ್ಯಾನಂದದ ಪ್ರಜ್ಞೆಯನ್ನು ಹೊಂದುವುದಕ್ಕೆ ಎಂದಾದರೂ ಭರವಸೆ ತಾಳಬಹುದೇ ಮತ್ತು ಅದನ್ನು ಯಾವ ಸಾಧನದಿಂದ ದೊರಕಿಸಬಹುದು? ಯಜ್ಞಾಹುತಿ(sacrifice) ಸಾಧನವಾಗಿದೆ. ಆ ಯಜ್ಞಾಹುತಿ ಶರಣಾಗತಿಯನ್ನು ಮತ್ತು ಆತ್ಮಾಹುತಿಯನ್ನು ಒಳಗೊಳ್ಳುತ್ತದೆ. ನೀವೇನಾಗಿರುವಿರೋ, ನಿಮ್ಮಲ್ಲಿ ಏನಿರುವುದೋ, ಭವಿಷ್ಯತ್ತಿನಲ್ಲಿ ನಿಮ್ಮ ಪ್ರಯತ್ನದ ಮೂಲಕ ಇಲ್ಲವೆ ದೈವೀ ಕೃಪೆಯಿಂದ ನೀವೇನಾಗಲಿರುವಿರೋ ಅದೆಲ್ಲವನ್ನು ನೀವು ಕ್ರಿಯೆ ಕೈಕೊಳ್ಳುತ್ತಿದ್ದಾಗ ನೀವು ಗಳಿಸಬಹುದಾದುದನ್ನು, ಉಳಿಸಬಹು–ದಾದುದನ್ನು ದೈವೀ ಚೈತನ್ಯದ ಅಗ್ನಿಯಲ್ಲಿ ತುಪ್ಪವನ್ನು ಸುರಿದ ಹಾಗೆ ಸುರಿಯಿರಿ, ಅದು ಸರ್ವ ದಿವ್ಯಾನಂದವಾದುದಕ್ಕೆ ಅರ್ಪಣೆಯಾಗಿರುತ್ತದೆ. ಚಿಕ್ಕದಾದರೂ ಇಡಿಯಾಗಿರುವುದನ್ನು ಕೊಡುವುದರ ಮೂಲಕ ಅನಂತವಾಗಿ ಇಡಿಯಾದುದನ್ನು ಸ್ವೀಕರಿಸುತ್ತೀರಿ. ಯಜ್ಞಾಹುತಿಯಲ್ಲಿ ಯೋಗ ಅಡಕವಾಗಿರುತ್ತದೆ.

**ಬಂಗಾಲಿ ಬರಹಗಳು, ಪು. 47** **– ಶ್ರೀ ಅರವಿಂದರು**

*

**ಅತಿಮನಸ್ಸಿನ ಸ್ತರಗಳು**

ಅತಿಮನಸ್ಸಿಗೆ ಮೂರು ಸ್ತರಗಳಿವೆ, ಅವು ಅಂತರ್ಬೋಧೆಯ ಮನಸ್ಸಿನ ಮೂರು ಚಟುವಟಿಕೆಗಳಾಗಿರುತ್ತವೆ. ಮೊದಲನೆಯದಾಗಿ ವಿವರಣಾತ್ಮಕ ಅತಿಮನಸ್ಸು, ಅದನ್ನು ವಿವರಣಾತ್ಮಕವೆಂದು ಕರೆಯಲಾಗಿದೆ, ಏಕೆಂದರೆ ಮಾನಸಿಕ ಸ್ತರದ ಮೇಲಿನ ಒಂದು ಸಾಧ್ಯತೆ ಅತಿಮಾನಸ ಸ್ತರದ ಮೇಲೆ ಸಾಧ್ಯಗೊಳಿಸಬಹುದಾದ ಒಂದು ಶಕ್ತಿ ಎಂದಾಗುತ್ತದೆ. ವಿವರಣಾತ್ಮಕ ಅತಿಮನಸ್ಸು ಸಾಧ್ಯಗೊಳಿಸಬಹುದಾದ ಎಲ್ಲ ಶಕ್ತಿಗಳನ್ನು ನಿಮ್ಮ ಮುಂದಿರಿಸುತ್ತದೆ. ಅದು ಭೌತಿಕ ಸ್ತರದ ಮೇಲೆ ಸತ್ಯವಾಗಿ ಕಂಡುಬರಬಹುದಾದ ಘಟನೆಗಳ ಮೂಲ ಕಾರಣವನ್ನು ತೋರಿಸುತ್ತದೆ. ಅಂತರ್ಬೋಧೆ ಅದರ ಅತಿಮಾನಸ ಮೌಲ್ಯವಾಗಿ ಬದಲಾದಾಗ ಅದು ವಿವರಣಾತ್ಮಕ ಅತಿಮನಸ್ಸಾಗುತ್ತದೆ.

ಮುಂದಿನದನ್ನು 'ಪ್ರಾತಿನಿಧಿಕ ಅತಿಮನಸ್ಸು' ಎಂದು ಕರೆಯುತ್ತೇನೆ. ಅದು ಸಾಧ್ಯವಾಗಬಹುದಾದ ಶಕ್ತಿಗಳ ನಿಜವಾದ ಚಲನೆಗಳನ್ನು ಪ್ರತಿನಿಧಿಸುತ್ತದೆ. ಮತ್ತು ಕಾರ್ಯಾಚರಣೆಯಲ್ಲಿ ಇರುವುದೇನು ಎಂಬುದನ್ನು ತೋರಿಸುತ್ತದೆ. ಸ್ಫೂರ್ತಿ ಅದರ ಅತಿಮಾನಸ ಮೌಲ್ಯದಲ್ಲಿ ಬದಲಾದಾಗ, ಅದು ಪ್ರಾತಿನಿಧಿಕ

ಅತಿಮನಸ್ಸಾಗುತ್ತದೆ. ಇದು ಅತ್ಯುಚ್ಚ ಅತಿಮನಸ್ಸಲ್ಲ. ಕೆಲವೊಂದು ಸಾಧ್ಯವಾಗಬಹುದಾದ ಶಕ್ತಿಗಳು ಕಾರ್ಯ ಮಾಡುತ್ತಿರುವುದು ನಿಮಗೆ ತಿಳಿದಿರಬಹುದು, ಬಹಳಷ್ಟು ಸಂದರ್ಭಗಳಲ್ಲಿ ಏನು ಸಂಭವಿಸಬಹುದು ಎಂಬುದನ್ನು ಇಲ್ಲವೆ ಒಂದು ವಿಶಿಷ್ಟ ಸಂಗತಿ ಹೇಗೆ ಸಂಭವಿಸಿತು ಎಂಬುದನ್ನು ನೀವು ಹೇಳಬಲ್ಲಿರಿ, ಆದರೆ ಅಲ್ಲಿ ಯಾವ ನಿಶ್ಚಿತತೆ ಇರದೆ ಹೋಗಬಹುದು.

ಕೊನೆಯದಾಗಿ ಅಲ್ಲಿ 'ಆಜ್ಞಾರ್ಥಕ ಅತಿಮನಸ್ಸು' ಎಂಬುದಿದೆ, ಅದು ದಿವ್ಯಜ್ಞಾನ (revelation) ಕ್ಕೆ ಅನುಗುಣವಾಗಿದೆ. ಅದರ ವಿರುದ್ಧ ಯಾವುದೂ ನಿಲ್ಲಲಾರದು, ಅದು ಯಾವಾಗಲೂ ಸತ್ಯವಾಗಿರುತ್ತದೆ. ಅದು ಜ್ಞಾನವಾಗಿದ್ದು ತನ್ನದೇ ಅಂತರ್ನಿಹಿತ ಸಾಮರ್ಥ್ಯದಿಂದ ತನ್ನಲ್ಲಿ ಫಲಪ್ರದತೆ ಕಂಡುಕೊಳ್ಳುತ್ತದೆ.

**ಎ.ಬಿ. ಪುರಾಣಿ ಅವರ ಜೊತೆಗೆ ಸಾಯಂಕಾಲದ ಮಾತುಕತೆಗಳು, 18–8–1923** **– ಶ್ರೀ ಅರವಿಂದರು**

*

**ನಿಜವಾದ ದೈವೀ ವಿಚಾರ**

ಮನಸ್ಸಿನ ಮೇಲಿನ ಸ್ತರದ ಮೇಲೆ ಅಮೂರ್ತವಾದವುಗಳು ಇರುವುದಿಲ್ಲ. ಅಲ್ಲಿ ನೈಜತೆಗಳು ಹಾಗೂ ಸಾಮರ್ಥ್ಯಗಳಿರುತ್ತವೆ. ಉದಾಹರಣೆಗೆ ಅತಿಮನಸ್ಸನ್ನು ಕುರಿತು ನೀವು ಮನಸ್ಸಿನಲ್ಲಿ ಒಂದು ಅಮೂರ್ತ ವಿಚಾರವನ್ನು ರೂಪಿಸುತ್ತೀರಿ. ನೀವು ಅತಿಮನಸ್ಸಿನತ್ತ ಬಂದಾಗ ಅದು ಅಮೂರ್ತವಾದದ್ದಲ್ಲವೇ ಅಲ್ಲ ಎಂಬುದನ್ನು ಕಂಡುಕೊಳ್ಳುತ್ತೀರಿ. ಅದು ಭೌತದ್ರವ್ಯಕ್ಕಿಂತ ಹೆಚ್ಚು ಗಾಢವಾದ, ಮೂರ್ತತೆಯಲ್ಲಿ ಪ್ರಚಂಡವಾದ ಏನೋ ಒಂದು. ಆ ಕಾರಣದಿಂದಾಗಿಯೇ ನಾನು ಅದನ್ನು ನಿಜವಾದ – ದೈವೀ ವಿಚಾರ ಎಂದು ಕರೆದಿದ್ದೇನೆ, ಅಮೂರ್ತ ವಿಚಾರವೆಂದು ಹೇಳಿಲ್ಲ. ಆ ಅರ್ಥದಲ್ಲಿ ದೇವರಿಗಿಂತ ಹೆಚ್ಚು ಮೂರ್ತಸ್ವರೂಪದ್ದಾದ ನೈಜವಾದ ಬೇರಾವುದೂ ಇಲ್ಲ. ನಾವು ಪರಿಶುದ್ಧ ಮನಸ್ಸಿನ ಸ್ತರದ ಮೇಲೆ ಇದ್ದಾಗಲೂ ಕೂಡ ಮನಸ್ಸು ಹೆಚ್ಚು ಮೂರ್ತರೂಪದ್ದು ಹಾಗೂ ನಿಜವಾದದ್ದು ಎಂಬುದನ್ನು ಕಂಡುಕೊಳ್ಳುತ್ತೇವೆ. ಆದರೆ ನಾವು ಭೌತಿಕ ಸ್ತರದ ಮೇಲೆ ಇರುವುದರಿಂದ ಯಾವಾಗಲೂ ಮನಸ್ಸು ಹೆಚ್ಚು ಅಮೂರ್ತವಾದದ್ದು ಎಂದು ಯೋಚಿಸುತ್ತೇವೆ. ಅತಿಮನಸ್ಸಿನ ಮುಂದೆ ಭೌತದ್ರವ್ಯ ನೆರಳಿನಂತೆ ಕುಗ್ಗಿಹೋಗುತ್ತದೆ!

*ಪ್ರಶ್ನೆ : ಆ ಮೂರ್ತತೆ ಹೇಗಿರುತ್ತದೆ?*

**ಶ್ರೀ ಅ :** ಘನತ್ವದ ಅರ್ಥದಲ್ಲಿ ಒಂದು ಮೊತ್ತವಾಗಿರುತ್ತದೆ. ಬಹುಶಃ ಅದನ್ನೇ ವೇದ: "ಅಗ್ನಿ ಪ್ರಕಾಶವನ್ನು ಹಿಗ್ಗಿಸುವವನು, ದೇಹಕ್ಕೆ ಮೂರ್ತತೆಯನ್ನು ಕೊಡುವವನು" ಎಂಬ ಅರ್ಥದಲ್ಲಿ ಹೇಳಿದೆ. ಅತಿಮನಸ್ಸು ವಜ್ರಕ್ಕಿಂತ ಗಟ್ಟಿಯಾಗಿದೆ ಮತ್ತು ಆದಾಗ್ಯೂ ಹವೆಗಿಂತ ಹೆಚ್ಚು ದ್ರವಸ್ವರೂಪದ್ದಾಗಿದೆ ಎಂದು ನೀವು ಹೇಳಬಹುದು.

**ಸಾಯಂಕಾಲದ ಮಾತುಕತೆಗಳು: ಎ.ಬಿ. ಪುರಾಣಿಯೊಂದಿಗೆ, – ಶ್ರೀ ಅರವಿಂದರು**
**15–8–1923, ಪು. 291**

*

**ಆಧ್ಯಾತ್ಮ ರಹಸ್ಯ ಜ್ಞಾನವಿದ್ದುದರ ಪ್ರಾಂತ**

ಆಧ್ಯಾತ್ಮ ರಹಸ್ಯ ಜ್ಞಾನ (gnostic) – ಅದರರ್ಥ ದೈವೀ ಜ್ಞಾನ, ಆದರೆ ನಿಜವಾದ ಜ್ಞಾನ ಅದು ಅತಿಮಾನಸ ಪ್ರಾಂತಗಳ ಜ್ಞಾನದ ಮುಖ.

**CWM, 6/93 – ಶ್ರೀಮಾತೆಯವರು**

*

ನಿಮಗೆ ಸಮಾಧಾನ ನೀಡುವುದಕ್ಕಾಗಿ ನಾನು ಹೇಳಬಹುದಾದುದು ಹೀಗಿದೆ: ನೀವು ಪೃಥ್ವಿಯ ಮೇಲಿರುವುದರ ವಾಸ್ತವತೆಯಿಂದಾಗಿ ನೀವು ಒಳಗೆ ತೆಗೆದುಕೊಳ್ಳುವ ಪ್ರತಿಯೊಂದು ಉಸಿರಿನೊಂದಿಗೆ ಈ ಹೊಸ ಅತಿಮಾನಸ ದ್ರವ್ಯವನ್ನು ಉಸಿರಾಡಿಸುತ್ತೀರಿ, ನಿಮಗೆ ಇದರ ಬಗ್ಗೆ ಅರಿವಿರಲಿ. ಇಲ್ಲವೆ ಇರದೆ ಇರಲಿ, ನಿಮಗೆ ಬೇಕಾಗಿರಲಿ ಇಲ್ಲವೆ ಬೇಡಾಗಿರಲಿ ಅದು ಈಗ ಪೃಥ್ವಿಯ ವಾತಾವರಣದಲ್ಲಿ ಹರಡಿಕೊಳ್ಳುತ್ತಿದೆ ಮತ್ತು ನೀವು ನಿರ್ಧಾರಕ ಹೆಜ್ಜೆ ಇರಿಸಿದ ಕೂಡಲೆ ನಿಮ್ಮಲ್ಲಿ ಒಮ್ಮೆಗೆ ಪ್ರಕಟವಾಗಲಿರುವ ವಿಷಯಗಳನ್ನು ಅದು ತಯಾರು ಮಾಡುತ್ತಿದೆ.

**CWM, 9/337 – ಶ್ರೀಮಾತೆ**

*



ದೈವೀ ಚಲನೆಗಳನ್ನು ಅರ್ಥಮಾಡಿಕೊಳ್ಳಲು ಮನುಷ್ಯ ದೈವೀ ಪ್ರಜ್ಞೆಯಲ್ಲಿ ಪ್ರವೇಶಿಸಬೇಕು, ಅಲ್ಲಿಯವರೆಗೆ ನಂಬಿಕೆ ಹಾಗೂ ಶರಣಾಗತಿ ಇವಿರುವ ಮನೋಭಾವ ಹೊಂದಿರುವುದು ಸರಿಯಾದ ರೀತಿ. ತನ್ನ ಪರಿಮಾಣ (measures)ಗಳಾಚೆಗೆ ಇರುವುದೆಲ್ಲವನ್ನು ಕುರಿತು ಮನಸ್ಸು ಹೇಗೆ ತೀರ್ಮಾನಕ್ಕೆ ಬರಬಲ್ಲದು?

**CWSA, 31/5** – ಶ್ರೀ ಅರವಿಂದರು

*

## ಕಳೆದು ಹೋದ ದೈವೀ ಸೂರ್ಯ

### ಮರೆಮಾಡಿ ಇರಿಸಿದ್ದ ದೈವೀ ಸಂಪತ್ತು

ರಾತ್ರಿ, ಸ್ಪಷ್ಟವಾಗಿ, ಆಂತರಿಕ ಅಂಧಕಾರವೊಂದರ ಪ್ರತೀಕ, ಅರುಣೋದಯದ ಆಗಮನದಿಂದ ದೈವೀ ಸತ್ಯಗಳನ್ನು ಅಂಧಕಾರದೊಳಗಿಂದ ಗೆದ್ದುಕೊಳ್ಳಲಾಗುತ್ತದೆ. ಇದು ಮಬ್ಬಿನಲ್ಲಿ ಕಳೆದು ಹೋಗಿದ್ದ ಸೂರ್ಯ ಮೇಲೆದ್ದು ಬರುವುದಾಗಿದೆ. – ದೇವರುಗಳು ಹಾಗೂ ಆಂಗೀರಸ ಋಷಿಗಳು ಮರಳಿ ದೊರಕಿಸಿದ ಸೂರ್ಯನ ಪರಿಚಿತ ಆಕಾರ ಇದಾಗಿದೆ – ದೈವೀ ಸತ್ಯದ ಸೂರ್ಯ, ಮತ್ತು ಅದು ಈಗ ತನ್ನ ಅಗ್ನಿಯ ನಾಲಿಗೆಯನ್ನು ಸುವರ್ಣ ವರ್ಣದ ದೈವೀ ಪ್ರಕಾಶದತ್ತ ಹೊರಚಾಚುತ್ತದೆ:

– ಏಕೆಂದರೆ ಹಿರಣ್ಯ, ದೈವೀ ಸತ್ಯದ ಸುವರ್ಣ, ಅದು ಉಚ್ಚತರ ಪ್ರಕಾಶದ ಮೂರ್ತರೂಪದ ಸಂಕೇತ, ಮತ್ತು ಈ ಸಂಪತ್ತಿಗಾಗಿ ವೈದಿಕ ಋಷಿಗಳು ದೇವರ ಬಳಿ ಪ್ರಾರ್ಥನೆ ಮಾಡುತ್ತಾರೆ, ಬಂಗಾರದ ನಾಣ್ಯಕ್ಕಾಗಿ ಅಲ್ಲ. ಈ ಆಂತರಿಕ ಮಬ್ಬುತನದಿಂದ ಜ್ಞಾನೋದಯದವರೆಗೆ ಆಗುವ ಈ ಶ್ರೇಷ್ಠತರ ಬದಲಾವಣೆಯನ್ನು ಅಶ್ವಿನಿ ದೇವತೆಗಳು ಪರಿಣಾಮಕಾರಿ ಆಗುವ ರೀತಿಯಲ್ಲಿ ಮಾಡುತ್ತಾರೆ: ಈ ದೇವತೆಗಳು ಮನಸ್ಸಿನ ಮತ್ತು ಪ್ರಾಣಿಕ ಸಾಮರ್ಥ್ಯಗಳನ್ನು ಕುರಿತು ಸಂತೋಷಕರ ಊರ್ಧ್ವಮುಖ ಕ್ರಿಯೆ ಕೈಕೊಳ್ಳುವುದರ ಪ್ರಭುಗಳು, ಅವರು ಅಮರ ಆನಂದದ ಮಧುವನ್ನು ಮನಸ್ಸು ಹಾಗೂ ದೇಹಗಳಲ್ಲಿ ಸುರಿಯುವುದರ ಮೂಲಕ ಆ ಬದಲಾವಣೆಯಾಗುವಂತೆ ಮಾಡುತ್ತಾರೆ, ದೇಹ, ಮನಸ್ಸು ಆ ಮಧುವನ್ನು ಕುಡಿದಿರುತ್ತವೆ; ಅಭಿವ್ಯಕ್ತಿಕಾರಕ ದೈವೀ ಶಬ್ದವನ್ನು ಅವರು ಮಾನಸೀಕರಣ ಮಾಡುತ್ತಾರೆ, ಈ ಅಂಧಕಾರದ ಆಚೆಗಿರುವ ಪರಿಶುದ್ಧ ಮನಸ್ಸಿನ ಸ್ವರ್ಗದತ್ತ ನಮ್ಮನ್ನು ಕರೆದೊಯ್ಯುತ್ತಾರೆ ಮತ್ತು ಅಲ್ಲಿ ದೈವೀ ಯೋಚನೆಯ ಮೂಲಕ ದಿವ್ಯಾನಂದದ ಸಾಮರ್ಥ್ಯಗಳು ಕಾರ್ಯನಿರತ–ವಾಗುವಂತೆ ಮಾಡುತ್ತಾರೆ. ಆದರೆ ಸ್ವರ್ಗದ ಜಲಗಳ ಮೇಲೆ ಕೂಡ ದಾಟಿ ಹೋಗುತ್ತಾರೆ, ಏಕೆಂದರೆ ಸೋಮನ ಶಕ್ತಿ ಎಲ್ಲ ಮಾನಸಿಕ ರಚನೆಗಳು ಕರಗಿ ಹೋಗುವಂತೆ ಮಾಡುತ್ತದೆ. ಮತ್ತು ಅವರು ಈ ಪರದೆಯನ್ನು ಕೂಡ ಬದಿಗೆ ಸರಿಸುತ್ತಾರೆ, ಅವರು ದೈವೀ ಮನಸ್ಸಿನಾಚೆಗೆ ಸಾಗಿ ಹೋಗುತ್ತಾರೆ ಮತ್ತು ಕೊನೆಯ ಸಿದ್ಧಿಸಿಕೊಳ್ಳುವಿಕೆಯನ್ನು ನದಿಗಳನ್ನು ದಾಟಿ ಹೋಗುವುದು ಎಂದು ಹಾಗೂ ಪರಿಶುದ್ಧ ಮನಸ್ಸಿನ ಸ್ವರ್ಗದ ಮೂಲಕ ಹಾದು ಹೋಗುವ ಮಾರ್ಗವು ಆಚೆಯ ಬದಿಗೆ ದೈವೀ ಸತ್ಯದ ಮಾರ್ಗದ ಮೂಲಕ ಪ್ರಯಾಣ ಎಂದು ವರ್ಣಿಸಲಾಗಿದೆ. ಅತ್ಯುಚ್ಚ ಹಾಗೂ ಪರಮೋಚ್ಚ(ಪರಮಾ ಪರಾವತ)ವಾದದ್ದನ್ನು ತಲುಪುವವರೆಗೆ ಶ್ರೇಷ್ಠ ಮಾನವ – ಪ್ರಯಾಣದಿಂದ ನಾವು ವಿಶ್ರಮಿಸುವುದಿಲ್ಲ.

**CWSA, 15/130** **– ಶ್ರೀ ಅರವಿಂದರು**

*

**ಅದಿತಿಯ ಎಂಟನೆಯ ಮಗ**

... ಸೂರ್ಯ ಸೃಷ್ಟಿಕರ್ತನಾಗಿದ್ದರೆ, ವೇದ ಹೇಳುವ ಹಾಗೆ ಚಲಿಸುವುದೆಲ್ಲದರ ಮತ್ತು ಸ್ಥಿರವಾಗಿರುವುದರ ಆತ್ಮವಾಗಿದ್ದರೆ ಮತ್ತು ಈ ಸೂರ್ಯ ದೈವಿಕವಾಗಿದ್ದರೆ, "ಸ್ವರ್ಗವನ್ನು ಮೇಲೆತ್ತಿ ಹಿಡಿಯುವ ನಿಯಮದಲ್ಲಿ

ವಿಸ್ತಾರವಾಗಿ ಪ್ರಜ್ವಲಿಸುವ ದೈವೀ ಸತ್ಯ"ವಾಗಿದ್ದರೆ, ಆಗ ಎಲ್ಲ ಲೋಕಗಳು ಆ ದೈವೀ ಸತ್ಯದ ನಿಯಮವನ್ನು ಪ್ರಕಟಿಸಬೇಕು ಮತ್ತು ಅದೇ ಸಂಖ್ಯೆಯಲ್ಲಿರುವ ಸ್ವರ್ಗಗಳಾಗಬೇಕು. ಹಾಗಾದರೆ ನಮ್ಮ ಮರ್ತ್ಯ ಅಸ್ತಿತ್ವದ ಈ ಮಿಥ್ಯೆ, ಪಾಪ, ಮೃತ್ಯು ವೇದನೆಗಳೆಲ್ಲ ಎಲ್ಲಿಂದ ಬರುತ್ತವೆ? ವಿಶ್ವವ್ಯಾಪಿ ಅದಿತಿಯ ದೇಹದಿಂದ ಜನಿಸಿದ ಎಂಟು ಸೂರ್ಯರಿದ್ದಾರೆ, ಏಳು ಸೂರ್ಯರೊಂದಿಗೆ ಅವಳು ದೇವತೆಗಳತ್ತ ಚಲಿಸುತ್ತಾಳೆ, ಎಂಟನೆಯವ ಮರ್ತ್ಯ ಸೃಷ್ಟಿಯ ಮಾರ್ತಾಂಡ, ಅವನನ್ನು ಅವಳು ತನ್ನಿಂದ ದೂರ ಎಸೆಯುತ್ತಾಳೆ; ಏಳು ಸೂರ್ಯರೊಂದಿಗೆ ಪರಮೋಚ್ಚ ಜೀವನದತ್ತ ಚಲಿಸುತ್ತಾಳೆ, ಆ ಜೀವನ ದೇವತೆಗಳ ಮೂಲ ಯುಗಕ್ಕೆ ಸೇರಿದ್ದಾಗಿರುತ್ತದೆ, ಆದರೆ ಮರ್ತ್ಯ ಜನ್ಮ ಹಾಗೂ ಮೃತ್ಯು ಇವುಗಳ ಮೇಲೆ ಅಧ್ಯಕ್ಷತೆ ವಹಿಸಲು ಎಸೆಯಲಾಗಿದ್ದ ಅಚೇತನದಿಂದ ಮಾರ್ತಾಂಡನನ್ನು ಮರಳಿ ಹೊರಗೆ ತರಲಾಗುತ್ತದೆ.

ಎಂಟನೆಯ ಸೂರ್ಯನಾದ ಮಾರ್ತಾಂಡ ಕಪ್ಪಾದವನು, ಕಳೆದು ಹೋದವನು, ಅಡಗಿಕೊಂಡಿರುವವನು ಆಗಿದ್ದಾನೆ. ದೈತ್ಯರು ಅವನನ್ನು ಹಿಡಿದುಕೊಂಡು ಹೋಗಿ ಅಂಧಕಾರವಿರುವ ಗುಹೆಯಲ್ಲಿ ಅಡಗಿಸಿಟ್ಟಿದ್ದಾರೆ ಮತ್ತು ಅವನನ್ನು ಅಲ್ಲಿಂದ ದೇವತೆಗಳು ಹಾಗೂ ಋಷಿಗಳು ಯಜ್ಞದ ಮೂಲಕ ಭವ್ಯತೆ ಹಾಗೂ ಸ್ವಾತಂತ್ರ್ಯ ಇರುವಲ್ಲಿ ಬಿಡುಗಡೆ ಮಾಡಬೇಕು. ಕಡಿಮೆ ಅಲಂಕಾರಿಕ ಭಾಷೆಯಲ್ಲಿ ಹೇಳುವುದಾದರೆ ಮರ್ತ್ಯ ಜೀವನವು ದಮನಕ್ಕೊಳಗಾದ, ಅಡಗಿದ, ಮುಖವಾಡ ಧರಿಸಿದ ದೈವೀ ಸತ್ಯದ ಆಡಳಿತಕ್ಕೊಳಗಾಗಿದೆ; ದೈವೀ ದೃಷ್ಟಾರ–ಸಂಕಲ್ಪ(seer-will)ವಾದ ಅಗ್ನಿ ಮೊದಲು ಪೃಥ್ವಿಯ ಮೇಲೆ ಮರೆಯಲ್ಲಿದ್ದುಕೊಂಡು ಇಲ್ಲವೆ ಮಾನವ ಭಾವೋದ್ರೇಕದ ಹಾಗೂ ಸ್ವ–ಸಂಕಲ್ಪದ ಹೊಗೆಯಿಂದ ಮಬ್ಬಾಗಿ ಕಾರ್ಯ ಕೈಕೊಳ್ಳುವ ಹಾಗೆ, ದೈವೀ ಜ್ಞಾನದ ಸೂರ್ಯ ಮರೆಯಲ್ಲಿರುತ್ತಾನೆ, ರಾತ್ರಿ ಮತ್ತು ಅಂಧಕಾರಗಳಲ್ಲಿ ಅಪ್ರಾಪ್ಯ(unattainable) ನಾಗಿರುತ್ತಾನೆ, ಸರ್ವಸಾಧಾರಣ ಮಾನವ ಅಸ್ತಿತ್ವದ ಅಜ್ಞಾನ ಹಾಗೂ ದೋಷಗಳಿಂದ ಆವೃತನಾಗಿರುತ್ತಾನೆ, ಅವುಗಳ ಒಳಗೆ ಸೇರಿಕೊಂಡಿರುತ್ತಾನೆ. ದೃಷ್ಟಾರರು ತಮ್ಮ ಯೋಚನೆಯಲ್ಲಿರುವ ಸತ್ಯದ ಸಾಮರ್ಥ್ಯದಿಂದ ಅಂಧಕಾರದಲ್ಲಿ ಒರಗಿಕೊಂಡ ಈ ಸೂರ್ಯನನ್ನು ಶೋಧಿಸುತ್ತಾರೆ, ಈ ಜ್ಞಾನವನ್ನು, ಅವಿಭಜಿತ ಮತ್ತು ಎಲ್ಲವನ್ನೂ ಅಪ್ಪಿಕೊಳ್ಳುವ ಸಾಮರ್ಥ್ಯವನ್ನು, ನಮ್ಮ ಸತ್ತೆಯ ಅವಚೇತನದಲ್ಲಿ ಮರೆಯಲ್ಲಿರುವ ದೇವತೆಗಳ ಕಣ್ಣನ್ನು ಮುಕ್ತಗೊಳಿಸುತ್ತಾರೆ, ಆ

ಸೂರ್ಯನ ತೇಜಸ್ಸುಗಳನ್ನು ಬಿಡುಗಡೆ ಮಾಡುತ್ತಾರೆ, ಅವರು ದೈವೀ ಅರುಣೋದಯವನ್ನು ಸೃಷ್ಟಿಸುತ್ತಾರೆ. ದೈವೀ ಮನಸ್ಸಿನ ಸಾಮರ್ಥ್ಯವಾದ ಇಂದ್ರ, ದೃಷ್ಟಾರ–ಸಂಕಲ್ಪವಾದ ಅಗ್ನಿ, ಸ್ಫೂರ್ತಿಗೊಂಡ ಶಬ್ದದ ದೈವೀ ಪ್ರಭು ಬೃಹಸ್ಪತಿ, ಮನುಷ್ಯನಲ್ಲಿ ಜನ್ಮ ತಾಳಿದ ಅಮರ ದಿವ್ಯಾನಂದದ ಸೋಮ ಇವರೆಲ್ಲರು ಮನಸ್ಸು, ಸಂಕಲ್ಪ ಇತ್ಯಾದಿಗಳಿಗೆ ಪರ್ವತಗಳ ಬಲವತ್ತರವಾದ ಸ್ಥಳಗಳನ್ನು ಚೂರು ಚೂರು ಮಾಡಲು, ದೈತ್ಯರ ಕೃತ್ರಿಮ ಅಡೆತಡೆಗಳನ್ನು ಮುರಿದು ಹಾಕಲು ಸಹಾಯ ಮಾಡುತ್ತಾರೆ, ಮತ್ತು ಈ ಸೂರ್ಯ ನಮ್ಮ ಸ್ವರ್ಗಗಳಲ್ಲಿ ತೇಜಃಪೂರ್ಣನಾಗಿ ಮೇಲೇರಿ ಹೋಗುತ್ತಾನೆ. ಮೇಲಕ್ಕೇರಿ ಹೋದ ಅವನು ಅತಿಮಾನಸ ದೈವೀ ಸತ್ಯದ ಮೇಲೇರಿ ಹೋಗುತ್ತಾನೆ. "ದೇವತೆಗಳು ಅವನಿಗೆ ಮಾಡಿಕೊಟ್ಟ ಮಾರ್ಗದ ಮೇಲೆ ತನ್ನ ಗುರಿಯನ್ನು ಕುರಿತು ಗಿಡುಗ ಪಕ್ಷಿ ಅಂಟಿಕೊಳ್ಳುವ ರೀತಿಯಲ್ಲಿ ಸಾಗಿ ಹೋಗುತ್ತಾನೆ." ಅವನು ಕೊನೆಯ ಉಚ್ಚತರ ಅಸ್ತಿತ್ವದ ಪ್ರಕಾಶಮಯ ಸಾಗರದ ಮೇಲೆ ಏಳು ಥಳಥಳಿಸುವ ಕುದುರೆಗಳೊಂದಿಗೆ ಆರೋಹಣ ಮಾಡುತ್ತಾನೆ, ದೃಷ್ಟಾರರು, ಹಡಗಿನಲ್ಲಿ ಅವನನ್ನು ಕರೆದುಕೊಂಡು ಹೋಗುವ ಹಾಗೆ, ಮೇಲ್ಗಡೆಗೆ ಕರೆದೊಯ್ಯುತ್ತಾರೆ. ಬಹುಶಃ ಆ ಸೂರ್ಯನೇ ಸ್ವತಃ ಸುವರ್ಣ ವರ್ಣದ ಹಡಗಾಗಿರುತ್ತಾನೆ, ಅದರಲ್ಲಿ ದೈವೀ ಹೆಚ್ಚಿಸುವವ ಪೂಷನ್ ಜನರನ್ನು ಅನಿಷ್ಟ, ಅಂಧಕಾರ ಮತ್ತು ಪಾಪಗಳಾಚೆಗೆ ದೈವೀ ಸತ್ಯ ಹಾಗೂ ಅಮರತ್ವವಿರುವತ್ತ ಕರೆದೊಯ್ಯುತ್ತಾನೆ.

**CWSA, 15/478** **– ಶ್ರೀ ಅರವಿಂದರು**

*

**ದೈವಿಕವಾಗಿ ಸತ್ಯವಾದದ್ದು, ಸರಿಯಾದದ್ದು ಮತ್ತು ವಿಶಾಲವಾದದ್ದು**

ಈ ದೈವೀ ಸತ್ಯ ದೈವೀ ಸೂರ್ಯನ ಪ್ರಕಾಶ ಹಾಗೂ ದೇಹ. ಅದನ್ನು ದೈವಿಕವಾಗಿ ಸತ್ಯವಾದದ್ದು, ಸರಿಯಾದದ್ದು ಮತ್ತು ವಿಶಾಲವಾದದ್ದು, 'ಸ್ವರ'ದ ಪ್ರಕಾಶಮಯ ಅತಿಮಾನಸದ ಸ್ವರ್ಗ ಎಂದು ವರ್ಣಿಸಲಾಗಿದೆ. – "ವಿಶಾಲ ಸ್ವರ, ಶ್ರೇಷ್ಠ ದೈವೀ ಸತ್ಯ" – ನಮ್ಮ ಸ್ವರ್ಗ ಮತ್ತು ನಮ್ಮ ಪೃಥ್ವಿ ಇವುಗಳಾಚೆಗೆ ಮರೆಯಲ್ಲಿರುವಂತಹದು; ಮತ್ತು ಸೂರ್ಯನೆಂದಾಗಿ ಆ "ದೈವೀ ಸತ್ಯ" ಅಂಧಕಾರದಲ್ಲಿ ತನ್ನನ್ನು ಕಳೆದುಕೊಂಡು ಅವಚೇತನದ ರಹಸ್ಯ ಗುಹೆಯಲ್ಲಿ ವಾಸಿಸುತ್ತದೆ. ಈ ಅಡಗಿಕೊಂಡ ದೈವೀ ಸತ್ಯ ದೈವಿಕವಾಗಿ ವಿಶಾಲವಾದದ್ದು, ಏಕೆಂದರೆ ಅದು ಮುಕ್ತವಾಗಿ ವಾಸಿಸುತ್ತದೆ ಮತ್ತು ಕೇವಲ ಅತಿಮಾನಸ ಸ್ತರದ

ಮೇಲೆ ಪ್ರಕಟವಾಗುತ್ತದೆ, ಅಲ್ಲಿ ಅಸ್ತಿತ್ವ, ಸಂಕಲ್ಪ, ಜ್ಞಾನ, ಸಂತೋಷ ಇವೆಲ್ಲ ಆನಂದ ಪರವಶತೆಯಿರುವ ಸೀಮಾತೀತ ಅನಂತದಲ್ಲಿ ಚಲಿಸುತ್ತವೆ. ನಿಮ್ಮ ಸತ್ತೆಯನ್ನು ರೂಪಿಸುವ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳ ಹಲವಾರು ಗೋಡೆಗಳಿರುವ ಅಸ್ತಿತ್ವದ ಹಾಗೆ ಅವು ಸೀಮಿತವಾಗಿಲ್ಲ, ಸುತ್ತುವರಿಕೆಗೆ ಒಳಗಾಗಿಲ್ಲ. ಅದು ಉಚ್ಚತರ ಸತ್ತೆಯ ವೈಶಾಲ್ಯವಾಗಿದೆ, ಅದರತ್ತ ನಾವು ಆರೋಹಣ ಮಾಡಬೇಕು. ಆರೋಹಣ ಮಾಡುವಾಗ ನಮ್ಮನ್ನು ಸುತ್ತುವರಿಯುವ ಮಾನಸಿಕ ಹಾಗೂ ಭೌತಿಕ ಎಂಬ ಎರಡು ಗಗನಮಂಡಲ (firmament) ಗಳನ್ನು ಮುರಿದುಹಾಕಿ ಹೋಗಬೇಕಾಗುತ್ತದೆ; ಅದರ ಮೇರೆರಹಿತ ವ್ಯಾಪ್ತಿಯಲ್ಲಿ ಮುಕ್ತ ಹಾಗೂ ಭವ್ಯ ಅಸ್ತಿತ್ವವೆಂದು ಅದನ್ನು ವರ್ಣಿಸಲಾಗಿದೆ, ಅದು ಯಾವುದೇ ಅಡೆತಡೆಯಿರದ ಇಲ್ಲವೆ ಸೀಮಿತತೆ ಇರದ ವೈಶಾಲ್ಯವಾಗಿರುತ್ತದೆ, ಅದು ಸೂರ್ಯನ ಪ್ರಕಾಶಮಯ ಹಿಂಡುಗಳ ಭಯ ಮುಕ್ತವಾದ ಹುಲ್ಲುಗಾವಲು, ಅದು ದೈವೀ ಸತ್ಯದ ಆಸನ ಹಾಗೂ ನಿವಾಸ, ದೇವತೆಗಳಿಗೆ ಅವರದೇ ಮನೆ, ಸೌರ ಜಗತ್ತು, ನಿಜವಾದ ಪ್ರಕಾಶವಾಗಿದ್ದು, ಅಲ್ಲಿ ಆತ್ಮಕ್ಕೆ ಭಯವಿರುವುದಿಲ್ಲ, ಅದರ ಅಸ್ತಿತ್ವದ ಭವ್ಯ ಹಾಗೂ ಸಮನಾದ ದಿವ್ಯಾನಂದಕ್ಕೆ ಯಾವುದೇ ಬಗೆಯ ಗಾಯವಾಗುವ ಯಾವ ಸಾಧ್ಯತೆಯೂ ಇರುವುದಿಲ್ಲ. ಈ ಅತಿಮಾನಸ ವೈಶಾಲ್ಯ ಸತ್ತೆಯ ಮೂಲಭೂತ ಸತ್ಯ ಕೂಡ ಆಗಿದೆ, 'ಸತ್ಯಮ್'; ಅದರೊಳಗಿಂದ ಅದರ ಕ್ರಿಯಾಶೀಲ ಸತ್ಯ ಪರಿಪೂರ್ಣ ಮತ್ತು ದೋಷರಹಿತ ಚಲನೆಯಲ್ಲಿ ಸ್ವಾಭಾವಿಕವಾಗಿ ಮತ್ತು ಯಾವುದೇ ಹೋರಾಟವಿಲ್ಲದೆ ಹೊರಹರಿದು ಬರುತ್ತದೆ, ಏಕೆಂದರೆ ಆ ಎತ್ತರಗಳ ಮೇಲೆ ವಿಭಜನೆಯಿರುವುದಿಲ್ಲ, ಪ್ರಜ್ಞೆ ಮತ್ತು ಶಕ್ತಿಗಳ ನಡುವೆ ಕಂದರವಿರುವುದಿಲ್ಲ, ಜ್ಞಾನ ಮತ್ತು ಸಂಕಲ್ಪಗಳ ನಡುವೆ ಅಸಾಮರಸ್ಯ ಇರುವುದಿಲ್ಲ, ಅಲ್ಲಿರುವ ಪ್ರತಿಯೊಂದು ನೇರವಾಗಿರುತ್ತದೆ, ಅಲ್ಲಿ ವಕ್ರತೆ ಕನಿಷ್ಠ ಮಟ್ಟದಲ್ಲೂ ಇರುವುದಿಲ್ಲ. ಆದ್ದರಿಂದ ವೈಶಾಲ್ಯ ಹಾಗೂ ನಿಜವಾದ ಸತ್ತೆ ಇರುವ ಅತಿಮಾನಸ ಸ್ತರ 'ರಿತಮ್' ಎಂದರೆ ವಸ್ತು–ವಿಷಯಗಳ ನಿಜವಾದ ಚಟುವಟಿಕೆಯದೂ ಕೂಡ ಆಗಿರುತ್ತದೆ. ಅದು ಚಲನೆ, ಕ್ರಿಯೆ, ಪ್ರಕಟಣೆ ಇವುಗಳ ಪರಮೋಚ್ಚ ಸತ್ಯ, ಸಂಕಲ್ಪ ಮತ್ತು ಹೃದಯ ಮತ್ತು ಜ್ಞಾನ ಇವುಗಳ ವಿಫಲವಾಗದ ಸತ್ಯ, ಯೋಚನೆ, ಶಬ್ದ ಮತ್ತು ಭಾವನೆ ಇವುಗಳ ಪರಿಪೂರ್ಣ ಸತ್ಯ. ಅದು ಸ್ವಯಂಪ್ರೇರಿತ ಹಕ್ಕು, ಮುಕ್ತ ದೈವೀ ನಿಯಮ, ವಿಭಜಿತ ಮತ್ತು ಪ್ರತ್ಯೇಕಿಸುವ ಪ್ರಜ್ಞೆಯ ಸ್ಪರ್ಶಕ್ಕೊಳಗಾಗದ, ವಸ್ತು–ವಿಷಯಗಳ ಬಗೆಗಿನ ಮೂಲ

ದೈವೀ ವ್ಯವಸ್ಥಿತ ಕ್ರಮ; ಅದರಲ್ಲಿ ನಮ್ಮದು ಕ್ಷುದ್ರ ಅಸ್ತಿತ್ವ, ಅದು ಕೇವಲ ಬಡ, ಭಾಗಶಃ, ತುಂಡಾದ ಮತ್ತು ವಿಕೃತಿಗೊಳಗಾದ ಕೊರೆದಿರಿಸಿರುವಿಕೆ ಹಾಗೂ ವಿಶ್ಲೇಷಣೆ. ವೈದಿಕ ಪೂಜಾ ವಿಧಾನದಲ್ಲಿ ಆ ಸೂರ್ಯ ಹೀಗಿದ್ದ, ಹಿರಿಯರು ಪ್ರಕಾಶದ ಸ್ವರ್ಗ ಮತ್ತು ಜಗತ್ತು ಆಗಿದ್ದ ಅದಿತಿಯ ಮಗ ಸೂರ್ಯನ ದೇಹಕ್ಕಾಗಿ ಅಭೀಪ್ಸೆ ಪಡುತ್ತಿದ್ದರು.

**CWSA, 15/475** **– ಶ್ರೀ ಅರವಿಂದರು**

*

**ವೇದಗಳು ಹಾಗೂ ಅತಿಮಾನಸ ಬದಲಾವಣೆ**

ವೈದಿಕ ಋಷಿಗಳಲ್ಲಿ ಯಾರಾದರೂ ಅತಿಮಾನಸ ಸ್ತರವನ್ನು ಸಿದ್ಧಿಸಿಕೊಂಡಿದ್ದರು ಎಂದು ನಾನು ಹೇಳಲಾರೆ. ಆದರೆ ಅದರತ್ತ ಆರೋಹಣ ಮಾಡುವುದು ಅವರ ಉದ್ದೇಶವಾಗಿತ್ತು. 'ಸ್ವರ' ಸ್ಪಷ್ಟವಾಗಿ, ಅತಿಮಾನಸ ಮತ್ತು ಮಾನವ ಬುದ್ಧಿಮತ್ತೆ ಇವುಗಳ ನಡುವಿರುವ ಜ್ಞಾನೋದಯ ಪಡೆದ ಪ್ರಾಂತಗಳದಾಗಿದೆ, ಸೂರ್ಯನ ಕಿರಣಗಳಿಂದ ಅದು ರೂಪ ತಾಳಿದೆ. ಉಪನಿಷತ್ತುಗಳ ಪ್ರಕಾರ ಸೂರ್ಯನ ಕಿರಣಗಳಲ್ಲಿ ಆರೋಹಣ ಮಾಡಿದವರು ಮರಳಿ ಬರುತ್ತಾರೆ, ಆದರೆ ಸೂರ್ಯನಲ್ಲಿಯೇ ಆರೋಹಣ ಮಾಡಿ ಹೋದವರು ಮರಳಿ ಬರುವುದಿಲ್ಲ. ಅದು ಏಕೆಂದರೆ ಅತಿಮನಸ್ಸಿನತ್ತ ಅರೋಹಣ ಮಾಡುವುದನ್ನು ಕುರಿತು ಆಲೋಚನೆ ಮಾಡಲಾಗಿತ್ತು, ಆದರೆ ಇಲ್ಲಿ ಅತಿಮನಸ್ಸಿನ ಅವರೋಹಣ ಹಾಗೂ ಸಂಘಟನೆ ಕುರಿತು ಯೋಚಿಸಲಾಗಿರಲಿಲ್ಲ.

**CWSA, 29/417** **– ಶ್ರೀ ಅರವಿಂದರು**

*

ಅತಿಮನಸ್ಸು (ಸತ್ಯ–ಪ್ರಜ್ಞೆ, ಋತಚಿತ್) ಕುರಿತ ವಿಚಾರ ಶ್ರೀ ಅರವಿಂದರ ವಿವರಣೆಯ ಪ್ರಕಾರ ಋಗ್ವೇದದಲ್ಲಿ ಹಾಗೂ ಉಪನಿಷತ್ತುಗಳ ಒಂದೆರಡು ಪದಚ್ಛೇದಗಳಲ್ಲಿ ಇದೆ, ಆದರೆ ಉಪನಿಷತ್ತುಗಳಲ್ಲಿ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಪುರುಷರಾಚೆಗಿರುವ ವಿಜ್ಞಾನಮಯ ಪುರುಷನ ಕಲ್ಪನೆಯಲ್ಲಿ ಬೀಜ ರೂಪದಲ್ಲಿದೆ, ಋಗ್ವೇದದಲ್ಲಿ ಆ ವಿಚಾರ ಕೇವಲ ತತ್ವರೂಪದಲ್ಲಿದೆ, ಅದನ್ನು ಅಭಿವೃದ್ಧಿಪಡಿಸಲಾಗಿಲ್ಲ ಮತ್ತು ಅದರ ತತ್ವ ಕೂಡ ಹಿಂದೂ ಸಂಪ್ರದಾಯದಲ್ಲಿ ಮಾಯವಾಗಿದೆ.

ಹಿಂದೂ ಸಂಪ್ರದಾಯಕ್ಕೆ ಹೋಲಿಸಿದರೆ ಈ ವಿಷಯಗಳೇ ಶ್ರೀ ಅರವಿಂದರ ಸಂದೇಶದ ನಾವೀನ್ಯವನ್ನು ರಚಿಸುತ್ತವೆ. – ಜಗತ್ತು ಮಾಯೆಯ ಸೃಷ್ಟಿಯಾಗಲಿ, ಭಗವಂತನ ಲೀಲೆಯಾಗಲಿ ಅಲ್ಲ, ನಾವು ತಪ್ಪಿಸಿಕೊಳ್ಳಲಾಗದ, ಅಜ್ಞಾನದಲ್ಲಿ ಚಕ್ರಗತಿಯಲ್ಲಿ ಜನ್ಮತಾಳುವುದಾಗಲಿ ಅಲ್ಲ ಎಂಬ ವಿಚಾರ, ಆದರೆ ಜಗತ್ತು ಪ್ರಕಟಣೆಯ ಕ್ಷೇತ್ರ, ಅದರಲ್ಲಿ ಆತ್ಮ ಮತ್ತು ಭೌತದ್ರವ್ಯದ ಸ್ವಭಾವ ಇವುಗಳ ಪ್ರಗತಿಪರ ಉತ್ಕ್ರಾಂತಿಯಿದೆ, ಮತ್ತು ಭೌತದ್ರವ್ಯದಿಂದ ಪ್ರಾಣ ಹಾಗೂ ಮನಸ್ಸುಗಳ ಮೂಲಕ ಮನಸ್ಸಿನಾಚೆಗಿರುವುದರತ್ತ ಆ ಉತ್ಕ್ರಾಂತಿಯಿದೆ. ಈ ಉತ್ಕ್ರಾಂತಿ ಜೀವನದಲ್ಲಿ ಸಚ್ಚಿದಾನಂದದ ಸಂಪೂರ್ಣ ಜ್ಞಾನವನ್ನು ತಲುಪುವವರೆಗೆ ನಡೆಯುತ್ತದೆ. ಇದು ಯೋಗದ ಆಧಾರವಾಗಿದೆ ಮತ್ತು ಜೀವನಕ್ಕೆ ಹೊಸ ಅರ್ಥಕೊಡುತ್ತದೆ.

**CWSA, 29/444–45** **– ಶ್ರೀ ಅರವಿಂದರು**

*

**ವೇದಗಳಲ್ಲಿ ಅತಿಮನಸ್ಸು**

**ಪ್ರಶ್ನೆ :** *ವೇದದಲ್ಲಿ ಅತಿಮನಸ್ಸಿನ ಈ ವಿಚಾರದ ಪ್ರಸ್ತಾವನೆ ಇದೆಯೆ?*

**ಶ್ರೀ ಅ :** ಹೌದು, ಅದು ಬಹಳ ಸ್ಪಷ್ಟವಾಗಿದೆ, ಆದಾಗ್ಯೂ ವೈದಿಕ ಋಷಿಗಳು ಮೇಲ್ಗಡೆ ಸಾಗಿ ಹೋಗುವುದರ ಮೇಲೆ ಒತ್ತುಕೊಡುತ್ತಿದ್ದರು – ಆರೋಹಣ ಮಾಡುವುದರತ್ತ – ನಿಮ್ನ ಸ್ವಭಾವದ ಮೇಲೆ ಜಯ ಸಾಧಿಸುವುದರತ್ತ ಮತ್ತು ಅದನ್ನು ಪರಿವರ್ತಿಸುವುದರತ್ತ ಅಷ್ಟೊಂದು ಒತ್ತು ನೀಡುತ್ತಿರಲಿಲ್ಲ.

**Evening Talka with A.B. Purani. p. 300**

*

**ಭಗವಂತ ಮತ್ತು ಅತಿಮನಸ್ಸು**

ಮಾನಸಿಕ ಸ್ತರದಲ್ಲಿ ಮನುಷ್ಯ ಭಗವಂತನೊಡನೆ ಏಕತೆ ಪಡೆಯಬಹುದು. ಭಗವಂತನನ್ನು ಪೃಥ್ವಿಯ ಮೇಲೆ ಪ್ರಕಟಿಸುವುದಕ್ಕೆ ಅತಿಮನಸ್ಸು ಅವಶ್ಯವಾಗಿದೆ.

*

ಭಗವಂತ ಮುಖವಾಡ ಧರಿಸಿ ಇಲ್ಲವೆ ಅರ್ಧ ಪ್ರಕಟನಾಗಿ ಇಲ್ಲವೆ ಪ್ರಕಟವಾಗಲು ಪ್ರಾರಂಭಿಸಿ ಪ್ರಜ್ಞೆಯ ಎಲ್ಲ ಸ್ತರಗಳಲ್ಲಿ ಇರಬಲ್ಲ ಹಾಗೂ

ಇರುವನು. ಅತಿಮಾನಸದಲ್ಲಿ ಅವನು ಯಾವುದೇ ಮುಖವಾಡ ಧರಿಸದೆ, ಪರದೆಯ ಹಿಂದೆ ಉಳಿದುಕೊಳ್ಳದೆ ತನ್ನದೇ ಸ್ವರೂಪದಲ್ಲಿ ಪ್ರಕಟವಾಗಲು ಪ್ರಾರಂಭಿಸುತ್ತಾನೆ.

**CWSA, 28/12)** **– ಶ್ರೀ ಅರವಿಂದರು**

*

**ಅಸ್ತಿತ್ವದ ಎರಡು ಗೋಳಾರ್ಧಗಳು**

ಪ್ರಾಚೀನ ಕಾಲದ ಹಿಂದೂ ಪದ್ಧತಿಯಲ್ಲಿ ಕೇವಲ ಒಂದೇ 'ಸಚ್ಚಿದಾನಂದ' ಎಂಬ ಪರಮೋಚ್ಚ ತ್ರಿತಯೈಕ್ಯ(triune)ದ ಕಲ್ಪನೆಯಿತ್ತು. ಇಲ್ಲವೆ ಮೇಲ್ಗಡೆಗಿರುವುದನ್ನು ಪರಮೋಚ್ಚ ಗೋಳಾರ್ಧ ಎಂದು ಹೇಳಿದರೆ ಅಲ್ಲಿ ಸತ್ ಸ್ತರ, ಚಿತ್ ಸ್ತರ ಮತ್ತು ಆನಂದ ಸ್ತರ ಎಂಬ ಮೂರು ಸ್ತರಗಳಿವೆ; ಅತಿಮನಸ್ಸನ್ನು ನಾಲ್ಕನೆಯ ಸ್ತರವೆಂದು ಅಧಿಕವಾಗಿ ಸೇರಿಸಬಹುದು, ಏಕೆಂದರೆ ಅದು ಉಳಿದ ಮೂರರ ಮೇಲೆಳೆದುಕೊಂಡು ಹೋಗುತ್ತದೆ ಮತ್ತು ಮೇಲ್ಗಡೆಯ ಗೋಳಾರ್ಧಕ್ಕೆ ಸೇರಿರುತ್ತದೆ. ಹಿಂದೂ ಪದ್ಧತಿ ಪ್ರಜ್ಞೆಯ ಎರಡು ಬಹಳ ಭಿನ್ನ ಸಾಮರ್ಥ್ಯಗಳನ್ನು, ಸ್ತರಗಳನ್ನು ಗುರುತಿಸಿರಲಿಲ್ಲ, ಒಂದನ್ನು ನಾವು ಅಧಿಮನಸ್ಸು(overmind) ಎಂದು, ಇನ್ನೊಂದನ್ನು ಅತಿಮನಸ್ಸು ಇಲ್ಲವೆ ದೈವೀ ಆಧ್ಯಾತ್ಮಿಕ ರಹಸ್ಯ ಜ್ಞಾನ ಎಂದು ಕರೆಯಬಹುದು. ಆ ಕಾರಣದಿಂದಾಗಿಯೇ ಅವರು ಮಾಯೆಯನ್ನು ಕುರಿತು (ಅಧಿಮನಸ್ಸಿನ ಶಕ್ತಿ ಇಲ್ಲವೆ ವಿದ್ಯಾ, ಅವಿದ್ಯಾ) ಗೊಂದಲಕ್ಕೀಡಾದರು. ಮತ್ತು ಅದನ್ನು ಪರಮೋಚ್ಚ ಸೃಜನಾತ್ಮಕ ಶಕ್ತಿ ಎಂದು ಭಾವಿಸಿದರು. ಹೀಗೆ ಇನ್ನೂ ಅರ್ಧ ಪ್ರಕಾಶಿತವಾದದ್ದರ ಹತ್ತಿರ ತಡೆದು ನಿಂತದ್ದರಿಂದ ಅವರು ಪರಿವರ್ತನೆಯ ರಹಸ್ಯವನ್ನು ಕಳೆದುಕೊಂಡರು. ಹಾಗಿದ್ದಾಗ್ಯೂ ವೈಷ್ಣವರು ಮತ್ತು ತಾಂತ್ರಿಕ ಯೋಗಿಗಳು ಅದನ್ನು ಮತ್ತೊಮ್ಮೆ ಕಂಡುಕೊಳ್ಳಲು ತಡಕಾಡಿದರು ಮತ್ತು ಕೆಲವೊಮ್ಮೆ ಯಶಸ್ಸಿನ ಅಂಚಿನಲ್ಲಿದ್ದರು. ಉಳಿದವರಿಗೆ ಕ್ರಿಯಾಶೀಲ ದೈವೀ ಸತ್ಯವನ್ನು ಶೋಧಿಸುವುದರಲ್ಲಿ ಇದು ಎಲ್ಲ ಪ್ರಯತ್ನಗಳಲ್ಲಿ ಎಡುವುವಂತೆ ಮಾಡುವ ಅಡೆತಡೆಯಾಗಿತ್ತು. ಅವರೋಹಣ ಮಾಡುವ ಅಧಿಮಾನಸದ ಪ್ರಭೆಗಳ ಬಗ್ಗೆ ಭಾವನೆ ತಂದುಕೊಂಡು ಅದೇ ನಿಜವಾದ ಜ್ಞಾನೋದಯ, ರಹಸ್ಯ ಆಧ್ಯಾತ್ಮ ಜ್ಞಾನ ಎಂದು ಕಲ್ಪನೆ ಮಾಡಿಕೊಳ್ಳದೆ ಇದ್ದವರ ಬಗ್ಗೆ ನನಗೆ ತಿಳಿದುಬಂದಿಲ್ಲ, – ಪರಿಣಾಮವಾಗಿ ಅವರು ಅಲ್ಲಿಗೇ ತಡೆದು ನಿಂತುಕೊಂಡರು, ಮುಂದೆ ಸಾಗಿ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ ಇಲ್ಲವೆ ಇದೂ ಕೂಡ

ಮಾಯೆ ಇಲ್ಲವೆ ಲೀಲೆ ಎಂದು ತೀರ್ಮಾನಿಸಿದರು, ಕೈಕೊಳ್ಳಬೇಕಾಗಿದ್ದ ಒಂದು ವಿಷಯವೆಂದರೆ ಅದರಾಚೆಗೆ ಪರಮೋಚ್ಚನ ಅಚಲ ಮತ್ತು ನಿಷ್ಕ್ರಿಯ ನಿಶ್ಚಲ ನೀರವತೆಯತ್ತ ತಲುಪಬೇಕು ಎಂಬ ಭಾವನೆ ತಂದುಕೊಳ್ಳುವುದಾಗಿತ್ತು.

**CWSA, 28/83** – ಶ್ರೀ ಅರವಿಂದರು

*

**ಪುರಾಣದ ಏಳು ಲೋಕಗಳು ಮತ್ತು ಅತಿಮಾನಸ ಕೊಂಡಿ**

ವೇದವನ್ನು ಅರ್ಥಮಾಡಿಕೊಳ್ಳಲು ನಾವು ವೈದಿಕ ಸಂಪಾದಿತ್ವ (parallelism)ವನ್ನು ಹಿಡಿದುಕೊಳ್ಳಬೇಕು ಮತ್ತು ಅದು ಕರೆದೊಯ್ಯುವ ವಿಶ್ವವ್ಯಾಪಿ ಮನ್ನಡೆಯ ಹಂತಗಳ ಭೇದ ಗುರುತಿಸಬೇಕು. ನಂತರದ ಪೌರಾಣಿಕ ಸಂಕೇತಗಳ ಹಿಂದಿರುವ ಅದೇ ಪದ್ಧತಿಯನ್ನು ನಾವು ಮರುಶೋಧಿಸುತ್ತೇವೆ ಮತ್ತು ಅಲ್ಲಿಂದ ಅದರ ಪಟ್ಟಿಮಾಡಿದ ಸರಣಿಯನ್ನು ಬಹಳ ಸರಳ ರೀತಿಯಲ್ಲಿ ಹಾಗೂ ಸ್ಪಷ್ಟವಾಗಿ ಊಹಿಸಬಹುದು. ಏಕೆಂದರೆ ಅಲ್ಲಿ ಅಸ್ತಿತ್ವದ ಏಳು ತತ್ವಗಳಿವೆ, ಅವುಗಳಿಗೆ ಅನುಗುಣವಾಗಿ ಸಾಕಷ್ಟು ನಿಖರತೆಯಿಂದಿರುವ ಏಳು ಪೌರಾಣಿಕ ಲೋಕಗಳಿವೆ, ಹೀಗೆ:–

ತತ್ವಲೋಕ

1. ಶುದ್ಧ ಅಸ್ತಿತ್ವ – ಸತ್. (ಸತ್ಯ ಲೋಕ) ಸತ್ತೆಯ ಅತ್ಯುಚ್ಚ ಸತ್ಯವಿರುವ ಲೋಕ.
2. ಶುದ್ಧ ಪ್ರಜ್ಞೆ – (ತಪೋ ಲೋಕ) ಅನಂತ ಸಂಕಲ್ಪ ಇಲ್ಲವೆ ಪ್ರಜ್ಞೆಯ ಶಕ್ತಿ ಹೊಂದಿರುವಂತಹ ಲೋಕ.
3. ಶುದ್ಧ ದಿವ್ಯಾನಂದ – ಆನಂದ. ಅಸ್ತಿತ್ವದ ಸೃಷ್ಟ್ಯಾತ್ಮಕ ದಿವ್ಯಾನಂದದ ಲೋಕ (ಜ್ಞಾನ ಲೋಕ)
4. ಜ್ಞಾನ ಇಲ್ಲವೆ ದೈವೀ ಸತ್ಯ – ವೈಶಾಲ್ಯದ ವಿಜ್ಞಾನ ಲೋಕ (ಮಹರ್ಲೋಕ).
5. ಮನಸ್ಸು – ಪ್ರಕಾಶದ ಲೋಕ (ಸ್ವರ).
6. ಪ್ರಾಣ (ನರ ಮಂಡಲದ ಸತ್ತೆ) ಸಂಭೂತಿಯ ಅನೇಕ ಲೋಕಗಳು (ಭುವರ್).
7. ಭೌತದ್ರವ್ಯ – ಭೌತಿಕ ಜಗತ್ತು (ಭೂರ್)

ಸಾಕಷ್ಟು ಸರಳ ರೀತಿಯಲ್ಲಿರುವ ಪುರಾಣದ ಪದ್ಧತಿ ವೇದದಲ್ಲಿ ಹೆಚ್ಚಿನ ಮಟ್ಟದಲ್ಲಿ ಸಂಕೀರ್ಣವಾಗಿದೆ. ಅಲ್ಲಿ ಅತ್ಯುಚ್ಚ ಮೂರು ಲೋಕಗಳನ್ನು ದೈವೀ ತ್ರಿತಯ ತತ್ವವೆಂದು ಒಟ್ಟಿಗೆ ವರ್ಗೀಕರಣ ಮಾಡಲಾಗಿದೆ – ಏಕೆಂದರೆ ಅವು ಯಾವಾಗಲೂ ಒಟ್ಟಿಗೆ ತ್ರಿತಯ(trinity)ದಲ್ಲಿ ವಾಸಿಸುತ್ತವೆ, ಅವುಗಳ ವ್ಯಾಪ್ತಿ ಅನಂತ, ದಿವ್ಯಾನಂದ ಅವುಗಳ ತಳಹದಿ. ಅವುಗಳಿಗೆ ದೈವೀ ಸತ್ಯದ ವಿಶಾಲ ಪ್ರಾಂತಗಳು ಆಧಾರ ನೀಡುತ್ತವೆ, ಅವುಗಳಲ್ಲಿಂದ ದೈವೀ ಪ್ರಕಾಶ, ಸ್ವರದ ಮೂರು ಸ್ವರ್ಗೀಯ ಲೋಕಗಳಲ್ಲಿರುವ ನಮ್ಮ ಮಾನಸಿಕತೆಯತ್ತ, ತೇಜಸ್ಸನ್ನು ಹೊರಸೂಸುತ್ತದೆ, ಸ್ವರ ಇಂದ್ರನ ಪ್ರಾಂತ. ಕೆಳಗೆ ನಾವು ಜೀವಿಸುವ ತ್ರಿತಯ ಪದ್ಧತಿಯನ್ನು ವರ್ಗೀಕರಿಸಲಾಗಿದೆ.

ಪುರಾಣಗಳಲ್ಲಿರುವ ಹಾಗೆ ನಮಗೆ ಅದೇ ಬಗೆಯ ವಿಶ್ವವ್ಯಾಪಿ ಮುನ್ನಡೆಯ ಹಂತಗಳಿವೆ, ಆದರೆ ಅವುಗಳನ್ನು ಭಿನ್ನ ರೀತಿಯಲ್ಲಿ ಗುಂಪು ಮಾಡಲಾಗಿದೆ. ತಾತ್ವಿಕವಾಗಿ ಏಳು ಲೋಕಗಳು, ವ್ಯಾವಹಾರಿಕವಾಗಿ ಐದು, ಅವುಗಳ ಸರ್ವಸಾಧಾರಣ ಗುಂಪುಗೂಡಿಸುವಿಕೆಯಲ್ಲಿ ಮೂರು.

1. ಪರಮೋಚ್ಚ ಸತ್–ಚಿತ್–ಆನಂದ. ತ್ರಿತಯ ದೈವೀ ಲೋಕಗಳು.
2. ಜೋಡಿಸುವ ಲೋಕವಾದ ಅತಿಮನಸ್ಸು ತನ್ನ ಮೂರು ಪ್ರಕಾಶಮಯ ಸ್ವರ್ಗಗಳಿರುವ ಸ್ವರದಲ್ಲಿ ಪ್ರಕಟವಾದ ದೈವೀ ಸತ್ಯ, ಸರಿಯಾಗಿರುವಿಕೆ ಹಾಗೂ ವೈಶಾಲ್ಯ.
3. ತ್ರಿತಯ (triple) ನಿಮ್ನತರ ಲೋಕ, ಶುದ್ಧ ಮನಸ್ಸಿನ ಸ್ವರ್ಗ (ದ್ಯಾಯುಸ್ (Dyaus), ಮೂರು ಸ್ವರ್ಗಗಳು). ಪ್ರಾಣ–ಶಕ್ತಿ ಮಧ್ಯ ಪ್ರಾಂತ (ಅಂತರಿಕ್ಷ) ಭೌತದ್ರವ್ಯವಿರುವ ಪೃಥ್ವಿ (ಮೂರು ಪೃಥ್ವಿಗಳು).

**CWSA, 15/372–73** **– ಶ್ರೀ ಅರವಿಂದರು**

*

**ಕಾರಣ, ಹಿರಣ್ಯಗರ್ಭ, ವಿರಾಟ್**

ಮೂರು ಸ್ತರಗಳು – (1) ಕಾರಣ (2) ಹಿರಣ್ಯಗರ್ಭ (3) ವಿರಾಟ್

ಹಿರಣ್ಯಗರ್ಭ ಲೋಕವನ್ನು ಸ್ವಪ್ನ ಹಾಗೂ ಸೂಕ್ಷ್ಮ ವಿಷಯಗಳು ಇರುವುದರೊಂದಿಗೆ ಸಮನಾಗಿರಿಸಿರುವ ಪ್ರಜ್ಞೆಯ ಅಧ್ಯಕ್ಷತೆಯಡಿಯಲ್ಲಿನ

ಉಪನಿಷತ್ತಿನ ವಿಜ್ಞಾನ ಇಲ್ಲವೆ ಕಾರಣ ಜಗತ್ತು ಇವುಗಳ ನಡುವಿರುವ ಸಂವಾದಿಯಾಗಿರುವಿಕೆ ಇದು ನಾನು ಅತಿಮನಸ್ಸನ್ನು ಕುರಿತು ಹೇಳಿದ ವಿಷಯಗಳಿಗೆ ಸಮನಾಗಿರುವುದಿಲ್ಲ. ಆದರೆ ಅತಿಮಾನಸ ಸ್ತರವನ್ನು ಸಮೀಪಿಸುತ್ತಿರುವ ಇಲ್ಲವೆ ಅದರಲ್ಲಿ ಪ್ರವೇಶಿಸುತ್ತಿರುವ ಸಾಮಾನ್ಯ ಮಾನವ ಮನಸ್ಸಿಗೆ ಅದು ಸುಷುಪ್ತಿಯ ಸ್ಥಿತಿಯಾಗಿರುತ್ತದೆ ಎಂದು ಹೇಳಬಹುದು. ಅದನ್ನು ಕುರಿತು ಬರೆದವನು ಅತಿಮನಸ್ಸಿನ ಅತ್ಯುಚ್ಚ ಸ್ತರದ ನಿದ್ರೆಯನ್ನು – ಏಕೆಂದರೆ ಪರಿವರ್ತನೆಗೊಳಗಾಗದ ಮನಸ್ಸಿಗೆ ಅತಿಮಾನಸ ಸ್ಥಿತಿಯನ್ನು ಗ್ರಹಿಸಿದಾಗ ಇಲ್ಲವೆ ಸ್ಪರ್ಶಿಸಿದಾಗ ಹಾಗೆ ಕಂಡುಬರುತ್ತದೆ, ಏಕೆಂದರೆ ಅದು ಇಂತಹ ಅತಿ ಪ್ರಜ್ಞೆಯ ನಿದ್ರೆಯಲ್ಲಿ ಅನಿವಾರ್ಯವಾಗಿ ಬಿದ್ದು ಬಿಡುತ್ತದೆ – ಹಾಗಿರಿಸಿದಾಗ ವ್ಯತ್ಯಾಸವನ್ನು ಪರಿಹರಿಸಲಾಗುವುದು.

**ಏಳು ಲೋಕಗಳು**

1. ಭೂ – ಭೌತಿಕ[1]
2. ಭುವಃ – ಪ್ರಾಣಿಕ
3. ಸ್ವರ – ಮಾನಸಿಕ
4. ಮಹತ್ – ವಿಜ್ಞಾನ (ಅತಿಮಾನಸ)
5. ಜನ – ಆನಂದ ಲೋಕ
6. ತಪಃ – ಚಿತ್–ತಪಸ್ಸಿನ ಲೋಕ
7. ಸತ್ಯ – ಸತ್ ಲೋಕ

ಸಚ್ಚಿದಾನಂದ ಲೋಕಗಳು.

**CWSA, 28/38)** **– ಶ್ರೀ ಅರವಿಂದರು**

*

1 ಶ್ರೀ ಅರವಿಂದರೊಡನೆ ಪತ್ರ ವ್ಯವಹಾರ ಮಾಡಿದವನು ಅವರ ಯೋಗ ಪದ್ಧತಿಯಲ್ಲಿ ಭಾರತದ ಯೋಗ ಪದ್ಧತಿಯಲ್ಲಿ ಹೇಳಲಾದ ಸ್ತರಗಳಿಗೆ ಅನುಗುಣವಾದ ಪದಗಳನ್ನು ಕುರಿತು ಪ್ರಶ್ನೆ ಕೇಳಿದ್ದನು. **– ಸಂಪಾದಕರು (AIM)**

## ತೊಡಕಿಹಾಕಿಕೊಂಡ ಅತಿಮನಸ್ಸು

**ಪ್ರಶ್ನೆ :** *ಮಧುರ ಮಾತೆಯವರೆ ತೊಡಗಿಸಿಕೊಂಡ ಅತಿಮನಸ್ಸು ಯಾವುದು?*

**ಶ್ರೀಮಾತೆ :** ಅದು ತೊಡಗಿಸಿಕೊಂಡಿರದ ಅತಿಮನಸ್ಸಿನ ಹಾಗೆಯೇ ಇರುತ್ತದೆ! ಪ್ರತಿಯೊಂದು ಕೇಂದ್ರದಲ್ಲಿ ಭಗವಂತ ಇರದೆ ಹೋದರೆ, ಅವನು ಜಗತ್ತಿನಲ್ಲಿ ಎಂದಿಗೂ ಪ್ರಕಟನಾಗಲಾರ ಎಂದು ಶ್ರೀ ಅರವಿಂದರು ಹೇಳಿದ ಹಾಗೆಯೇ ಅದು ಇದೆ. ಅದರ ಮೂಲದಲ್ಲಿ, ಆಳಾತಿ ಆಳದ ವಿನ್ಯಾಸದಲ್ಲಿ ಸಾರಭೂತವಾಗಿ ಸೃಷ್ಟಿ ದೈವಿಕವಾಗಿದೆ, ಜಗತ್ತು ದೈವಿಕವಾಗಿದೆ ಮತ್ತು ಆ ಕಾರಣದಿಂದಾಗಿಯೇ ಈ ದೈವತ್ವ ಒಂದು ದಿನ ಪ್ರಕಟವಾಗಲಿದೆ, ಸ್ಪರ್ಶವೇದ್ಯವಾಗಲಿದೆ, ಸದ್ಯ ಪರದೆಯ ಹಿಂದಿರಿಸಿದ ಹಾಗೂ ವಿರೂಪಗೊಳಿಸಿದ ಎಲ್ಲದರ ಸ್ಥಾನದಲ್ಲಿ ಅದು ತನ್ನನ್ನು ಪೂರ್ತಿಯಾಗಿ ಅಭಿವ್ಯಕ್ತಗೊಳಿಸಲಿದೆ ಎಂದು ಅವರು ಹೇಳಿದಾಗ ವಿಷಯ ಅದೇ ಆಗಿರುತ್ತದೆ.

ಅದೇ ಅದರ ಸಾರದಲ್ಲಿ ಹಾಗೂ ತಾತ್ವಿಕವಾಗಿ ಹೊಸದಾದದ್ದು. ಈಗಾಗಲೇ ಹಳೆಯ ಜಗತ್ತಿನಲ್ಲಿ ಸುತ್ತುವರಿದಿದೆ, ತೊಡಗಿಸಿಕೊಂಡಿದೆ. ಹಾಗಾಗಿ, ವಾಸ್ತವದಲ್ಲಿ, ಅದು ಒಳಗೆ ಅಲ್ಲಿದೆ, ಅದರ ಆಳಗಳಲ್ಲಿಯೇ ಇದೆ, ಅಡಗಿಕೊಂಡಿದೆ, ಅಗೋಚರ–ವಾಗಿದೆ, ಗ್ರಹಿಕೆಗೆ ಬಾರದಂತಿದೆ, ಅಭಿವ್ಯಕ್ತವಾಗಿಲ್ಲ, ಆದರೆ ಅದು ಸಾರದಲ್ಲಿ ಅಲ್ಲಿದೆ. ಹಾಗಿದ್ದಾಗ್ಯೂ, ಒಂದುವರೆ ವರ್ಷದ ಹಿಂದೆ ಸಂಭವಿಸಿದ ಹಾಗೆ ಪರಮೋಚ್ಚ ಎತ್ತರಗಳಿಂದ ಅತಿಮಾನಸ ಪ್ರಜ್ಞೆ, ಶಕ್ತಿ ಹಾಗೂ ಪ್ರಕಾಶ ನೇರವಾಗಿ ಪ್ರಕಟವಾಗದಿದ್ದರೆ, ಈ ಅತಿಮನಸ್ಸು, ತಾತ್ವಿಕವಾಗಿ ಅದು ಇದ್ದ ಹಾಗಿರುವ ಭೌತಿಕ ಜಗತ್ತಿನಲ್ಲಿ ತಾನೇ ಪ್ರಕಟವಾಗುವ ಸಾಧ್ಯತೆ ಎಂದಿಗೂ ಇರುತ್ತಿರಲಿಲ್ಲ. ಕೆಳಸ್ತರದಲ್ಲಿ ಅದರ ಎಚ್ಚತ್ತುಗೊಳ್ಳುವಿಕೆ ಹಾಗೂ ತೋರಿಬರುವಿಕೆ ಇವು ಮೇಲಿನಿಂದ ಬರುವ ಸ್ಪರ್ಶಕ್ಕೆ ಉತ್ತರ ನೀಡುವಂತಿರುತ್ತವೆ, ಆ ಸ್ಪರ್ಶ ಈಗಿದ್ದ ಹಾಗೆ ಭೌತದ್ರವ್ಯದ ಆಳದಲ್ಲಿ ಅಡಗಿರುವವುಗಳಿಗೆ ಅನುಗುಣವಾದ ಅಂಶಗಳನ್ನು ಹೊರತರುತ್ತದೆ... ಮತ್ತು ನಿಖರವಾಗಿ ಸದ್ಯ ಸಂಭವಿಸುತ್ತಿರುವುದು ಅದೇ ಆಗಿದೆ. ಆದರೆ ನಾನು ಎರಡು ವಾರಗಳ ಹಿಂದೆ ಹೇಳಿದ ಹಾಗೆ, ಈ ಭೌತಿಕ ಜಗತ್ತು ವಾಸ್ತವದಲ್ಲಿ ಹಾಗೂ ಗೋಚರವಾಗುವಂತೆ ಇರುವ ಹಾಗೆ ಎಷ್ಟೊಂದು ಸಾಮರ್ಥ್ಯಪೂರ್ಣವಾಗಿದೆ, ಸಾಮಾನ್ಯ ಪ್ರಜ್ಞೆಗೆ ಎಷ್ಟೊಂದು ನೈಜವಾಗಿದೆ ಎಂದರೆ, ಅದು ಈ ಅತಿಮಾನಸ ಪ್ರಜ್ಞೆಯನ್ನು ಹಾಗೂ ಶಕ್ತಿಯನ್ನು ಅವು ಪ್ರಕಟವಾದಾಗ ನುಂಗಿ ಹಾಕಿದಂತಿದೆ. ಮತ್ತು ಅದರ ಸಾನ್ನಿಧ್ಯದ ಇಣುಕು ನೋಟವನ್ನು ನೋಡಲು, ಭಾವನೆಗೆ

ತಂದುಕೊಳ್ಳಲು, ಒಂದಿಲ್ಲೊಂದು ರೀತಿಯಲ್ಲಿ ಗ್ರಹಿಸಲು ದೀರ್ಘ ತಯಾರಿಯ ಆವಶ್ಯಕತೆ ಇದೆ. ಮತ್ತು ಈಗ ಅದೇ ಕಾರ್ಯವನ್ನು ಅದು ಕೈಕೊಳ್ಳುತ್ತಿದೆ.

**CWM, 9/158–59** **– ಶ್ರೀಮಾತೆ**

*

**ನಿಜವಾದ ಪುನರುಜ್ಜೀವನ**

ಪುನರುಜ್ಜೀವನದ ಅರ್ಥ ನಮಗೆ ಹಳೆಯ ಪ್ರಜ್ಞೆ ಪತನಗೊಂಡು ಹೋಗುವುದಾಗಿದೆ, ಆದರೆ ಅದು ಕೇವಲ ಪುನರ್ಜನ್ಮವಲ್ಲ, ಗತಕಾಲವನ್ನು ಸಂಪೂರ್ಣವಾಗಿ ಮುರಿದುಹಾಕಲು ಒಮ್ಮೆಗೆ ಆಗುವ ಬದಲಾವಣೆಯಲ್ಲ. ನಿಮ್ಮ ಹಳೆಯ ಸತ್ತೆ, ನಿಮ್ಮ ನಿಮ್ನ ಬಾಹ್ಯ ಸ್ವಭಾವ ಇವುಗಳನ್ನು ಕುರಿತು ಸಾವನ್ನಪ್ಪುವಿಕೆ ಮತ್ತು ಅದನ್ನು ಪೂರ್ತಿ ಹೊಸದಾಗಿ ಪ್ರಾರಂಭಿಸುವಿಕೆ ಇವುಗಳ ಮಧ್ಯೆ ಒಂದು ಬಗೆಯ ಮುಂದುವರಿಕೆ ಇದೆ. ಪುನರುಜ್ಜೀವನದ ಅನುಭವದಲ್ಲಿ ಹಳೆಯ ಸತ್ತೆಯನ್ನು ಬಿಟ್ಟುಕೊಡುವ ಕ್ರಿಯೆ ಅದರಿಂದ ಮೇಲೆದ್ದು ಬರುವ ಹೊಸ ಪ್ರಜ್ಞೆ ಹಾಗೂ ಹೊಸ ಬಲ ಇವುಗಳಿಗೆ ಅತಿ ಹತ್ತಿರದ ಸಂಪರ್ಕ ಹೊಂದಿರುತ್ತದೆ, ಅದರಿಂದಾಗಿ ಚೆಲ್ಲಿಕೊಟ್ಟುದುದರಿಂದ ಅತ್ಯಂತ ಒಳ್ಳೆಯದು ತರುವಾಯ ಬಂದ ಹೊಸ ಸೃಷ್ಟಿಯೊಂದಿಗೆ ಏಕವಾಗಬಲ್ಲದು. ಪುನರುಜ್ಜೀವನದ ನಿಜವಾದ ಪ್ರಾಮುಖ್ಯತೆ ಎಂದರೆ ದೈವೀ ಪ್ರಜ್ಞೆ ಇಳಿದು ಹೋಗಿ ತನ್ನನ್ನು ಕಳೆದುಕೊಂಡಿದ್ದ ಅಪ್ರಜ್ಞೆಯಿಂದ ಜಾಗ್ರತಗೊಳ್ಳುವುದಾಗಿದೆ; ಮೃತ್ಯು, ನಿಶೆ ಮತ್ತು ಮಬ್ಬು ಇರುವ ಜಗತ್ತಿನಲ್ಲಿ ದೈವೀ ಪ್ರಜ್ಞೆ ಅವರೋಹಣ ಮಾಡಿದ್ದಾಗಲೂ ಕೂಡ ಮತ್ತೊಮ್ಮೆ ತನ್ನ ಬಗ್ಗೆ ಅರಿವು ತಂದುಕೊಳ್ಳುತ್ತದೆ. ಮಬ್ಬಾಗಿರುವ ಆ ಜಗತ್ತು ಭೌತಿಕವಾದ ರಾತ್ರಿಗಿಂತ ಹೆಚ್ಚು ಅಂಧಕಾರವುಳ್ಳದ್ದಾಗಿರುತ್ತದೆ. ಅದರಲ್ಲಿ ಮುಳುಗು ಹಾಕಿ ಮೇಲೆ ಬಂದ ನಂತರ ಅತ್ಯಂತ ಭವ್ಯ ರಾತ್ರಿ ಕೂಡ ಸ್ಪಷ್ಟವಾಗಿರುವಂತೆ ಕಂಡುಬರುತ್ತದೆ, ಅದು ಹೇಗಿರುತ್ತದೆಂದರೆ ನಿಜವಾದ ದೈವೀ ಪ್ರಜ್ಞೆಯ ಪ್ರಕಾಶ ಎಂದರೆ ಮಬ್ಬಿಲ್ಲದ ಅತಿಮಾನಸ ದೈವೀ ಪ್ರಕಾಶದಿಂದ ಮರಳಿ ಬಂದಾಗ ನೀವು ಭೌತಿಕ ಸೂರ್ಯ ಕಪ್ಪಾಗಿರುವಂತೆ ಕಂಡುಕೊಳ್ಳುತ್ತೀರಿ. ಆದರೆ ಪರಮೋಚ್ಚ ಅಂಧಕಾರದ ಆಳಗಳಲ್ಲಿಯೂ ಕೂಡ ಪರಮೋಚ್ಚ ದೈವೀ ಪ್ರಕಾಶ ಅಡಗಿಕೊಂಡಿರುತ್ತದೆ. ಆ ದೈವೀ ಪ್ರಕಾಶ ಮತ್ತು ಆ ದೈವೀ ಪ್ರಜ್ಞೆ ನಿಮ್ಮನ್ನು ಜಾಗ್ರತಗೊಳಿಸಲಿ, ಅಲ್ಲಿ ಶ್ರೇಷ್ಠ ಪುನರುಜ್ಜೀವನವಿರಲಿ.


**CWM, 3/147** **– ಶ್ರೀಮಾತೆ**

*

ಅತಿಮಾನಸ ಯೋಗದ ಮೊದಲ ಶಬ್ದ ಶರಣಾಗತಿ, ಅದರ ಕೊನೆಯ ಶಬ್ದ ಕೂಡ ಶರಣಾಗತಿ. ದೈವೀ ಪ್ರಜ್ಞೆಯಲ್ಲಿ ಮೇಲಕ್ಕೆತ್ತಿ ಹಿಡಿಯುವುದಕ್ಕಾಗಿ, ಪರಿಪೂರ್ಣತೆಗಾಗಿ, ಪರಿವರ್ತನೆಗಾಗಿ ಮನುಷ್ಯ ತನ್ನನ್ನು ಸನಾತನ ಭಗವಂತನಿಗೆ ಕೊಟ್ಟುಕೊಳ್ಳುವ ಸಂಕಲ್ಪದ ಮೂಲಕ ಆ ಯೋಗ ಪ್ರಾರಂಭವಾಗುತ್ತದೆ, ಇಡಿಯಾಗಿ ಕೊಟ್ಟುಕೊಳ್ಳುವಿಕೆಯಲ್ಲಿ ಅದು ಪರಾಕಾಷ್ಠೆ ಕಂಡುಕೊಳ್ಳುತ್ತದೆ. ಏಕೆಂದರೆ ಸ್ವ–ಅರ್ಪಣೆ ಸಂಪೂರ್ಣವಾದಾಗ ಅಲ್ಲಿ ಯೋಗದ ಸಮಾಪ್ತಿ ಎಂದರೆ ಅತಿಮಾನಸ ದೈವಿಕತೆಯಲ್ಲಿ ಸಂಪೂರ್ಣವಾಗಿ ಕೈಗೆತ್ತಿಕೊಳ್ಳುವಿಕೆ, ಸತ್ತೆಯ ಪರಿಪೂರ್ಣತೆ ಮತ್ತು ಸ್ವಭಾವದ ಪರಿವರ್ತನೆ ಇದೆಲ್ಲ ಬರುತ್ತದೆ.

**CWSA, 12/367** **– ಶ್ರೀ ಅರವಿಂದರು**

*



**ಪ್ರಶ್ನೆ :** *ಅಧಿಮಾನಸ ವ್ಯಕ್ತಿಯ ಸ್ವಾತಂತ್ರ್ಯವನ್ನು ಗೌರವಿಸುತ್ತದೆ ಎಂದು ನಿನ್ನೆ ಹೇಳಿದಿರಿ. ಅತಿಮಾನಸ ಇಂತಹದೇನನ್ನೂ ಕೈಕೊಳ್ಳುವುದಿಲ್ಲ ಎಂದು ನೀವು ಸೂಚಿಸುವಿರಾ?*

**ಶ್ರೀ ಅ :** ಸಹಜವಾಗಿ ಹಾಗೆ ನಾನು ಹೇಳುತ್ತೇನೆ. ಅದು ಕೇವಲ ಭಗವಂತನ ದೈವೀ ಸತ್ಯ ಮತ್ತು ವಿಷಯಗಳ ಸತ್ಯ ಇವುಗಳನ್ನು ಮಾತ್ರ ಗೌರವಿಸುತ್ತದೆ.

**ನಿರೋದಬರಣ ಅವರೊಡನೆ ಮಾತುಕತೆ: p. 327**

*

## ಆಧ್ಯಾತ್ಮಿಕ ಹಾಗೂ ಅತಿಮಾನಸ

ಅತಿಮನಸ್ಸು ಮತ್ತು ಅತಿಮಾನಸ ಈ ಶಬ್ದಗಳನ್ನು ನಾನು ಮೊದಲು ಉಪಯೋಗದಲ್ಲಿ ತಂದೆ, ಆದರೆ ಆಗಿನಿಂದ ಜನರು ಅವುಗಳನ್ನು ಕೈಗೆತ್ತಿಕೊಂಡಿದ್ದಾರೆ, ಮತ್ತು ಮನಸ್ಸಿನ ಮೇಲ್ಗಡೆ ಇರಬಹುದಾದ ಯಾವುದಕ್ಕೂ ಅತಿಮಾನಸ ಶಬ್ದವನ್ನು ಉಪಯೋಗಿಸುತ್ತಾರೆ.

*

ಉಚ್ಚತರ ಸ್ತರಗಳು: ಉಚ್ಚತರ ಮನಸ್ಸು, ಜ್ಞಾನೋದಯ ಪಡೆದ ಮನಸ್ಸು, ಅಂತರ್ಬೋಧೆ, ಅಧಿಮಾನಸ, ಅತಿಮನಸ್ಸು ಇವುಗಳಿರುವ ಸ್ತರಗಳು. ಚೈತ್ಯ, ಮನಸ್ಸು, ಪ್ರಾಣಿಕ, ಭೌತಿಕ ಇವೆಲ್ಲ ಸರ್ವಸಾಧಾರಣ ಪ್ರಕಟಣೆಗೆ ಸೇರಿದವುಗಳಾಗಿವೆ.

**CWSA, 28/144, 158** **– ಶ್ರೀ ಅರವಿಂದರು**

*

**ಮನುಷ್ಯನ ಪ್ರಗತಿ**

ವಿಸ್ತರಿಸಿಕೊಳ್ಳುವುದು ಹೊಸ ಜನ್ಮಗಳನ್ನು ದೊರಕಿಸಿದ ಹಾಗೆ. ಅಭೀಪ್ಸೆ ಪಡುವ ಪ್ರಾಪಂಚಿಕ ಜೀವಿ ವಿಪರೀತ ಶ್ರಮ ಪಡುವ ಪ್ರಾಣಿಕ ಮನುಷ್ಯನಾಗುತ್ತಾನೆ, ಅವನು ತನ್ನ ಸರದಿಯಲ್ಲಿ ತನ್ನನ್ನು ಸೂಕ್ಷ್ಮ ಮಾನಸಿಕ ಮತ್ತು ಚೈತ್ಯಾತ್ಮಿಕ ಸತ್ತೆಯಾಗುವಂತೆ ರೂಪಪರಿವರ್ತನೆಗೆ ಒಳಪಡಿಸುತ್ತಾನೆ; ಸೂಕ್ಷ್ಮ ರೀತಿಯಲ್ಲಿ ಯೋಚಿಸುವ ಇವನು ವಿಸ್ತಾರವಾದ, ಬಹ್ವಂಶವುಳ್ಳ ಮತ್ತು ವಿಶ್ವವ್ಯಾಪಿ ಮನುಷ್ಯನಾಗಿ ಬೆಳೆಯುತ್ತಾನೆ, ದೈವೀ ಸತ್ಯದ ಅನೇಕ ಅಂತರ್ ಪ್ರವಾಹಗಳಿಗೆ

ತನ್ನನ್ನು ಎಲ್ಲ ಬದಿಗಳಲ್ಲಿ ತೆರೆದಿರಿಸಿಕೊಂಡಿರುತ್ತಾನೆ; ಈ ವಿಶ್ವವ್ಯಾಪಿ ಆತ್ಮ ಸಿದ್ಧಿಸಿಕೊಳ್ಳುವುದರಲ್ಲಿ ಮೇಲಕ್ಕೇರುತ್ತ ಆಧ್ಯಾತ್ಮಿಕ ಮನುಷ್ಯನಾಗಿ ಉಚ್ಚತರ ಶಾಂತಿ, ಸಂತೋಷ ಮತ್ತು ಸಾಮರಸ್ಯಗಳನ್ನು ದೊರಕಿಸುವುದಕ್ಕಾಗಿ ಹೆಣಗುತ್ತಾನೆ. ಇವು ಐದು ಬಗೆಯ ಆರ್ಯರ ಮಾದರಿಗಳು. ಇವುಗಳಲ್ಲಿ ಪ್ರತಿಯೊಂದು ಶ್ರೇಷ್ಠ ಜನಾಂಗವಾಗಿದ್ದು ಇಡಿಯಾದ ಮಾನವ ಸ್ವಭಾವದ ಸ್ಥಿತಿಯಲ್ಲಿ ಇಲ್ಲವೆ ಪ್ರಾಂತದಲ್ಲಿ ತಮ್ಮದೇ ಸ್ಥಾನವನ್ನು ಹೊಂದಿದೆ. ಹಾಗೆಯೇ ಪರಿಪೂರ್ಣನಾದವನು ಎಂದು ಹೇಳಬಹುದಾದ ಆರ್ಯನ್‌ನಿದ್ದಾನೆ, ಅವನು ಈ ಸ್ಥಿತಿಗಳ ಮೇಲೆ ಜಯ ಸಾಧಿಸಿ ಅವುಗಳಾಚೆಗೆ ಅವೆಲ್ಲವುಗಳ ವಿಶ್ವಾತೀತ ಸಾಮರಸ್ಯದೆಡೆಗೆ ಸಾಗಿ ಹೋಗಬಲ್ಲ. ಈ ಶ್ರೇಷ್ಠ ಆಂತರಿಕ ರೂಪಪರಿವರ್ತನೆಯ ಉಪಕರಣ ಅತಿಮಾನಸ ದೈವೀ ಸತ್ಯವಾಗಿದೆ. ಅದು ಮನೋಧರ್ಮದ ಸ್ಥಾನದಲ್ಲಿ ಪ್ರಕಾಶಮಯ ದೃಷ್ಟಿಯನ್ನು ಹಾಗೂ ದೇವತೆಗಳ ಕಣ್ಣನ್ನು, ಮರ್ತ್ಯ ಜೀವನದ ಸ್ಥಾನದಲ್ಲಿ ಅನಂತ ಅಸ್ತಿತ್ವದ ಉಸಿರು ಹಾಗೂ ಶಕ್ತಿಯನ್ನು, ಮಬ್ಬಾದ ಮತ್ತು ಮೃತ್ಯುವಿಗೆ ವಶವಾದ ದ್ರವ್ಯದ ಸ್ಥಾನದಲ್ಲಿ ಮುಕ್ತ, ಅಮರ ಹಾಗೂ ಪ್ರಜ್ಞಾಪೂರ್ಣ ಸತ್ತೆಯನ್ನು ಇರಿಸುತ್ತದೆ. ಹಾಗಾಗಿ ಮನುಷ್ಯನ ಪ್ರಗತಿ ಮೊದಲನೆಯದಾಗಿ ಕ್ರಿಯೆಯ ಮತ್ತು ಅನುಭವದ ಕಂಪನಗಳನ್ನು ಪೋಷಿಸಿಕೊಂಡು ಬರಲು, ಪ್ರಬಲ ಜೀವಶಕ್ತಿಯಲ್ಲಿ ಅವನ ಸ್ವ–ವಿಸ್ತರಣೆ ಮತ್ತು ಸ್ಪಷ್ಟ ಮಾನಸಿಕ ಹಾಗೂ ಚೈತ್ಯಾತ್ಮಿಕ ಪರಿಶುದ್ಧತೆ ಇವೆಲ್ಲ ಇರಬೇಕು; ಎರಡನೆಯದಾಗಿ ಈ ಮಾನವ ಪ್ರಕಾಶ, ಸಾಮರ್ಥ್ಯ ಹಾಗೂ ಅದರ ರೂಪಪರಿವರ್ತನೆ ಇವು ಅನಂತ ದೈವೀ ಸತ್ಯದಲ್ಲಿ ಮತ್ತು ಅಮರ ಸಂಕಲ್ಪದಲ್ಲಿ ವೇಗವಾಗಿ ಬೆಳೆಯುತ್ತ ಹೋಗಬೇಕು.

*

**ಅತಿಮನಸ್ಸು ಹಾಗೂ ಅಸ್ತಿತ್ವದ ಸ್ತರಗಳು**

ಸಚ್ಚಿದಾನಂದದ ಸ್ತರಗಳು ಹಾಗೂ ನಿಮ್ನ ಸೃಷ್ಟಿ ಇವುಗಳ ನಡುವೆ ಅತಿಮನಸ್ಸಿದೆ. ಅದು ಸ್ವ–ನಿರ್ಧಾರಕ್ಕೆ ಬರುವ ದೈವೀ ಪ್ರಜ್ಞೆಯ ದೈವೀ ಸತ್ಯವನ್ನು ಒಳಗೊಂಡಿದೆ ಮತ್ತು ದೈವೀ ಸತ್ಯದ ಸೃಷ್ಟಿಗಾಗಿ ಅವಶ್ಯವಾಗಿದೆ. ಮನಸ್ಸು, ಪ್ರಾಣ ಹಾಗೂ ದೇಹ ಇವುಗಳಿಗೆ ಸಂಬಂಧಿಸಿದ ಹಾಗೆ ಮನುಷ್ಯ ಸಚ್ಚಿದಾನಂದವನ್ನು ಸಿದ್ಧಿಸಿಕೊಳ್ಳಬಲ್ಲ, – ಆದರೆ ಆಗ ಅದು ಸ್ಥಿರವಾಗಿರುವ, ತನ್ನ ಸಾನ್ನಿಧ್ಯದಿಂದ ನಿಮ್ನ ಪ್ರಕೃತಿಗೆ ಆಧಾರ ನೀಡುತ್ತಿರುವ ಏನೋ ಒಂದು, ಆದರೆ ಅದನ್ನು

ಪರಿವರ್ತನೆಗೆ ಒಳಪಡಿಸುವುದಿಲ್ಲ. ಅತಿಮನಸ್ಸು ಮಾತ್ರ ನಿಮ್ಮ ಪ್ರಕೃತಿಯನ್ನು ಪರಿವರ್ತನೆಗೆ ಒಳಪಡಿಸಬಲ್ಲದು.

*

**ಆಧ್ಯಾತ್ಮಿಕ ಸ್ತರಗಳು ಹಾಗೂ ಅತಿಮಾನಸ**

ಆಧ್ಯಾತ್ಮಿಕ ಮತ್ತು ಅತಿಮಾನಸ ಇವು ಒಂದೇ ಅಲ್ಲ. ಉಚ್ಚತರ ಮನಸ್ಸಿನಿಂದ ಅಧಿಮನಸ್ಸಿನ ವರೆಗೆ ಇರುವ ಆಧ್ಯಾತ್ಮಿಕ ಸ್ತರಗಳು ಹಳೆಯ ಸಾಧನಾ ಪದ್ಧತಿಗಳಿಗೆ ಸುಲಭ ಲಭ್ಯವಾಗಿವೆ, ಹಾಗಾಗಿ ಅದನ್ನು ಕುರಿತು ತೊಂದರೆಯಿಲ್ಲ. ಅವು ಸುಲಭ ಲಭ್ಯವಾಗಿರದೆ ಇದ್ದರೆ ಯಾವ ಯೋಗವೂ ಇರುತ್ತಿರಲಿಲ್ಲ ಮತ್ತು ಭಾರತದ ಗತಕಾಲದಲ್ಲಿ ಯಾವ ಯೋಗಿಯೂ ಇರುತ್ತಿರಲಿಲ್ಲ.

*

ನಾನು ಬರೆದಿದ್ದನ್ನು ಓದಿದವರು ಆಧ್ಯಾತ್ಮಿಕ ಹಾಗೂ ಅತಿಮಾನಸ ಇವು ಒಂದೇ ವಿಷಯವಿರುವ ಹಾಗಿವೆ ಎಂದು ಕಲ್ಪನೆ ಮಾಡಿಕೊಳ್ಳುತ್ತಾರೆಂದು ನೀನು ಹೇಳುತ್ತೀ. ಅದು ಹಾಗಿದ್ದರೆ ಯುಗ ಯುಗಾಂತರಗಳಲ್ಲಿದ್ದ ಎಲ್ಲ ಋಷಿಗಳು, ಭಕ್ತರು, ಯೋಗಿಗಳು, ಸಾಧಕರು ಇವರೆಲ್ಲರೂ ಅತಿಮಾನಸ ಸತ್ತೆಗಳಾಗಿರುತ್ತಿದ್ದರು, ಮತ್ತು ಅತಿಮನಸ್ಸನ್ನು ಕುರಿತು ನಾನು ಬರೆದಿದ್ದೆಲ್ಲ ಅನಾವಶ್ಯಕವಾಗುತ್ತಿತ್ತು, ನಿರರ್ಥಕ ಹಾಗೂ ನಿಷ್ಪ್ರಯೋಜಕ ವಿಷಯವಾಗುತ್ತಿತ್ತು. ಆಧ್ಯಾತ್ಮಿಕ ಅನುಭವಗಳನ್ನು ಪಡೆದವನು ಯಾರೇ ಆಗಿರಲಿ ಅತಿಮಾನಸ ಸತ್ತೆಯಾಗುತ್ತಿದ್ದ. ಆಶ್ರಮ ಅತಿಮಾನಸ ಸತ್ತೆಗಳಿಂದ ಗಿಡಿದು ತುಂಬಿಕೊಳ್ಳುತ್ತಿತ್ತು (chock-full), ಮತ್ತು ಭಾರತದಲ್ಲಿಯ ಪ್ರತಿಯೊಂದು ಇತರ ಆಶ್ರಮ ಕೂಡ ಹಾಗೇ ಆಗುತ್ತಿತ್ತು. ಆಧ್ಯಾತ್ಮಿಕ ಅನುಭವಗಳು ತಮ್ಮನ್ನು ಆಂತರಿಕ ಪ್ರಜ್ಞೆಯಲ್ಲಿ ಸ್ಥಿರಗೊಳಿಸಿ–ಕೊಳ್ಳಬಲ್ಲವು ಮತ್ತು ಅದನ್ನು ಬದಲು ಮಾಡಬಲ್ಲವು, ಪರಿವರ್ತನೆಗೆ ಒಳಪಡಿಸಬಲ್ಲವು; ಮನುಷ್ಯ ಎಲ್ಲೆಡೆಯಲ್ಲಿ ಭಗವಂತನನ್ನು ಸಿದ್ಧಿಸಿಕೊಳ್ಳಬಲ್ಲನು, ದಿವ್ಯಾತ್ಮ ಎಲ್ಲದರಲ್ಲಿ ಇರುವುದನ್ನು, ಎಲ್ಲವೂ ದಿವ್ಯಾತ್ಮನಲ್ಲಿರುವುದನ್ನು ವಿಶ್ವಂಭರ ದೈವೀ ಶಕ್ತಿ ಎಲ್ಲವನ್ನೂ ಕೈಕೊಳ್ಳುವುದನ್ನು ನೋಡಬಲ್ಲನು; ವಿಶ್ವವ್ಯಾಪಿ ದಿವ್ಯಾತ್ಮನಲ್ಲಿ ಮುಳುಗಿ ಹೋಗಿರುವ ಇಲ್ಲವೆ ಭಾವಪರವಶ ಭಕ್ತಿ ಇಲ್ಲವೆ ಆನಂದದಿಂದ ತುಂಬಿಕೊಂಡಿರುವ ಭಾವನೆ ತಂದುಕೊಳ್ಳಬಲ್ಲನು. ಆದರೆ ಮನುಷ್ಯ ಇನ್ನೂ, ಸಾಮಾನ್ಯವಾಗಿ, ಪ್ರಕೃತಿಯ ಬಾಹ್ಯ ಕ್ರಿಯಾಶೀಲ ಭಾಗಗಳಲ್ಲಿ

ಸಾಗಿ ಹೋಗಬೇಕಾಗುತ್ತದೆ, ಅದನ್ನು ಅವನು ಬುದ್ಧಿಮತ್ತೆಯಿಂದ ಯೋಚಿಸುತ್ತ ಇಲ್ಲವೆ ಅತಿ ಹೆಚ್ಚೆಂದರೆ ಅಂತರ್ಬೋಧೆಯ ಮನಸ್ಸಿನಿಂದ, ಮಾನಸಿಕ ಸಂಕಲ್ಪದಿಂದ ಸಂಕಲ್ಪ ಮಾಡುತ್ತ, ಪ್ರಾಣಿಕ ಮೇಲ್ಮೈಯಲ್ಲಿ ಸಂತೋಷ ಹಾಗೂ ವೇದನೆಗಳನ್ನು ಅನುಭವಿಸುತ್ತ, ಭೌತಿಕ ಸಂಕಟಗಳಿಗೆ ಒಳಗಾಗುತ್ತ, ಮೃತ್ಯು ಹಾಗೂ ರೋಗಗಳಿರುವ ದೇಹದಲ್ಲಿ ಜೀವನದ ಹೋರಾಟದಿಂದ ಯಾತನೆಗೆ ಒಳಗಾಗುತ್ತ ಕೈಕೊಳ್ಳುತ್ತಾನೆ. ಆಗ ಆಗುವ ಬದಲಾವಣೆ ಎಂದರೆ ಆಂತರಿಕ ಸ್ವ–ಸಂಕಲ್ಪ ಅದೆಲ್ಲವನ್ನೂ ಕ್ಷೋಭೆಗೊಳಗಾಗದೆ, ದಿಗ್ಭ್ರಮೆಗೊಳಗಾಗದೆ, ಪರಿಪೂರ್ಣ ಸಮತೆಯಿಂದ ಅದನ್ನು ಪ್ರಕೃತಿಯ ಅನಿವಾರ್ಯ ಭಾಗವೆಂದು ತೆಗೆದುಕೊಳ್ಳುತ್ತ ಗಮನಿಸುತ್ತದೆ, ಕನಿಷ್ಠ ಪಕ್ಷ ಮನುಷ್ಯ ಪ್ರಕೃತಿಯಿಂದ ದಿವ್ಯಾತ್ಮನಲ್ಲಿ ಹಿಂದೆಗೆದುಕೊಳ್ಳುವವರೆಗೆ ಅದು ಅನಿವಾರ್ಯವಾಗುತ್ತದೆ. ನಾನು ಆಲೋಚಿಸುತ್ತಿರುವ ಬದಲಾವಣೆ ಅದಲ್ಲ, ಅದು ಅತಿ ಭಿನ್ನವಾದ ಜ್ಞಾನದ ಸಾಮರ್ಥ್ಯ, ಸಂಕಲ್ಪದ ಇನ್ನೊಂದು ರೀತಿ, ಇನ್ನೊಂದು ಬಗೆಯ ಪ್ರಕಾಶಮಯ ಭಾವನೆ ಹಾಗೂ ಸಂವೇದನಾ ಶಕ್ತಿ, ಬೇರೆ ಬಗೆಯ ಭೌತಿಕ ಪ್ರಜ್ಞೆಯ ರಚನಾಕ್ರಮ, ಅದು ಅತಿಮಾನಸ ಬದಲಾವಣೆಯಿಂದ ಬರಲೇಬೇಕಾದ ವಿಷಯ.

*

(ಎಲ್ಲೆಡೆಯಲ್ಲಿಯೂ ಇರುವ) ಭಗವಂತನ ಸಂಪರ್ಕ ಪಡೆದು ಇಲ್ಲವೆ ಪರಿಶುದ್ಧವಾದ ಮತ್ತು ಬಾಹ್ಯ ಚಲನೆಗಳ ಸ್ಪರ್ಶಕ್ಕೊಳಗಾಗದ ದಿವ್ಯಾತ್ಮನ ಬಗ್ಗೆ ಅಂತರಂಗದಲ್ಲಿ ಗ್ರಹಿಕೆ ಪಡೆದು ಆಧ್ಯಾತ್ಮಿಕ ಸಿದ್ಧಿಯನ್ನು ದೊರಕಿಸಬಹುದು.

ಅತಿಮನಸ್ಸು ವಿಶ್ವಾತೀತವಾದ ಏನೋ ಒಂದು – ಕ್ರಿಯಾಶೀಲ ದೈವೀ ಸತ್ಯ ಪ್ರಜ್ಞೆ, ಅದಿನ್ನೂ ಇಲ್ಲಿ ಇಲ್ಲ, ಅದನ್ನು ಮೇಲ್ಗಡೆಯಿಂದ ಕೆಳಗಿಳಿಸಿ ತರಬೇಕಾಗಿದೆ.

**CWSA, 28/274** **– ಶ್ರೀ ಅರವಿಂದರು**

*

**ಉಚ್ಚತರ ಮಾನಸಿಕ ಸ್ತರಗಳು ಮತ್ತು ಅತಿಮನಸ್ಸು**

**ಪ್ರಶ್ನೆ :** *ವಿಜ್ಞಾನಿಗಳು ಕೆಲವೊಮ್ಮೆ ಮಾನಸಿಕ ಸ್ತರದಿಂದಾಚೆಗೆ ಹೋಗುವುದಿಲ್ಲವೆ? ಐನ್‌ಸ್ಟಾಯಿನ್ ತನ್ನ ಸಾಪೇಕ್ಷತಾವಾದದ ಸಿದ್ಧಾಂತವನ್ನು ರೂಪಿಸಿದ್ದು ತಾರ್ಕಿಕ ವಿಧಾನದ ಮೂಲಕವಲ್ಲ, ಆದರೆ ಒಮ್ಮೆಗೆ ಉಂಟಾದ ಸ್ಫೂರ್ತಿಯಿಂದ ಕಂಡು*

*ಹಿಡಿದ ಎಂದು ಹೇಳಲಾಗುತ್ತದೆ. ಆ ಸ್ಫೂರ್ತಿಗೆ ಅತಿಮನಸ್ಸಿನ ಸಂಬಂಧವೇ–ನಾದರೂ ಇದೆಯೆ?*

**ಶ್ರೀ ಅ :** ಸ್ಫೂರ್ತಿ ಪಡೆದ ವಿಜ್ಞಾನಿ ಅದನ್ನು ಅಂತರ್ಬೋಧೆಯ ಮನಸ್ಸಿನಿಂದ ಪಡೆದಿರುತ್ತಾನೆ. ಆ ಜ್ಞಾನ ಉಚ್ಚತರ ಮಾನಸಿಕ ಸ್ತರದಲ್ಲಿ ನೇರವಾಗಿ ಗ್ರಹಿಕೆ ಪಡೆಯುವುದರಿಂದ ಬರುತ್ತದೆ, ಆ ಉಚ್ಚತರ ಮಾನಸಿಕ ಸ್ತರ ಅದಕ್ಕಿಂತಲೂ ಇನ್ನೂ ಹೆಚ್ಚು ಮೇಲ್ಗಡೆಗಿರುವ ಯಾವುದೋ ಒಂದು ಪ್ರಕಾಶದಿಂದ ಜ್ಞಾನೋದಯ ಪಡೆದಿರುತ್ತದೆ. ಆದರೆ ಅದೆಲ್ಲದಕ್ಕೂ, ಅತಿಮನಸ್ಸಿನ ಕ್ರಿಯೆಗೂ ಯಾವ ಸಂಬಂಧವೂ ಇಲ್ಲ ಮತ್ತು ಮನಸ್ಸಿನ ಉಚ್ಚಸ್ತರವು ಅತಿಮಾನಸ ಸ್ತರದಿಂದ ಬಹಳ ದೂರದಲ್ಲಿದೆ. ಸಾಮಾನ್ಯ ಸ್ತರದಿಂದ ಮೇಲೆ ಮಾತ್ರ ಸಾಗಿ ಹೋದ ಜನರು ಬಹಳ ದೈವಿಕವಾದ ಪ್ರಾಂತಗಳಲ್ಲಿ ಏರಿ ಹೋಗಿದ್ದೇವೆ ಎಂದು ನಂಬುವ ಒಲವನ್ನು ಸುಲಭವಾಗಿ ಹೊಂದಿರುತ್ತಾರೆ. ಸಾಮಾನ್ಯ ಮಾನವ ಮನಸ್ಸು ಮತ್ತು ಅತಿಮನಸ್ಸು ಇವುಗಳ ನಡುವೆ ಹಲವಾರು ಹಂತಗಳಿವೆ, ಮತ್ತು ಅನೇಕ ದರ್ಜೆಗಳು ಹಾಗೂ ಮಧ್ಯೆ ಬರುವ ಸ್ತರಗಳಿವೆ. ಸಾಮಾನ್ಯ ಮನುಷ್ಯ ಮಧ್ಯೆ ಬರುವ ಸ್ತರವೊಂದರ ಸಂಪರ್ಕಕ್ಕೆ ಬಂದರೆ ಅವನು ಕಕ್ಕಾಬಿಕ್ಕಿ–ಯಾಗುತ್ತಾನೆ, ಅಂಧನಾಗುತ್ತಾನೆ, ಅದರ ಭವ್ಯತೆಯ ಭಾರದಡಿಯಲ್ಲಿ ಪುಡಿ ಪುಡಿಯಾಗುತ್ತಾನೆ ಇಲ್ಲವೆ ತನ್ನ ಸಮತೋಲನವನ್ನು ಕಳೆದುಕೊಳ್ಳುತ್ತಾನೆ ಮತ್ತು ಆದಾಗ್ಯೂ ಆ ಸ್ತರ ಅತಿಮನಸ್ಸಿನದಾಗಿರುವುದಿಲ್ಲ.

*

**ವಿಶ್ವವ್ಯಾಪಿ ನೆನಪು ಮತ್ತು ಅತಿಮನಸ್ಸು**

ಯೋಗಿಯು ಎಲ್ಲ ವಿಷಯಗಳನ್ನು ತಿಳಿದುಕೊಳ್ಳಬಲ್ಲನು ಮತ್ತು ಎಲ್ಲ ಪ್ರಶ್ನೆಗಳಿಗೆ ಉತ್ತರ ನೀಡಬಲ್ಲನು ಎಂಬ ಸಾಮಾನ್ಯ ವಿಚಾರದ ಹಿಂದೆ ಇರುವ ವಾಸ್ತವ ಸಂಗತಿ ಎಂದರೆ ಮನಸ್ಸಿನ ಒಂದು ಸ್ತರವಿದೆ, ಅಲ್ಲಿ ಎಲ್ಲದರ ನೆನಪನ್ನು ಸಂಗ್ರಹಿಸಿ ಇಡಲಾಗಿರುತ್ತದೆ ಮತ್ತು ಅದು ಯಾವಾಗಲೂ ಅಸ್ತಿತ್ವದಲ್ಲಿರುತ್ತದೆ. ಪೃಥ್ವಿಯ ಜೀವನಕ್ಕೆ ಸಂಬಂಧಿಸಿದ ಎಲ್ಲ ಮಾನಸಿಕ ಚಲನೆಗಳನ್ನು ಆ ಸ್ತರದಲ್ಲಿ ನೆನಪಿನಲ್ಲಿಟ್ಟುಕೊಳ್ಳಲಾಗಿರುತ್ತದೆ ಮತ್ತು ದಾಖಲೆ ಮಾಡಲಾಗಿರುತ್ತದೆ. ಅಲ್ಲಿಗೆ ಹೋಗಲು ಶಕ್ತರಾದವರು ಮತ್ತು ಕಾಳಜಿ ವಹಿಸುವ ಶ್ರಮ ಪಡುವವರು ತಾವು ಆಯ್ದುಕೊಂಡದ್ದನ್ನು ಓದಬಲ್ಲರು ಮತ್ತು ಕಲಿತುಕೊಳ್ಳಬಲ್ಲರು. ಆದರೆ ಈ

ಸ್ತರವನ್ನು ಅತಿಮಾನಸ ಸ್ತರವೆಂದು ತಪ್ಪು ಅರ್ಥ ಮಾಡಿಕೊಳ್ಳಬಾರದು. ಮತ್ತು ಆದಾಗ್ಯೂ ಆ ಸ್ತರವನ್ನು ತಲುಪುವುದಕ್ಕೂ ಕೂಡ ನೀವು ಪ್ರಾಪಂಚಿಕ ಇಲ್ಲವೆ ಭೌತಿಕ ಮನಸ್ಸಿನ ಚಲನೆಗಳನ್ನು ನಿಶ್ಚಲ ನೀರವತೆಯಲ್ಲಿರಿಸಲು ಶಕ್ತರಾಗಬೇಕು, ನಿಮ್ಮ ಎಲ್ಲ ಸಂವೇದನೆಗಳನ್ನು ಬದಿಗೆ ಸರಿಸಿಡಲು ಶಕ್ತರಾಗಬೇಕು, ಮತ್ತು ನಿಮ್ಮ ಸಾಮಾನ್ಯ ಚಲನೆಗಳು – ಅವೇನೇ ಆಗಿರಲಿ, ಅವುಗಳನ್ನು ನಿಲ್ಲಿಸಬೇಕು; ನೀವು ಪ್ರಾಣಿಕದಿಂದ ಹೊರಗೆ ಬರಬೇಕು, ದೇಹಕ್ಕಾಗಿರುವ ಗುಲಾಮಗಿರಿಯಿಂದ ನೀವು ಮುಕ್ತರಾಗಬೇಕು. ಆಗ ಮಾತ್ರ ಆ ಪ್ರಾಂತದಲ್ಲಿ ಪ್ರವೇಶಿಸಬಲ್ಲಿರಿ ಹಾಗೂ ನೋಡಬಲ್ಲಿರಿ. ಆದರೆ ಈ ಪ್ರಯತ್ನವನ್ನು ಕೈಕೊಳ್ಳಲು ನಿಮ್ಮಲ್ಲಿ ಆಸಕ್ತಿಯಿದ್ದರೆ, ಅಲ್ಲಿಗೆ ನೀವು ತಲುಪಬಹುದು ಮತ್ತು ಪೃಥ್ವಿಯ ನೆನಪಿನಲ್ಲಿ ಬರೆದಿಟ್ಟದ್ದನ್ನು ಓದಬಹುದು.

*

**ಮಾನಸಿಕ ಯೋಜನೆ ಮತ್ತು ಅತಿಮನಸ್ಸು**

ಹೀಗೆ ನಿಶ್ಚಲ ನೀರವತೆಯಲ್ಲಿ ಆಳಕ್ಕಿಳಿದು ಹೋದಾಗ ನೀವು ಪ್ರಜ್ಞೆಯ ಹಂತವೊಂದನ್ನು ತಲುಪುತ್ತೀರಿ, ಅಲ್ಲಿ ನಿಮ್ಮ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವುದು ಅಸಾಧ್ಯವಾಗುವುದಿಲ್ಲ. ಅತಿಮನಸ್ಸಿನ ವಿಶಾಲ ಸತ್ಯಕ್ಕೆ ತೆರೆದಿರಿಸಿಕೊಂಡ ಹಾಗೂ ಅದರೊಡನೆ ಸತತ ಸಂಪರ್ಕದಲ್ಲಿ ಮನುಷ್ಯ–ನೊಬ್ಬನಿದ್ದರೆ ಅವನು ಉತ್ತರ ದೊರಕಿಸಲು ಯೋಗ್ಯವಾದ ಪ್ರಶ್ನೆಗೆ ಅತಿಮಾನಸದ ದೈವೀ ಪ್ರಕಾಶದಿಂದ ಉತ್ತರ ನೀಡಬಲ್ಲನು. ಮುಂದಿರಿಸಿದ ಸಂದೇಹ ರೂಪದ ಪ್ರಶ್ನೆಗಳು ವಿಷಯಗಳ ಹಿಂದಿರುವ ಸತ್ಯ ಮತ್ತು ನೈಜತೆ ಇವುಗಳ ಭಾವದಿಂದ ಬರಬೇಕು. ವಿಷಯಗಳ ಭ್ರಮಾತ್ಮಕ ಮೇಲ್ಮೈ ಮೇಲೆ ಚಲಿಸುವ ಕೇವಲ ಮಾನಸಿಕ ಅಮೂರ್ತ ಕಲ್ಪನೆಗಳು ನೇಯ್ದ ತರ್ಕಜಾಲಗಳಂತಿರುವ ಹಲವಾರು ಪ್ರಶ್ನೆಗಳಿರುತ್ತವೆ, ಮತ್ತು ಬಹಳಷ್ಟು ವಾದವಿವಾದಕ್ಕೊಳಗಾದ ಸಮಸ್ಯೆಗಳಿರುತ್ತವೆ. ಇವು ನಿಜವಾದ ಜ್ಞಾನಕ್ಕೆ ಸೇರಿರುವುದಿಲ್ಲ, ಜ್ಞಾನವನ್ನು ವಿರೂಪಗೊಳಿಸುತ್ತವೆ, ಇವುಗಳ ದ್ರವ್ಯವೇ ಅಜ್ಞಾನದ್ದಾಗಿರುತ್ತದೆ. ನಿಶ್ಚಿತವಾಗಿ ಅತಿಮಾನಸ ಜ್ಞಾನ ಉತ್ತರ ನೀಡಬಲ್ಲದು, ಅದು ಅದರದೇ ರೀತಿಯ ಉತ್ತರ ನೀಡಿರುತ್ತದೆ. ಅಲ್ಲಿ ಸಂಭವಿಸುವುದೇನೆಂದರೆ ಮಾನಸಿಕ ಸ್ತರದಿಂದ ಕೇಳಿದವರಿಗೆ ದೊರಕಿದ ಉತ್ತರ ಸಮಾಧಾನಕರವಾಗಿರುವುದಿಲ್ಲ ಇಲ್ಲವೆ ತಿಳಿದುಕೊಳ್ಳಲಾರದ ಹಾಗಿರುತ್ತದೆ. ಅತಿಮಾನಸ ಮನಸ್ಸಿನ ರೀತಿಯಲ್ಲಿ ಕಾರ್ಯ ಮಾಡಲಿ ಎಂದು ಇಲ್ಲವೆ

ಸತ್ಯದಲ್ಲಿರುವ ಜ್ಞಾನವು ಅಜ್ಞಾನದಲ್ಲಿರುವ ಅರ್ಧ ಜ್ಞಾನದಿಂದ ತುಂಡು ಮಾಡಿ ಒಟ್ಟಿಗಿರಿಸಲು ಬರುವ ಕ್ಷಮತೆ ಹೊಂದಿರಲಿ ಎಂದು ಒತ್ತಾಯದಿಂದ ಬೇಡುವುದನ್ನು ನಿರೀಕ್ಷಿಸಬಾರದು. ಮನಸ್ಸಿನ ಯೋಜನೆ ಒಂದು ವಿಷಯ, ಆದರೆ ಅತಿಮನಸ್ಸು ತೀರ ಬೇರೆ ರೀತಿಯದು, ಅದು ಮಾನಸಿಕ ಯೋಜನೆಯ ಜರೂರು ಕೋರಿಕೆಗಳಿಗೆ ಹೊಂದಿಕೊಂಡರೆ ಅತಿಮಾನಸವಾಗಿರುವುದಿಲ್ಲ. ಅವೆರಡು ಹೋಲಿಸಲಾರದಂತಹವು, ಮತ್ತು ಅವುಗಳನ್ನು ಒಟ್ಟಿಗೆ ಇರಿಸಲಾಗುವುದಿಲ್ಲ.

**CWM, 3/94–95** **– ಶ್ರೀಮಾತೆ**

*

**ಅತಿಮನಸ್ಸು ಮತ್ತು ಅಧಿಮನಸ್ಸು**

ಪೃಥ್ವಿಯನ್ನು ಪರಿವರ್ತನೆಗೆ ಒಳಪಡಿಸುವ ಕಾರ್ಯವನ್ನು ಶ್ರೀ ಅರವಿಂದರು ಅನನ್ಯ ರೀತಿಯಲ್ಲಿ ಕೈಕೊಂಡಿದ್ದಾರೆ. ಮನಸ್ಸಿನ ಮೇಲ್ಗಡೆ ಪ್ರಜ್ಞಾಪೂರ್ಣ ಸತ್ತೆಯ ಹಲವಾರು ಸ್ತರಗಳಿವೆ, ಅವುಗಳಲ್ಲಿ ನಿಜವಾಗಿಯೂ ದೈವಿಕವಾಗಿರುವ ಲೋಕವನ್ನು ಶ್ರೀ ಅರವಿಂದರು ಅತಿಮನಸ್ಸಿನ ಲೋಕ ಎಂದು ಕರೆದಿದ್ದಾರೆ, ಆ ಲೋಕ ದೈವೀ ಸತ್ಯದ್ದಾಗಿದೆ. ಆದರೆ ಆ ಸ್ತರಗಳ ಮಧ್ಯೆ 'ಅಧಿಮಾನಸ' ಎಂದು ಗುರುತಿಸಲಾದ ಲೋಕವಿದೆ, ಅದು ವಿಶ್ವವ್ಯಾಪಿ ದೇವತೆಗಳ ಲೋಕ. ಈಗ ಈ ಅಧಿಮಾನಸ ಲೋಕವೇ ಇಲ್ಲಿಯವರೆಗೆ ನಮ್ಮ ಜಗತ್ತಿನ ಮೇಲೆ ಆಳಿಕೆ ನಡೆಸಿದೆ, ಅದು ಜ್ಞಾನೋದಯ ಪಡೆದ ಪ್ರಜ್ಞೆಯಿರುವ ಮನುಷ್ಯ ಸಿದ್ಧಿಸಿಕೊಳ್ಳಲು ಸಾಧ್ಯವಾಗಬಹುದಾದ ಅತ್ಯುಚ್ಚ ಲೋಕವಾಗಿದೆ, ಅದು ಪರಮೋಚ್ಚ ರೀತಿಯಲ್ಲಿ ದೈವಿಕವಾಗಿದೆ ಎಂದು ಭಾವಿಸಲಾಗಿದೆ, ಮತ್ತು ಅದನ್ನು ತಲುಪಿದವರೆಲ್ಲ ಒಂದು ಕ್ಷಣಕಾಲ ಮಾತ್ರಕ್ಕಾದರೂ ತಾವು ನಿಜವಾದ ದಿವ್ಯಾತ್ಮನನ್ನು ಸ್ಪರ್ಶಿಸಿದ್ದೇವೆ ಎಂಬುದರಲ್ಲಿ ಸಂಶಯ ಪಟ್ಟುಕೊಂಡಿರಲಿಲ್ಲ. ಏಕೆಂದರೆ ಅದರ ಭವ್ಯತೆಗಳು ಸಾಮಾನ್ಯ ಮಾನವ ಪ್ರಜ್ಞೆಗೆ ಎಷ್ಟೊಂದು ಶ್ರೇಷ್ಠವಾಗಿ ಕಾಣುತ್ತವೆ ಎಂದರೆ ಇಲ್ಲಿ ಕೊನೆಯ ಕಿರೀಟಧಾರಿ ನೈಜತೆ ಇದೆ ಎಂದು ತಿಳಿದು ಅದು ಸಂಪೂರ್ಣವಾಗಿ ವಿಸ್ಮಯಕ್ಕೊಳಗಾಗುತ್ತದೆ. ಮತ್ತು ಹಾಗಿದ್ದಾಗ್ಯೂ ವಾಸ್ತವ ಸಂಗತಿ ಎಂದರೆ ಅಧಿಮಾನಸ ನಿಜವಾದ ಭಗವಂತ ಇರುವುದರಲ್ಲಿಂದ ಬಹಳ ಕೆಳಗಿನ ಸ್ತರದಲ್ಲಿದೆ. ಅದು ಯಥಾರ್ಥ ದೈವೀ ಸತ್ಯದ ನಿವಾಸವಲ್ಲ. ಅದು ಕೇವಲ ರೂಪ ಕೊಡುವವರ (formateurs) ಪ್ರಾಂತವಾಗಿದೆ, ಇತಿಹಾಸ ಕಾಲದ ಪ್ರಾರಂಭದಿಂದ ಜನರು ಬಾಗಿ ನಮಿಸುತ್ತ ಬಂದ ಎಲ್ಲ ಸೃಷ್ಟ್ಯಾತ್ಮಕ ಸಾಮರ್ಥ್ಯಗಳು ಹಾಗೂ

ದೇವತೆಗಳು ಆ ಪ್ರಾಂತದಲ್ಲಿರುವರು. ನಿಜವಾದ ಭಗವಂತ ಪ್ರಕಟವಾಗಿಲ್ಲ ಮತ್ತು ಪೃಥ್ವೀ ಸ್ವಭಾವವನ್ನು ಪರಿವರ್ತನೆಗೆ ಒಳಪಡಿಸಲಾಗಿಲ್ಲ ಎಂಬುದಕ್ಕೆ ನಿಖರವಾದ ಕಾರಣವೆಂದರೆ ಅಧಿಮಾನಸವನ್ನು ಅತಿಮನಸ್ಸೆಂದು ತಪ್ಪಾಗಿ ತಿಳಿದುಕೊಳ್ಳಲಾಗಿತ್ತು. ವಿಶ್ವವ್ಯಾಪಿ ದೇವತೆಗಳು ಸತ್ಯ ಪ್ರಜ್ಞೆ(Truth Consciousnes)ಯಲ್ಲಿ ಇಡಿಯಾಗಿ ಜೀವಿಸುತ್ತಿಲ್ಲ, ಅವರು ಕೇವಲ ಅದರ ಸ್ಪರ್ಶಕ್ಕೊಳಗಾಗಿದ್ದಾರೆ ಮತ್ತು ಪ್ರತಿಯೊಬ್ಬರೂ ಅದರ ವೈಭವಗಳ ಒಂದು ಮುಖವನ್ನು ಪ್ರತಿನಿಧಿಸುತ್ತಾರೆ.

ಜಗತ್ತಿನ ಇತಿಹಾಸದಲ್ಲಿ ನಿಸ್ಸಂಶಯವಾಗಿ, ಅತಿಮನಸ್ಸು ಕೂಡ ಕಾರ್ಯ ಕೈಕೊಂಡಿದೆ, ಆದರೆ ಅದನ್ನು ಯಾವಾಗಲೂ ಅಧಿಮನಸ್ಸಿನಿಂದ ಕೈಕೊಂಡಿತ್ತು. ಅತಿಮಾನಸ ದೈವೀ ಪ್ರಜ್ಞೆ ಮತ್ತು ದೈವೀ ಸಾಮರ್ಥ್ಯ ಇವುಗಳ ನೇರ ಅವರೋಹಣ ಮಾತ್ರ ದಿವ್ಯಾತ್ಮನ ಗುಣಲಕ್ಷಣಗಳೊಂದಿಗೆ ಜೀವನವನ್ನು ಸಂಪೂರ್ಣವಾಗಿ ಮರುಸೃಷ್ಟಿ ಮಾಡಬಲ್ಲದು. ಏಕೆಂದರೆ ಅಧಿಮಾನಸದಲ್ಲಿ ಈಗಾಗಲೇ ಸಾಧ್ಯತೆಗಳ ಲೀಲೆಯಿದೆ, ಅದು ನಾವು ಅಸ್ತಿತ್ವದಲ್ಲಿರುವ ಮನಸ್ಸು ಪ್ರಾಣ ಹಾಗೂ ಭೌತದ್ರವ್ಯಗಳಿರುವ ನಿಮ್ನ ತ್ರಿತಯ(triple) ಜಗತ್ತಿನ ಪ್ರಾರಂಭವನ್ನು ವ್ಯಕ್ತಪಡಿಸುತ್ತದೆ. ಈ ಲೀಲೆ ಇದ್ದಾಗೆಲ್ಲ, ಸ್ವಯಂಪ್ರೇರಿತ ವಿಫಲವಾಗದ ದಿವ್ಯಾತ್ಮದ ಆಂತರಿಕ ದೈವೀ ಸತ್ಯದ ಕಾರ್ಯಗತಿ ಇಲ್ಲದೇ ಇದ್ದಾಗ ವಿರೂಪಗೊಳ್ಳುವಿಕೆಯ ಹಾಗೂ ಅಜ್ಞಾನದ ಬೀಜವಿರುತ್ತದೆ. ಅಧಿಮಾನಸ ಅಜ್ಞಾನದ ಕ್ಷೇತ್ರವಲ್ಲ, ಆದರೆ ಲೀಲೆಯ ಆಯ್ಕೆಯಲ್ಲಿ ವಿಭಜನೆಗೊಂಡಿರದೆ ಇದ್ದಾಗ್ಯೂ ಪ್ರತ್ಯೇಕ ಸಾಧ್ಯತೆಗಳಿಗಾಗಿ ಉಚ್ಚತರ ಹಾಗೂ ನಿಮ್ನತರವಾದವುಗಳ ಅಂಚಿನಲ್ಲಿರುವುದಾಗಿದೆ, ವಿಷಯಗಳ ದೈವೀ ಸತ್ಯದಿಂದ ಮಾರ್ಗಚ್ಯುತಿಯತ್ತ ಕರೆದೊಯ್ಯುವ ಸಂಭವವಿರುತ್ತದೆ. ಹಾಗಾಗಿ ಅಧಿಮಾನಸ ಮಾನವ ಕುಲವನ್ನು ದೈವಿಕ ಸ್ವಭಾವದ್ದನ್ನಾಗಿ ಮಾಡುವ ಸಾಮರ್ಥ್ಯವನ್ನು ವಶದಲ್ಲಿಟ್ಟುಕೊಂಡಿರುವುದಿಲ್ಲ. ಅದಕ್ಕಾಗಿ ಅತಿಮಾನಸವು ಏಕೈಕ ಪರಿಣಾಮಕಾರಿ ನಿಯೋಗಿ(agent)ಯಾಗಿರುತ್ತದೆ. ನಮ್ಮ ಯೋಗದಲ್ಲಿ, ಜೀವನವನ್ನು ಆಧ್ಯಾತ್ಮೀಕರಣಗೊಳಿಸುವುದಕ್ಕಾಗಿ ಗತಕಾಲದ ಪ್ರಯತ್ನಗಳಿಂದ ಭಿನ್ನವಾದ ಅಂಶವೆಂದರೆ ಅಧಿಮಾನಸದ ಭವ್ಯತೆಗಳೆಲ್ಲ ಅತ್ಯುಚ್ಚ ನೈಜತೆಯಲ್ಲ, ಆದರೆ ಮನಸ್ಸು ಮತ್ತು ನಿಜವಾದ ಭಗವಂತ ಇವರ ನಡುವೆ ಇರುವ ಒಂದು ಹೆಜ್ಜೆ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ.

**CWM, 3/173–74** **– ಶ್ರೀಮಾತೆ**

*

**ಅತಿಮಾನಸ ಸಿದ್ಧಿ**

ಪ್ರಜ್ಞೆ ಒಂದು ಏಣಿ ಇದ್ದ ಹಾಗೆ: ಪ್ರತಿಯೊಂದು ಶ್ರೇಷ್ಠ ಯುಗದಲ್ಲಿ ಆ ಏಣಿಗೆ ಇನ್ನೊಂದು ಹೆಜ್ಜೆ–ಸಾಧನವನ್ನು ಅಧಿಕವಾಗಿ ಇರಿಸಲು ಮತ್ತು ಸಾಮಾನ್ಯ ಪ್ರಜ್ಞೆ ಎಂದೂ ಸಾಗಿ ಹೋಗಿರದ ಪ್ರಜ್ಞೆಯನ್ನು ತಲುಪಲು ಕ್ಷಮತೆಯುಳ್ಳ ಒಬ್ಬ ಶ್ರೇಷ್ಠ ಸತ್ತೆ ಬಂದಿದ್ದಾನೆ. ಉಚ್ಚಸ್ತರವನ್ನು ಸಿದ್ಧಿಸಿಕೊಳ್ಳುವುದು ಮತ್ತು ಪ್ರಾಪಂಚಿಕ ಪ್ರಜ್ಞೆಯಿಂದ ಪೂರ್ತಿಯಾಗಿ ಹೊರಬರುವುದು ಸಾಧ್ಯವಿದೆ, ಆದರೆ ಆಗ ಮನುಷ್ಯ ಆ ಏಣಿಯನ್ನು ಉಳಿಸಿಕೊಳ್ಳುವುದಿಲ್ಲ, ಅದು ಹಾಗಿರುವಾಗ ವಿಶ್ವದ ಶ್ರೇಷ್ಠ ಯುಗದ ಶ್ರೇಷ್ಠ ಸಿದ್ಧಿ, ಪ್ರಾಪಂಚಿಕ ಸ್ತರದೊಡನೆ ಸಂಪರ್ಕ ಕಳೆದುಕೊಳ್ಳದೆ, ಒಂದು ಹೆಚ್ಚಿನ ಮೆಟ್ಟಿಲನ್ನು ಆ ಏಣಿಗೆ ಅಧಿಕವಾಗಿ ಸೇರಿಸುವ ಕ್ಷಮತೆ ಹೊಂದಿರುವುದಾಗಿದೆ, ಆ ಕ್ಷಮತೆ ಅತ್ಯುಚ್ಚವಾದದ್ದನ್ನು ತಲುಪುವುದಕ್ಕೆ ಮತ್ತು ಅದೇ ವೇಳೆಗೆ, ಭಿನ್ನ ಸ್ತರಗಳ ನಡುವೆ ಇರುವ ಸಂಪರ್ಕವನ್ನೆಲ್ಲ ಕಡಿದು ಹಾಕುವ ಶೂನ್ಯಕ್ಕೆ ಅವಕಾಶ ಮಾಡಿಕೊಡುವುದರ ಬದಲಾಗಿ ತುತ್ತ ತುದಿಯಲ್ಲಿದ್ದುದನ್ನು ಕೆಳಸ್ತರದೊಡನೆ ಜೋಡಿಸುವುದಕ್ಕೆ ಇರುವಂತಹದಾಗಿರುತ್ತದೆ. ಮೇಲೆ ಮತ್ತು ಕೆಳಗೆ ಸಾಗಿ ಹೋಗುವುದು ಮತ್ತು ತುತ್ತ ತುದಿಯನ್ನು ಕೆಳಗಿನದೊಂದಿಗೆ ಜೋಡಿಸುವುದು ಸಿದ್ಧಿಯ ಇಡೀ ರಹಸ್ಯವಾಗಿರುತ್ತದೆ ಮತ್ತು ಅದು ಅವತಾರ ಪುರುಷನ ಕಾರ್ಯವಾಗಿರುತ್ತದೆ. ಅವನು ಏಣಿಗೆ ಒಂದು ಮೆಟ್ಟಿಲನ್ನು ಅಧಿಕವಾಗಿ ಸೇರಿಸಿದ ಪ್ರತಿಸಲ ಪೃಥ್ವಿಯ ಮೇಲೆ ಹೊಸ ಸೃಷ್ಟಿಯಾಗುತ್ತದೆ. ಈಗ ಅಧಿಕವಾಗಿ ಸೇರಿಸಲಿರುವ ಮೆಟ್ಟಿಲನ್ನು ಶ್ರೀ ಅರವಿಂದರು ಅತಿಮಾನಸ ಎಂದು ಕರೆದಿದ್ದಾರೆ. ಅದರ ಪರಿಣಾಮವಾಗಿ ಪ್ರಜ್ಞೆ ಅತಿಮಾನಸ ಲೋಕವನ್ನು ಪ್ರವೇಶಿಸಲು ಶಕ್ತವಾಗುವುದು, ಆದಾಗ್ಯೂ ವ್ಯಕ್ತಿವಿಶಿಷ್ಟ ರೂಪವನ್ನು, ವ್ಯಕ್ತೀಕರಣವನ್ನು ಉಳಿಸಿಕೊಳ್ಳುವುದು ಮತ್ತು ನಂತರ ಇಲ್ಲಿ ಹೊಸ ಸೃಷ್ಟಿಯನ್ನು ಸ್ಥಾಪಿಸಲು ಕೆಳಗಿಳಿದು ಬರುವುದು. ನಿಶ್ಚಿತವಾಗಿ ಇದೇ ಕೊನೆಯದಲ್ಲ, ಏಕೆಂದರೆ ಇನ್ನೂ ಹೆಚ್ಚು ದೂರದಲ್ಲಿರುವ ಸತ್ತೆಯ ಪ್ರಾಂತಗಳಿವೆ, ಆದರೆ ಈಗ ಅತಿಮಾನಸವನ್ನು ಕೆಳಗಿಳಿಸಿ ತರುವುದರಲ್ಲಿ ನಾವು ಕಾರ್ಯನಿರತರಾಗಿದ್ದೇವೆ, ಜಗತ್ತಿನ ಪುನರ್ ಸಂಘಟನೆ ಮಾಡಬೇಕಾಗಿದೆ, ಜಗತ್ತನ್ನು ಅದರ ನಿಜವಾದ ದೈವೀ ವ್ಯವಸ್ಥಾಕ್ರಮಕ್ಕೆ ತರಬೇಕಾಗಿದೆ. ಅದು ಸಾರಭೂತವಾಗಿ ವ್ಯವಸ್ಥಾಕ್ರಮದ ಸೃಷ್ಟಿ ಮಾಡುವುದಾಗಿದೆ, ಪ್ರತಿಯೊಂದನ್ನೂ ಅದರ ನಿಜವಾದ ಸ್ಥಾನದಲ್ಲಿ ಇರಿಸುವುದಾಗಿದೆ; ಮತ್ತು ಶಕ್ತಿಯ ಮುಖ್ಯ ಆತ್ಮ, ಕ್ರಿಯಾಶೀಲವಾದ ದೈವೀ ಶಕ್ತಿ ಸದ್ಯ

ಮಹಾಸರಸ್ವತಿಯಾಗಿದ್ದಾಳೆ, ಅವಳು ಪರಿಪೂರ್ಣ ಸಂಘಟನೆಯ ದೇವಿಯಾಗಿದ್ದಾಳೆ.

ಮೇಲ್ಗಡೆ ಹೋಗಲು, ಕೆಳಗೆ ಪ್ರಾಪಂಚಿಕವಾದುದರಲ್ಲಿ ಮೇಲಿದ್ದುದನ್ನು ತರಲು ಮನುಷ್ಯನಿಗೆ ಅನುಮತಿ ನೀಡುವುದನ್ನು ಮುಂದುವರಿಸಿಕೊಂಡು ಹೋಗುವ ಕಾರ್ಯವನ್ನು ಪ್ರಜ್ಞೆಯ ಒಳಗೆ ಕೈಕೊಳ್ಳಲಾಗುತ್ತದೆ ಇದು ಅವತಾರ ಪುರುಷನ ಕಾರ್ಯವಾಗಿರುತ್ತದೆ, ಅವನು ಸೆರೆಮನೆಯಲ್ಲಿ ಸಿಕ್ಕಿಹಾಕಿಕೊಂಡಿದ್ದರೂ, ಯಾರನ್ನೂ ಭೇಟಿ ಮಾಡದೆ ಇದ್ದಾಗಲೂ, ಹೊರಗೆ ಚಲಿಸಲಾಗದಿದ್ದರೂ ಆ ಕಾರ್ಯವನ್ನು ಕೈಕೊಳ್ಳಬಲ್ಲ, ಏಕೆಂದರೆ ಅದು ಪ್ರಜ್ಞೆಯಲ್ಲಿ ಕೈಕೊಳ್ಳಬೇಕಾದ ಕಾರ್ಯ, ಅದು ಅತಿಮನಸ್ಸು ಮತ್ತು ಪ್ರಾಪಂಚಿಕ ಸತ್ತೆ ಇವುಗಳ ನಡುವೆ ಸಂಪರ್ಕವನ್ನು ಉಂಟುಮಾಡುವುದಾಗಿರುತ್ತದೆ. ಅವನನ್ನು ಗುರುತಿಸಬೇಕಾದ ಆವಶ್ಯಕತೆ ಇರುವುದಿಲ್ಲ, ಈ ಪ್ರಜ್ಞಾಪೂರ್ಣ ಸಂಪರ್ಕವನ್ನು ಸ್ಥಾಪಿಸುವುದಕ್ಕೆ ಶಕ್ತನಾಗಲು ಬಾಹ್ಯ ಸಾಮರ್ಥ್ಯ ಬೇಕಾಗುವುದಿಲ್ಲ. ಹಾಗಿದ್ದರೂ ಒಮ್ಮೆ ಆ ಸಂಪರ್ಕ ಉಂಟಾದರೆ ಬಾಹ್ಯ ಜಗತ್ತಿನಲ್ಲಿ ಅದರ ಪರಿಣಾಮ ಕಂಡುಬರಬೇಕು, ಆ ಪರಿಣಾಮ ಹೊಸ ಸೃಷ್ಟಿಯಾಗಿರುತ್ತದೆ, ಅದು ಮಾದರಿ ನಗರದಿಂದ ಪ್ರಾರಂಭಗೊಂಡು ಪರಿಪೂರ್ಣ ಜಗತ್ತನ್ನು ತಯಾರಿ ಮಾಡುವುದರೊಂದಿಗೆ ಕೊನೆಗೊಳ್ಳುತ್ತದೆ.

**CWM, 3/178–79** **– ಶ್ರೀಮಾತೆ**

*

**ಅತಿಮಾನಸದ ಅವರೋಹಣ**

"ಯಶಸ್ವಿ ಭವಿಷ್ಯತ್ತು" ಎಂದು ನಾವು ಕರೆದ ಹೂವನ್ನು ನಿಮಗೆ ಕೊಡಲಾದಾಗ ಅದರ ಪ್ರಾಮುಖ್ಯತೆ ಏನು ಎಂಬುದು ನಿಮಗೆ ತಿಳಿದಿರುತ್ತದೆಯೆ? ಅದು ಭರವಸೆ ನೀಡುವ – ಇಲ್ಲ ವಚನ ನೀಡುವ – ಪ್ರಾಮುಖ್ಯತೆ ಹೊಂದಿರುತ್ತದೆ – ನೀವು ಅತಿಮಾನಸ ಜಗತ್ತಿನ ಅವರೋಹಣದಲ್ಲಿ ಭಾಗವಹಿಸಲಿದ್ದೀರಿ ಎಂದು ಹೇಳುವುದಾಗಿರುತ್ತದೆ, ಏಕೆಂದರೆ ಆ ಅವರೋಹಣ ನಮ್ಮ ಕಾರ್ಯ ಕಂಡುಕೊಳ್ಳುವ ಪರಾಕಾಷ್ಠೆಯಾಗಿರುತ್ತದೆ. ಆ ಅವರೋಹಣದ ಪೂರ್ತಿ ವೈಭವ ಇನ್ನೂ ಕಂಡುಬಂದಿಲ್ಲ, ಹಾಗಾಗಿದ್ದರೆ ಜಗತ್ತಿನ ಇಡೀ ಮುಖ ಭಿನ್ನವಾಗಿರುತ್ತಿತ್ತು. ನಿಧಾನಗತಿಯ ಹಂತಗಳ ಮೂಲಕ ಅತಿಮಾನಸ ತನ್ನ

ಪ್ರಭಾವವನ್ನು ಬೀರುತ್ತಿದೆ, ಈಗ ಸತ್ತೆಯ ಒಂದು ಭಾಗ ಮತ್ತು ಈಗ ಇನ್ನೊಂದು ಭಾಗ ದೈವತ್ವವನ್ನು ಅಪ್ಪಿಕೊಂಡಿರುವುದರ ಇಲ್ಲವೆ ಅದರ ಸ್ಪರ್ಶಪಡೆದುದರ ಭಾವನೆ ತಂದುಕೊಳ್ಳುತ್ತದೆ; ಆದರೆ ಅದು ತನ್ನ ಎಲ್ಲ ಸ್ವ–ಅಸ್ತಿತ್ವದ ಸಾಮರ್ಥ್ಯದೊಡನೆ ಕೆಳಗಿಳಿದು ಬಂದಾಗ ಪರಮೋಚ್ಚ ಮೂಲಭೂತ ಬದಲಾವಣೆ ಇಡೀ ಸ್ವಭಾವವನ್ನು ಹಿಡಿದುಕೊಳ್ಳುತ್ತದೆ. ಅದರ ಮೇಲೆ ಸಂಪೂರ್ಣ ವಿಜಯ ಸಾಧಿಸುವ ಗಳಿಗೆಯತ್ತ ನಾವು ಹೆಚ್ಚು ಹತ್ತಿರ ಬರುತ್ತಿದ್ದೇವೆ. ಜಗತ್ತಿನ ಸ್ಥಿತಿಗಳು ಒಮ್ಮೆ ತಯಾರಾದಾಗ ಪೂರ್ತಿ ಅವರೋಹಣ, ತನ್ನೆದುರಿಗೆ ಎಲ್ಲವನ್ನೂ ಕೊಂಡೊಯ್ಯುತ್ತ, ಸಂಭವಿಸುವುದು. ಅದರ ಸಾನ್ನಿಧ್ಯ ನಿಸ್ಸಂಧಿಗ್ಧವಾಗಿರುತ್ತದೆ, ಅದರ ಶಕ್ತಿ ಯಾವ ಪ್ರತಿರೋಧವನ್ನಾಗಲಿ, ಸಂಶಯಗಳನ್ನಾಗಲಿ ಸಹಿಸುವುದಿಲ್ಲ, ಮತ್ತು ಇನ್ನು ಮುಂದೆ ತೊಂದರೆಗಳು ನಿಮ್ಮನ್ನು ಪೀಡಿಸುವುದಿಲ್ಲ. ಏಕೆಂದರೆ ಭಗವಂತ ಪ್ರಕಟನಾಗಿ ನಿಂತಿರುತ್ತಾನೆ – ತನ್ನ ಇಡಿಯಾದ ಪರಿಪೂರ್ಣತೆಯನ್ನು ಪರದೆ ಇರಿಸದೆ ತೋರಿಸಿಕೊಡುತ್ತಾನೆ. ಆದರೆ ನಾನು ಹೇಳುತ್ತಿರುವುದರ ಅರ್ಥ ಇಡೀ ಜಗತ್ತು ಒಮ್ಮೆಗೆ ಆ ಸಾನ್ನಿಧ್ಯದ ಬಗೆ ಅರಿವು ಪಡೆಯುತ್ತದೆ ಎಂದಲ್ಲ, ಆದರೆ ಮನುಕುಲದ ಒಂದು ಭಾಗ ತಿಳಿದುಕೊಳ್ಳುವುದು ಮತ್ತು ಅದರಲ್ಲಿ ಭಾಗವಹಿಸುವುದು – ಇಲ್ಲಿರುವ ನಮ್ಮ ಚಿಕ್ಕ ಜಗತ್ತು ಆ ಭಾಗವಾಗಿರುತ್ತದೆ ಎಂದು ಹೇಳಬಹುದು. ಅಲ್ಲಿಂದ ರೂಪಪರಿವರ್ತನೆಗೆ ಒಳಪಡಿಸುವ ದೈವೀ ಕೃಪೆ ಬಹಳ ಪರಿಣಾಮಕಾರಿಯಾಗಿ ತೇಜಸ್ಸನ್ನು ಹೊರಸೂಸುವುದು. ಆ ಮಾರ್ಗದಲ್ಲಿ ಆತ್ಮೋನ್ನತಿ ಸಾಧಿಸಿರದ ಮಾನವ ಸ್ವಭಾವ ಮುಂದೆ ಇರಿಸುವ ಎಲ್ಲ ಅಡೆತಡೆಗಳಿದ್ದಾಗ್ಯೂ ಅಭೀಪ್ಸೆಪಡುವವರಿಗೆ ಸುದೈವದಿಂದ ಯಶಸ್ವಿ ಭವಿಷ್ಯತ್ತು ತೋರಿಬರುವುದು!

**CWM, 3/180 (1929–30 ರ ನಡುವಿನ ಮಾತುಕತೆಗಳು) – ಶ್ರೀಮಾತೆ**

*

**ಸಮಗ್ರ ಭಗವಂತ**

ಅಧಿಮಾನಸದ ಮೂಲಕ ಪ್ರತ್ಯೇಕವೆಂದು ಪ್ರಕಟವಾದ ಭಗವಂತನ ಹಾಗೂ ಅಸ್ತಿತ್ವದ ಹಲವಾರು ಮುಖಗಳಿವೆ. ಭಿನ್ನ ಮನಸ್ಸುಗಳು ಭಿನ್ನ ಮುಖಗಳ ಎಳೆತಕ್ಕೆ ಒಳಗಾಗುತ್ತವೆ ಮತ್ತು ಪ್ರತಿಯೊಂದು ಮನಸ್ಸು ತನ್ನದೇ ಗುರಿಗೆ ತನ್ನದೇ ಮಾರ್ಗವನ್ನು ಅನುಸರಿಸುತ್ತದೆ. ಪ್ರತಿಯೊಂದೂ ತನ್ನದೇ ಮಾರ್ಗವನ್ನು

ಅನುಸರಿಸಲು ಮುಕ್ತವಾಗಿರುತ್ತದೆ, ಇನ್ನೊಂದರ ಬಂಧನಕ್ಕೆ ಒಳಗಾಗಿರುವುದಿಲ್ಲ. ಅತಿಮಾನಸ ಕುರಿತು ಹೇಳುವುದಾದರೆ ಅದರ ವ್ಯಾಖ್ಯೆಯೇ ಸೂಚಿಸುವ ಹಾಗೆ ಅದು ಅಧಿಮಾನಸದ ಮೇಲ್ಗಡೆ ಇರುವ ಪ್ರಜ್ಞೆಯದಾಗಿದೆ, ಅದರಲ್ಲಿರುವ ಸಮಗ್ರ ಭಗವಂತನಲ್ಲಿ ಎಲ್ಲ ಮುಖಗಳು ಒಳಸೇರಿರುತ್ತವೆ. ಆದರೆ ಆ ಮುಖಗಳಲ್ಲಿ ಪ್ರವೃತ್ತಿಯನ್ನು ಬೇರೆಲ್ಲಿಯೋ ಇರಿಸಿಕೊಂಡ ಯಾವುದೂ ಅತಿಮಾನಸವನ್ನು ಅರಸುವ ಬಂಧನಕ್ಕೊಳಗಾಗಿರುವುದಿಲ್ಲ.

ಪ್ರಕಟಣೆ ಸಂಕೀರ್ಣವಾಗಿದೆ ಮತ್ತು ಅದರಲ್ಲಿ ಬೇರೆ ಬೇರೆ ಸ್ತರಗಳಿಗೆ ಸೇರಿದ ಸತ್ತೆಗಳಿವೆ. ಒಂದು ಆತ್ಮ ನಿರ್ವಾಣದ ಮೂಲಕ ಭಗವಂತನಲ್ಲಿ ಮುಳುಗುಹಾಕಲು ಬಯಸಿದರೆ ಇಲ್ಲವೆ ಆಧ್ಯಾತ್ಮಿಕ ನೆರವೇರಿಕೆಯನ್ನು ವೈಕುಂಠ ಇಲ್ಲವೆ ಗೋಲೋಕ–ಗಳಂತಹ ದೇವತೆಗಳ ಲೋಕದಲ್ಲಿ ಕಂಡುಕೊಳ್ಳಲು ಬಯಸಿದರೆ ಹಾಗೆ ಮಾಡಲು, ತನ್ನದೇ ಪ್ರವೃತ್ತಿಯನ್ನು ಅನುಸರಿಸಲು ಅದಕ್ಕೆ ಸ್ವಾತಂತ್ರ್ಯವಿರುತ್ತದೆ.

ಅತಿಮಾನಸದ ಶೋಧ ವಿಶೇಷವಾಗಿ ಪೃಥ್ವಿಯ ಆಧ್ಯಾತ್ಮಿಕ ಉತ್ಕ್ರಾಂತಿಗಾಗಿ ಮಹತ್ವದ್ದಾಗಿದೆ. ಇಲ್ಲಿರುವ ಆತ್ಮಗಳು ಅದನ್ನು ಅಂತಿಮವಾಗಿ ತಲುಪಲೇಬೇಕಾದರೆ, ನಿಸ್ಸಂದಿಗ್ಧವಾಗಿ, ಭಗವಂತ ಅದನ್ನು ಅರಸಲು ಅವು ಉತ್ಕ್ರಾಂತಿ ಹೊಂದುವಂತೆ ಮಾಡುತ್ತಾನೆ. ಅದನ್ನು ತಲುಪಲು ಅದರತ್ತ ನೇರವಾದ ದಾರಿಯಲ್ಲಿ ಪ್ರಗತಿ ಸಾಧಿಸುವುದರ ಮೂಲಕ ಇಲ್ಲವೆ ಅದರದೇ ಮಾರ್ಗ ಹಾಗೂ ಹಂತಗಳ ಮೂಲಕ ಸಾಗುವುದನ್ನು ಒತ್ತಾಯ ಪಡಿಸುವಂತಹದು ಯಾವುದೂ ಇಲ್ಲ. ಆ ಆತ್ಮಗಳು ಇನ್ನೊಂದು ಮಾರ್ಗವನ್ನು ಅನುಸರಿಸುವುದರ ಮೂಲಕ ಮತ್ತು ಮಧ್ಯವರ್ತಿ ಭಾಗಶಃ ನೆರವೇರಿಕೆ ಕಂಡುಕೊಳ್ಳುವುದರ ಮೂಲಕ ತೃಪ್ತಿಯನ್ನು ಪಡೆಯಬಹುದು. ಅತಿಮಾನಸ ಹಂತಕ್ಕೆ ಮುಂದಿನ ಆರೋಹಣ ಮಾಡುವುದು ಅವುಗಳ ಅದೃಷ್ಟದಲ್ಲಿದ್ದರೆ, ಅವು ಮರಳಿ ಬರಬಹುದು.

**CWSA, 28/274–75** – ಶ್ರೀ ಅರವಿಂದರು

*

**ಹಳೆಯ ಆಧ್ಯಾತ್ಮಿಕ ವಿಚಾರಗಳು ಮತ್ತು ಪರಿವರ್ತನೆ**

ನಾವು ಕೈಕೊಳ್ಳುತ್ತಿರುವುದರಲ್ಲಿ ಯಶಸ್ವಿಯಾದಾಗ, ಅದು ಒಂದು ಪ್ರಾರಂಭದ ಹಂತವಾಗಿರುತ್ತದೆ, ಪೂರ್ಣಗೊಂಡಿರುವುದಿಲ್ಲ. ಅದು ಪೃಥ್ವಿಯ ಮೇಲೆ ಹೊಸ

ಪ್ರಜ್ಞೆಯ ತಳಹದಿಯಾಗುತ್ತದೆ – ಆ ಪ್ರಜ್ಞೆಗೆ ಪ್ರಕಟಣೆಯ ಅನಂತ ಸಾಧ್ಯತೆಗಳಿರುತ್ತವೆ. ಪ್ರಕಟಣೆಯಲ್ಲಿ ಶಾಶ್ವತ ಮುನ್ನಡೆ ಇದೆ, ಅದರಾಚೆಗೆ ಮುನ್ನಡೆ ಇಲ್ಲ.

ಆತ್ಮವನ್ನು ಭೌತಿಕ ಹೊದಿಕೆಯಿಂದ ಬಿಡುಗಡೆ ಮಾಡುವುದಷ್ಟೇ ಆಗಿದ್ದರೆ ಆಗ ಅತಿಮಾನಸೀಕರಣದ ಆವಶ್ಯಕತೆ ಇರುವುದಿಲ್ಲ. ಆಧ್ಯಾತ್ಮಿಕ ಮುಕ್ತಿ ಮತ್ತು ನಿರ್ವಾಣ ಇವುಗಳಷ್ಟೇ ಸಾಕಾಗುತ್ತವೆ, ಉದ್ದೇಶ ಅತಿ ಭೌತಿಕ ಸ್ತರಗಳತ್ತ ಮೇಲಕ್ಕೇರಿ ಹೋಗುವುದಷ್ಟೇ ಆಗಿದ್ದರೆ ಆಗಲೂ ಕೂಡ ಅತಿಮಾನಸೀಕರಣದ ಆವಶ್ಯಕತೆ ಇರುವುದಿಲ್ಲ.

ಭಕ್ತಿಯ ಮೂಲಕ ಮನುಷ್ಯ ಮೇಲ್ಗಡೆಗಿರುವ ಯಾವುದಾದರೊಂದು ಸ್ವರ್ಗದಲ್ಲಿ ಪ್ರವೇಶಿಸಬಲ್ಲನು. ಆದರೆ ಅದು ಮುನ್ನಡೆ ಸಾಧಿಸುವಂತಹದಲ್ಲ. ಉಳಿದ ಲೋಕಗಳು ಮಾದರಿಯ ರೀತಿಯಲ್ಲಿರುವವುಗಳು, ಅವುಗಳಲ್ಲಿ ಪ್ರತಿಯೊಂದು ತನ್ನದೇ ರೀತಿಯಲ್ಲಿ, ಮಾದರಿಯಲ್ಲಿ ಹಾಗೂ ನಿಯಮದಲ್ಲಿ ಸ್ಥಿರಗೊಂಡಿರುತ್ತದೆ. ಉತ್ಕ್ರಾಂತಿ ಪೃಥ್ವಿಯ ಮೇಲೆ ಸಂಭವಿಸುತ್ತದೆ, ಹಾಗಾಗಿ ಮುನ್ನಡೆ ಸಾಧಿಸುವುದಕ್ಕೆ ಪೃಥ್ವಿ ಯೋಗ್ಯವಾದ ಸ್ಥಳ. ಇತರ ಲೋಕಗಳ ಸತ್ತೆಗಳು ಒಂದು ಲೋಕದಿಂದ ಮುನ್ನಡೆ ಸಾಧಿಸಿ ಇನ್ನೊಂದು ಲೋಕಕ್ಕೆ ಹೋಗುವುದಿಲ್ಲ. ತಾವಿರುವ ಮಾದರಿಯ ಲೋಕದಲ್ಲಿಯೇ ಸ್ಥಿರವಾಗಿ ಉಳಿದುಕೊಳ್ಳುತ್ತಾರೆ.

*

ಶುದ್ಧ ಅದ್ವೈತ – ವೇದಾಂತಿ ಎಲ್ಲವೂ ಬ್ರಹ್ಮ, ಜೀವನ ಒಂದು ಕನಸು, ನೈಜತೆಯಿಲ್ಲದ ಏನೋ ಒಂದು, ಕೇವಲ ಬ್ರಹ್ಮ ಅಸ್ತಿತ್ವದಲ್ಲಿದ್ದಾನೆ. ಮನುಷ್ಯನಿಗೆ ಮುಕ್ತಿ ಇಲ್ಲವೆ ನಿರ್ವಾಣವಿದೆ, ಹಾಗಾಗಿ ಮನುಷ್ಯ ತನ್ನ ದೇಹ ಪತನ ಹೊಂದುವವರೆಗೆ ಮಾತ್ರ ಜೀವಿಸುತ್ತಾನೆ – ನಂತರ ಜೀವನವೆಂಬುದಿಲ್ಲ – ಎಂದು ಹೇಳುತ್ತಾನೆ.

ಅವರು ಪರಿವರ್ತನೆಯ ವಿಧಾನವನ್ನು ಒಪ್ಪುವುದಿಲ್ಲ, ಏಕೆಂದರೆ ಮನಸ್ಸು, ಪ್ರಾಣ ಮತ್ತು ದೇಹ ಇವೆಲ್ಲ ಅಜ್ಞಾನದವು, ಭ್ರಮಾತ್ಮಕವಾದವುಗಳು – ಏಕೈಕ ನೈಜತೆ ಆಕಾರರಹಿತ, ಬಾಂಧವ್ಯರಹಿತ ದಿವ್ಯಾತ್ಮ ಇಲ್ಲವೆ ಬ್ರಹ್ಮವಾಗಿರುತ್ತದೆ. ಜೀವನ ಸಂಬಂಧಗಳನ್ನು ಹೊಂದಿದ ವಿಷಯ, ಪರಿಶುದ್ಧ ದಿವ್ಯಾತ್ಮದಲ್ಲಿ ಎಲ್ಲ

ಜೀವನ ಹಾಗೂ ಸಂಬಂಧಗಳು ಮಾಯವಾಗುತ್ತವೆ. ಭ್ರಮೆಯೊಂದು, ಪರಿವರ್ತನೆಗೆ ಅದನ್ನು ಒಳಪಡಿಸಿದಾಗ್ಯೂ ಭ್ರಮೆಯಾಗಿಯೇ ಉಳಿದುಕೊಳ್ಳುವು–ದರಿಂದ, ಅದನ್ನು ಪರಿವರ್ತನೆಗೊಳಪಡಿಸುವ ಸಾಧ್ಯತೆಯ ಉಪಯೋಗವೇನು? ಅವರಿಗೆ 'ನಿರ್ವಾಣದಲ್ಲಿಯ ಜೀವನ' ಎಂಬುದಿಲ್ಲ. ಕೇವಲ ಕೆಲವು ಯೋಗಗಳು ಯಾವುದೊಂದು ಬಗೆಯ ಪರಿವರ್ತನೆಯನ್ನು ಗುರಿಯಾಗಿಸಿಕೊಂಡಿರುತ್ತವೆ, ಅದು ಅಜ್ಞಾನದಿಂದ ಜ್ಞಾನ ಪಡೆಯುವ ಪರಿವರ್ತನೆ ಪಡೆಯುವುದಾಗಿರುವುದಿಲ್ಲ. ವಿಚಾರ ವ್ಯತ್ಯಾಸಕ್ಕೊಳಗಾಗುತ್ತದೆ – ಕೆಲವೊಮ್ಮೆ ದೈವೀ ಜ್ಞಾನ ಇಲ್ಲವೆ ಸಾಮರ್ಥ್ಯ, ಇಲ್ಲವೆ ದೈವೀ ಪರಿಶುದ್ಧತೆ, ಇಲ್ಲವೆ ನೈತಿಕ ಪರಿಪೂರ್ಣತೆ ಇಲ್ಲವೆ ದೈವೀ ಪ್ರೇಮ ಇಂತಹದನ್ನೆಲ್ಲ ಕುರಿತಾಗಿರುತ್ತದೆ.

*

ಅವಿದ್ಯೆಯ ವಿರೋಧದ ಮೇಲೆ ಜಯ ಸಾಧಿಸಬೇಕಾಗಿದೆ, ಸ್ವಭಾವದ ಪರಿವರ್ತನೆಯನ್ನು ಅವಿದ್ಯೆ ಬಯಸುವುದಿಲ್ಲ, ಅದರ ಮೇಲೆ ಜಯ ಸಾಧ್ಯವಾದಾಗ ಹಳೆಯ ಆಧ್ಯಾತ್ಮಿಕ ವಿಚಾರಗಳು ಅಡೆತಡೆ ಒಡ್ಡುವ ರೂಪ ತಾಳುವುದಿಲ್ಲ. ಮನುಕುಲವನ್ನು ಸಂಪೂರ್ಣವಾಗಿ ಅತಿಮಾನಸೀಕರಣಗೊಳಿಸುವ ಉದ್ದೇಶವನ್ನಿರಿಸಿಕೊಂಡಿಲ್ಲ, ಆದರೆ ಪೃಥ್ವಿಯ ಉತ್ಕ್ರಾಂತಿಯಲ್ಲಿ ಅತಿಮಾನಸ ಪ್ರಜ್ಞೆಯ ತತ್ವವನ್ನು ಸ್ಥಾಪಿಸುವ ಉದ್ದೇಶವಿದೆ. ಅದನ್ನು ಕೈಕೊಂಡರೆ ಅವಶ್ಯವಾದದ್ದೆಲ್ಲವನ್ನು ಅತಿಮಾನಸ ಸಾಮರ್ಥ್ಯವೇ ಸ್ವತಃ ಉತ್ಕ್ರಾಂತಿಗೆ ಒಳಪಡಿಸುವುದು. ಹಾಗಾಗಿ ಈ ಮಣಿಹ ವಿಸ್ತಾರವಾಗುವುದು ಮಹತ್ವದ್ದಲ್ಲ. ಕಡಿಮೆ ಸಂಖ್ಯೆಯಲ್ಲಿರುವ ಜನರು ಆ ಕಾರ್ಯವನ್ನು ಕೈಕೊಳ್ಳಬೇಕು ಎಂಬುದು ಮಹತ್ವದ ವಿಷಯವಾಗಿದೆ. ಇರುವ ತೊಂದರೆ ಅದೊಂದೇ.

ದೇಹದ ಪರಿವರ್ತನೆ ಪೂರ್ತಿಯಾದರೆ ಅದರರ್ಥ ಮೃತ್ಯುವಿನ ಅಧೀನತೆಗೆ ಒಳಗಾಗದೆ ಇರುವುದಾಗಿದೆ – ಅದರರ್ಥ ಮನುಷ್ಯ ತನ್ನ ಅದೇ ದೇಹವನ್ನು ಎಲ್ಲ ಕಾಲಕ್ಕೂ ಕಾಪಾಡಿಕೊಂಡು ಬರಬೇಕಾದ ಬಂಧನವಿದೆ ಎಂದಲ್ಲ. ಮನುಷ್ಯನಿಗೆ ತನ್ನ ದೇಹದ ಬದಲಾವಣೆ ಬೇಕೆಂದೆನಿಸಿದಾಗ ತನಗಾಗಿ ಒಂದು ಹೊಸ ದೇಹವನ್ನು ಸೃಷ್ಟಿಸುತ್ತಾನೆ, ಅದನ್ನು ಹೇಗೆ ಕೈಕೊಳ್ಳಲಾಗುವುದು ಎಂಬುದರ ಬಗ್ಗೆ ಈಗ ಹೇಳಲಾಗದು. ಸದ್ಯದ ವಿಧಾನ ಭೌತಿಕ ಜನ್ಮ ತಾಳುವುದರ ಮೂಲಕ ಅದನ್ನು ಕೈಕೊಳ್ಳುವುದಾಗಿದೆ – ಕೆಲವು ರಹಸ್ಯವಾದಿಗಳು ಆ ವಿಧಾನ ಅವಶ್ಯವಾಗದೆ ಇರುವ

ಕಾಲವೊಂದು ಬರಲಿದೆ ಎಂದು ಹೇಳುತ್ತಾರೆ – ಆದರೆ ಆ ಪ್ರಶ್ನೆಯ ಉತ್ತರವನ್ನು ಅತಿಮಾನಸ ಉತ್ಕ್ರಾಂತಿ ನಿರ್ಧರಿಸಲೆಂದು ಅದಕ್ಕೆ ಬಿಟ್ಟುಕೊಡಬೇಕು.

**CWSA, 28/288–89** **– ಶ್ರೀ ಅರವಿಂದರು**

*

**ದೈವಿಕ ಸಿದ್ಧಿ ಮತ್ತು ಅತಿಮಾನಸ ಸಿದ್ಧಿ**

ದೈವಿಕ ಸಿದ್ಧಿಯ ಅರ್ಥ ಆಧ್ಯಾತ್ಮಿಕ ಸಿದ್ಧಿ – ಮಾನಸಿಕ – ಆಧ್ಯಾತ್ಮಿಕ ಸ್ತರದ ಮೇಲೆ ಇಲ್ಲವೆ ಅಧಿಮಾನಸ ಸ್ತರದ ಮೇಲೆ ದಿವ್ಯಾತ್ಮ, ಭಗವಾನ್ ಇಲ್ಲವೆ ಬ್ರಹ್ಮನ್‌ನನ್ನು ಸಿದ್ಧಿಸಿಕೊಳ್ಳುವುದಾಗಿದೆ. (ಅದು ಏನೇ ಆಗಿರಲಿ ಮಾನಸಿಕ – ಆಧ್ಯಾತ್ಮಿಕವಾದದ್ದು) ಆ ಕಾರ್ಯವನ್ನು ಸಾವಿರಾರು ಜನರು ಕೈಕೊಂಡಿದ್ದಾರೆ. ಹಾಗಾಗಿ ಅದು ಅತಿಮಾನಸವನ್ನು ಸಿದ್ಧಿಸಿಕೊಳ್ಳುವುದಕ್ಕಿಂತ ಹೆಚ್ಚು ಸುಲಭವಾಗಿದೆ. ಹಾಗೆಯೇ ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯದೆ ಇದ್ದ ಯಾರೂ ಅತಿಮಾನಸ ಸಿದ್ಧಿಯನ್ನು ಪಡೆಯಲಾರರು. ಇವೆರಡರಲ್ಲಿ ಯಾವುದನ್ನಾದರೂ ಪರಿಣಾಮಕಾರಿ ರೀತಿಯಲ್ಲಿ ದೊರಕಿಸಬೇಕಾದರೆ ಇಡೀ ಸತ್ತೆ ಅದರತ್ತ ಹೊರಳಿರಬೇಕು, ಅಲ್ಲಿ ನಿಜವಾದ, ಬಹಳ ಗಾಢವಾದ ಮನೋಭಾವ ಮತ್ತು ಸಾಧನೆಯ ಕ್ರಿಯಾಶೀಲ ನೈಜತೆ ಇರಬೇಕು ಎಂಬುದು ಸತ್ಯವಾದದ್ದು. ಸತ್ಯಸಂಗತಿ ಏನೆಂದರೆ ಅತಿಮಾನಸವನ್ನು ನನಗಾಗಿ ಅರಸುತ್ತಿಲ್ಲ, ಆದರೆ ಪೃಥ್ವಿಗಾಗಿ, ಪೃಥ್ವಿಯ ಮೇಲೆ ಜನಿಸಿದ ಆತ್ಮಗಳಿಗಾಗಿ ಅರಸುತ್ತಿದ್ದೇನೆ ಹಾಗಾಗಿ ಯಾರಾದರೂ ಅತಿಮಾನಸವನ್ನು ಬಯಸುತ್ತಿದ್ದರೆ ಅದನ್ನು ನಾನು ಆಕ್ಷೇಪಿಸುವುದಿಲ್ಲ. ಆದರೆ ಅಲ್ಲಿ ಷರತ್ತುಗಳಿವೆ. ಅವನು ದೈವೀ ಸಂಕಲ್ಪವನ್ನು ಮೊದಲು ಬಯಸಬೇಕು ಮತ್ತು ಮಾರ್ಗದಲ್ಲಿ ಕರ್ಮಗಳು, ಭಕ್ತಿ, ಜ್ಞಾನ, ಸ್ವ–ಪರಿಪೂರ್ಣತೆ ಇವುಗಳ ಮೂಲಕ ಆತ್ಮದ ಸಮರ್ಪಣೆ ಮತ್ತು ಆಧ್ಯಾತ್ಮಿಕ ಸಿದ್ಧಿ ಇರಬೇಕು. ಅಭೀಪ್ಸೆಯನ್ನು ಇಟ್ಟುಕೊಳ್ಳುವುದಕ್ಕೆ ಕೇಂದ್ರಸ್ಥ ನಿಷ್ಕಾಪಟ್ಯ ಮೊದಲ ವಿಷಯ ಮತ್ತು ಅದು ಸಾಕಾಗುತ್ತದೆ – ಅಭೀಪ್ಸೆ ನೆರವೇರಿಕೆ ಕಂಡುಕೊಳ್ಳಬೇಕಾದರೆ ಇಡಿಯಾದ ನಿಷ್ಕಾಪಟ್ಯದ ಆವಶ್ಯಕತೆ ಇರುತ್ತದೆ.

**CWSA, 29/414** **– ಶ್ರೀ ಅರವಿಂದರು**

*

ದೈವೀ ಪ್ರಜ್ಞೆಯ ಭಿನ್ನ ಅವಸ್ಥೆಗಳಿವೆ, ಹಾಗೆಯೇ ಪರಿವರ್ತನೆಯ ಭಿನ್ನ ಅವಸ್ಥೆಗಳಿವೆ. ಮೊದಲನೆಯದಾಗಿ ಚೈತ್ಯಾತ್ಮಿಕ ಪರಿವರ್ತನೆ ಇದೆ, ಆ

ಅವಸ್ಥೆಯಲ್ಲಿ ಪ್ರತಿಯೊಂದೂ ಚೈತ್ಯಾತ್ಮಿಕ ಪ್ರಜ್ಞೆಯ ಮೂಲಕ ಭಗವಂತನೊಡನೆ ಸಂಪರ್ಕದಲ್ಲಿರುತ್ತದೆ. ನಂತರದ ಅವಸ್ಥೆ ಆಧ್ಯಾತ್ಮಿಕ ಪರಿವರ್ತನೆಯದಾಗಿದೆ, ಅದರಲ್ಲಿ ಎಲ್ಲವೂ ಭಗವಂತನ ವಿಶ್ವವ್ಯಾಪಿ ಪ್ರಜ್ಞೆಯಲ್ಲಿ ಮುಳುಗಿ ಹೋಗಿರುತ್ತದೆ. ಮೂರನೆಯದು ಅತಿಮಾನಸ ಪರಿವರ್ತನೆ, ಅದರಲ್ಲಿ ಎಲ್ಲವೂ ಆಧ್ಯಾತ್ಮ ರಹಸ್ಯ ಜ್ಞಾನದಲ್ಲಿ ಅತಿಮಾನಸೀಕರಣ ಹೊಂದಿರುತ್ತದೆ. ಕೊನೆಯದರಲ್ಲಿ ಮಾತ್ರ ಮನಸ್ಸು, ಪ್ರಾಣ ಹಾಗೂ ದೇಹಗಳ ಸಂಪೂರ್ಣ ಪರಿವರ್ತನೆ ಪ್ರಾರಂಭವಾಗುವುದು ಸಾಧ್ಯವಿದೆ – ಅದು ನನ್ನ ಅರ್ಥದಲ್ಲಿ ಸಂಪೂರ್ಣವಾದದ್ದು.

**CWSA, 29/414** – ಶ್ರೀ ಅರವಿಂದರು

*

ಸರ್ವಸಾಧಾರಣ ಯೋಗದ ಗುರಿ ಆತ್ಮವನ್ನು ಪ್ರಕೃತಿಯಿಂದ ಇಲ್ಲವೆ ಬಹುಶಃ ಕೆಲವೊಮ್ಮೆ ಆತ್ಮವನ್ನು ಪ್ರಕೃತಿಯಲ್ಲಿ ಮುಕ್ತಗೊಳಿಸುವುದಾಗಿರುತ್ತದೆ. ನಮ್ಮ ಗುರಿ ಆತ್ಮ ಹಾಗೂ ಸ್ವಭಾವ ಇವೆರಡನ್ನೂ ಭಗವಂತನಲ್ಲಿ ಮುಕ್ತಗೊಳಿಸು–ವುದಾಗಿದೆ.

**CWSA, 12/367** – ಶ್ರೀ ಅರವಿಂದರು

*



# ಅತಿಮಾನಸ ಯೋಗ

## ಏಕೈಕ ಅನಂತ ದೈವೀ ಸೃಜತೆಯ ಹಲವಾರು ಬದಿಗಳು ಹಾಗೂ ಮುಖಗಳು

ಎಲ್ಲ ಯೋಗಕ್ಕೂ ಒಂದು ಪರಮೋಚ್ಚ ಉದ್ದೇಶವಿದೆ. ಈ ಸೀಮಿತ ಮತ್ತು ವೇದನೆಗೊಳಗಾಗಿರುವ ಮಾನವ ಹಾಗೂ ಪ್ರಾಪಂಚಿಕ ಪ್ರಜ್ಞೆಯ ಅಜ್ಞಾನದಿಂದ, ದೌರ್ಬಲ್ಯದಿಂದ ಶಾಶ್ವತ ಮುಕ್ತಿ ಪಡೆಯುವುದು ಅದರ ಉದ್ದೇಶವಾಗಿದೆ ಮತ್ತು ಪಾರಾಗಿ ಹೋಗುವುದು ಇಲ್ಲವೆ ವಿಸ್ತಾರವಾದ, ಮನಸ್ಸು ಪ್ರಾಣ ಹಾಗೂ ದೇಹಗಳಾಚೆಗಿರುವ ದೈವಿಕವಾದ ಅಸ್ತಿತ್ವದಲ್ಲಿ ಬೆಳೆಯುವುದು ಮತ್ತು ತೀವ್ರಗತಿಯಲ್ಲಿ ಅರಳಿಕೊಳ್ಳುವುದು ಅದಾಗಿರುತ್ತದೆ.

ಆದರೆ ಈ ಶ್ರೇಷ್ಠತರ ಪ್ರಜ್ಞೆಯನ್ನು ಭಿನ್ನ ಅನ್ವೇಷಕರು ಭಿನ್ನ ರೀತಿಯಲ್ಲಿ ಕಲ್ಪನೆ ಮಾಡಿಕೊಂಡಿದ್ದಾರೆ, ಏಕೆಂದರೆ ಆ ಪ್ರಜ್ಞೆ ತನ್ನಲ್ಲಿಯೇ ಸ್ವತಃ ಹಿಡಿಯಲಾಗದಷ್ಟು ಅನಂತವಾಗಿದೆ. ಏಕೈಕವಾಗಿದ್ದರೂ ಬಹುಸಂಖ್ಯಾತವಾಗಿ ಏಕೈಕವಾದದ್ದರಿಂದ ಅದು ತನ್ನನ್ನು ಲಕ್ಷಾನುಗಟ್ಟಲೆ ಮುಖಗಳಲ್ಲಿ ತೋರಿಸುತ್ತದೆ. ಕೆಲವರಿಗೆ ಅದು ಶ್ರೇಷ್ಠ, ಶಾಶ್ವತ ಅಭಾವಾತ್ಮಕತೆ (negative) ಎಂದು ತೋರಿಬರುತ್ತದೆ ಇಲ್ಲವೆ ನಾವು ಅಸ್ತಿತ್ವದಲ್ಲಿದೆ ಎಂದು ತಿಳಿದಿರುವುದೆಲ್ಲದರ ಭವ್ಯ, ಸಂತೋಷಕರ ನಿರ್ಮೂಲನವಾಗಿರುತ್ತದೆ. ಇತರರಿಗೆ ಅದು ಆಕಾರರಹಿತ, ಪರಿಪೂರ್ಣತೆಯಾಗಿರುತ್ತದೆ; ವ್ಯಕ್ತಿವಿಶಿಷ್ಟತೆಯ ಹಾಗೂ ಜಗತ್ತಿನ – ಪ್ರಕೃತಿಯ ನಿರ್ಮೂಲನದ ಬೀಗದ ಕೈಯಾಗಿರುತ್ತದೆ, ಮತ್ತು ನಿಶ್ಚಲನೀರವತೆ ಹಾಗೂ ವರ್ಣನಾತೀತ ಶಾಂತಿ ನಾವು ಪ್ರವೇಶಿಸುವ ದ್ವಾರವಾಗಿರುತ್ತದೆ. ಇನ್ನಿತರರಿಗೆ ಅದು ದೈವೀ ಪರಮೋಚ್ಚವಾದದ್ದು, ಎಲ್ಲ ಧನಾತ್ಮಕವಾದವುಗಳಾಚೆಗಿರುವ ಧನಾತ್ಮಕವಾದದ್ದು, ದೈವೀ ಅಸ್ತಿತ್ವ, ಪರಿಪೂರ್ಣ ದೈವೀ ಪ್ರಜ್ಞೆ, ಮಿತಿರಹಿತ ದಿವ್ಯಾನಂದ. ಬೇರೆಯವರಿಗೆ ಅದು ಎಲ್ಲ ದೈವತ್ವಗಳಾಚೆಗಿರುವ ಏಕೈಕ ದೈವತ್ವ, ವರ್ಣನಾತೀತ ದೈವೀ ಪುರುಷ, ಅವನಲ್ಲಿ ಈ ಮೂರು ಪರಮೋಚ್ಚ ಸಂಗತಿಗಳು ಅವನ ಗುಣಲಕ್ಷಣಗಳಾಗಿವೆ. ಅದು ಹೀಗೆ ಮುಂದುವರಿದುಕೊಂಡು ಹೋಗುವ ಕೊನೆಗಾಣದ ಪ್ರಕರಣ. ನಮ್ಮ ಆತ್ಮದ ಸಾಮರ್ಥ್ಯ ಇದ್ದ ಹಾಗೆ, ಸ್ವಭಾವದ ಎರಕ ಇದ್ದ ಹಾಗೆ ನಾವು ಏಕೈಕ ಸನಾತನ ಮತ್ತು ಅನಂತನಾದವನನ್ನು ಕಲ್ಪಿಸಿಕೊಳ್ಳುತ್ತೇವೆ.

ಸನಾತನ ಮತ್ತು ಅನಂತನಾದವನನ್ನು ನಾವು ಬೇಕಾದ ಹಾಗೆ ಕಲ್ಪಿಸಿಕೊಂಡಾಗಲೂ ಅವನು ನಮ್ಮ ಯೋಗದ ಕೊನೆಯ ಗುರಿ. ಅಲ್ಲಿರುವ ಇತರ ಚಿಕ್ಕ ಗುರಿಗಳನ್ನು ಅದರಿಂದ ಸಿದ್ಧಿಸಿಕೊಳ್ಳಬಹುದು ಮತ್ತು ಹಲವಾರು ಅನ್ವೇಷಕರು ಅವುಗಳನ್ನು ಬೆಂಬತ್ತಿರುತ್ತಾರೆ, ಆದರೆ ಇವು ಮಾರ್ಗದ ಬದಿಯಲ್ಲಿರುವ ಕಿರೀಟಗಳು ಇಲ್ಲವೆ ಅಡ್ಡದಾರಿಗಳ ಮೇಲಿನ ಹೂವುಗಳೂ ಆಗಿರಬಹುದು, ಆದರೆ ಅವುಗಳನ್ನು ಅವುಗಳಿಗಾಗಿಯೇ ಬೆಂಬತ್ತುವುದು ನಮ್ಮ ಸನಾತನ ನಿವಾಸದಿಂದ ಬಹಳ ಬೇರೆಡೆಗೆ ಇಲ್ಲವೆ ಬಹಳ ದೂರ ಕರೆದೊಯ್ಯಬಹುದು.

ಅತಿಮಾನಸ ಯೋಗದ ಉದ್ದೇಶ ಎಲ್ಲ ಇತರ ಯೋಗಗಳನ್ನು ಸಂಯೋಜಿಸುತ್ತದೆ, ಆದರೆ ನಿಮ್ನತರ ಗುರಿಗಳನ್ನು ಏಕೈಕ ಪರಮೋಚ್ಚ ಉದ್ದೇಶದ ಪರಿಪೂರ್ಣತೆಯಲ್ಲಿ ಮೇಲಕ್ಕೆತ್ತುತ್ತದೆ ಮತ್ತು ಪರಿವರ್ತನೆಗೆ ಒಳಪಡಿಸುತ್ತದೆ.

**CWSA, 12/363–64** – **ಶ್ರೀ ಅರವಿಂದರು**

*

**ಕೈಬಿಟ್ಟು ಬಿಡುವುದಲ್ಲ, ಆದರೆ ಜಗತ್ತಿನ ಸ್ವಭಾವವನ್ನು ಪರಿವರ್ತನೆಗೆ ಒಳಪಡಿಸುವುದು**

ಮನುಷ್ಯ ಒಟ್ಟಿನಲ್ಲಿ ಯಾವುದೋ ಒಂದು ವರ್ಣನಾತೀತ, ಆಕಾರ–ರಹಿತವಾದುದರಲ್ಲಿ ತನ್ನನ್ನು ಕಳೆದುಕೊಳ್ಳುವುದು ಅದರ ಉದ್ದೇಶವಲ್ಲ, ಆದರೆ ವಿಶ್ವಂಭರ ಮತ್ತು ಅನಂತನಾದವನೊಡನೆ ಏಕವಾದ ನಮ್ಮ ನಿಜವಾದ ದೈವೀ ವ್ಯಕ್ತಿ ವಿಶೇಷವನ್ನು ಕಂಡುಕೊಳ್ಳುವುದಕ್ಕಾಗಿ ಅಹಂಕಾರವನ್ನು ತ್ಯಾಗಮಾಡುವುದು, ಪ್ರಜ್ಞೆಯನ್ನು ಅಂತ್ಯಗೊಳಿಸುವುದಲ್ಲ, ಅಜ್ಞಾನವಿರುವಲ್ಲಿ ಪರಮೋಚ್ಚ, ಎಲ್ಲವನ್ನೂ ಒಳಗೊಳ್ಳುವ ದೈವೀ ಜ್ಞಾನವನ್ನು ತರುವುದು, ಸಂತೋಷವನ್ನು ಅಳಿಸಿಹಾಕುವುದಲ್ಲ, ಆದರೆ ದೈವೀ ದುಃಖರಹಿತ ದಿವ್ಯಾನಂದಕ್ಕಾಗಿ ಮಾನವ ಸಂತಸವನ್ನು ತ್ಯಾಗ ಮಾಡುವುದು, ಬಿಟ್ಟುಕೊಡುವುದಲ್ಲ, ಆದರೆ ಎಲ್ಲ ಜಗತ್ತಿನ ಸ್ವಭಾವವನ್ನು ಮತ್ತು ಜಗತ್ತಿನ ಅಸ್ತಿತ್ವವನ್ನು ದೈವೀ ಅಸ್ತಿತ್ವದ ದೈವೀ ಸತ್ಯದ ಸಾಮರ್ಥ್ಯದಲ್ಲಿ ಪರಿವರ್ತನೆಗೆ ಒಳಪಡಿಸುವುದು, ಇದೆಲ್ಲ ಆಗಿದೆ. ವೈರಾಗ್ಯ ಈ ಯೋಗದ ಕೊನೆಯ ಷರತ್ತು ಇಲ್ಲವೆ ವಿಶಿಷ್ಟ ಗುಣಲಕ್ಷಣವಿರುವ ಸಾಧನವಲ್ಲ, ಆದಾಗ್ಯೂ ವೈರಾಗ್ಯದಿಂದ ದೊರಕಿಸುವ ಸ್ವ–ಪ್ರಭುತ್ವ ಇಲ್ಲವೆ ವೈರಾಗ್ಯದ ಪ್ರಯತ್ನ ಅವಶ್ಯವಾದಾಗ ಈ ಯೋಗ ಅದನ್ನು ಹೊರಗಿರಿಸುವುದಿಲ್ಲ. ನಮ್ಮ ಪರಿಪೂರ್ಣ ಸತ್ತೆಯಲ್ಲಿ ವರ್ಣನಾತೀತ ಭಗವಂತನೊಡನೆ ಏಕವಾಗುವುದು, ಮತ್ತು

ಪ್ರಕಟಣೆಯಲ್ಲಿ ಅವನ ಸತ್ತೆಯ, ಸಾಮರ್ಥ್ಯದ, ಪ್ರಜ್ಞೆಯ ಮತ್ತು ಸ್ವ–ಸಿದ್ಧಿಯಿಂದಾಗುವ ಸಂತೋಷದಲ್ಲಿ ಒಂದು ಮುಕ್ತ ಚಲನೆಯಾಗುವುದು, ಮನಸ್ಸಿನಾಚೆಗಿರುವ ದೈವೀ ಸತ್ಯ ಪ್ರಜ್ಞೆಯಲ್ಲಿ, ಎಲ್ಲ ಮಾನವ ಇಲ್ಲವೆ ಪ್ರಾಪಂಚಿಕ ಪ್ರಕಾಶಗಳಾಚೆಗಿರುವ ದೈವೀ ಪ್ರಕಾಶದಲ್ಲಿ ಮಾನವರ ಎಲ್ಲ ಅತಿ ಶ್ರೇಷ್ಠ ಬಲಗಳು ದೌರ್ಬಲ್ಯವಾಗಿ ಕಂಡುಬರುವ ದೈವೀ ಸಾಮರ್ಥ್ಯದಲ್ಲಿ, ವಿಫಲವಾಗದ ಆಧ್ಯಾತ್ಮ ರಹಸ್ಯ ಜ್ಞಾನದ ವಿವೇಕದಲ್ಲಿ, ಮತ್ತು ದೈವೀ ಸಂಕಲ್ಪದ ತಪ್ಪೆಸಗದ ಮತ್ತು ನಿರಂತರ ಪ್ರಭುತ್ವದಲ್ಲಿ, ನಾಶರಹಿತ ಸೂರ್ಯನ ಭವ್ಯತೆಯೆದುರು ಮೇಣಬತ್ತಿಯ ಜ್ವಾಲೆಯ ತುಂಡಾದ ಪ್ರತಿಫಲನ ಕಂಡುಬರುವಂತೆ ಎಲ್ಲ ಮಾನವ ಹರ್ಷ ತೋರಿಬರುವ ದಿವ್ಯಾನಂದದಲ್ಲಿ ಬೆಳೆಯುವುದು, ಆದರೆ ಇದೆಲ್ಲವೂ ನಮಗಾಗಿ ಅಲ್ಲ, ದೈವೀ ಪ್ರೇಮಿಯ ಸಂತೋಷಕ್ಕಾಗಿ, ಇದು ಯೋಗದ ಅತಿಮಾನಸ ಮಾರ್ಗದ ಗುರಿ ಹಾಗೂ ಕಿರೀಟ.

ಈ ಬದಲಾವಣೆ ಆಗಬೇಕಾದುದು ಪ್ರಕೃತಿಯಲ್ಲಿ, ಅದರ ಹೊರಗಲ್ಲ, ಅದು ಸಾಧ್ಯವಿದೆಯಷ್ಟೇ ಅಲ್ಲ, ಆದರೆ ಬೆಳೆಯುತ್ತಿರುವ ಆತ್ಮಕ್ಕೆ ಅನಿವಾರ್ಯವಾಗಿದೆ. ಅಜ್ಞಾನ, ದೋಷ, ವೇದನೆ ಮತ್ತು ದೌರ್ಬಲ್ಯ ಇವೆಲ್ಲವುಗಳ ತೋರುವಿಕೆಯಾದ್ಯಂತ ನಮ್ಮಲ್ಲಿರುವ ಪ್ರಕೃತಿ ನಡೆದು ಹೋಗಿ ತಲುಪಬೇಕಾದ ಗುರಿ ಅದಾಗಿದೆ.

**CWSA, 12/364** **– ಶ್ರೀ ಅರವಿಂದರು**

*

**ಪ್ರಕೃತಿಯ ದೈವೀಕರಣವೇ ಗುರಿ**

ನಾವು ಹೇಳುತ್ತಿರುವ ಪ್ರಕೃತಿಯ ಈ ದೈವೀಕರಣ ಒಂದು ರೂಪಪರಿವರ್ತನೆ–ಯಾಗಿದೆ, ಕೇವಲ ಒಂದು ಬಗೆಯ ಅತಿಮಾನವ ಕುಲದಲ್ಲಿ ಬೆಳೆಯುವುದಲ್ಲ, ಆದರೆ ನಮ್ಮ ಅಜ್ಞಾನಿ ಸ್ವಭಾವದ ಮಿಥ್ಯೆಯಿಂದ ದೈವೀ ಸ್ವಭಾವದಲ್ಲಿ ಬದಲಾವಣೆ ಆಗುವುದಾಗಿದೆ. ಮಾನಸಿಕ ಇಲ್ಲವೆ ಪ್ರಾಣಿಕ ಅರ್ಧದೇವತೆ, ಅಸುರ, ರಾಕ್ಷಸ ಮತ್ತು ಪಿಶಾಚ – ಅತಿಮಾನುಷ ಶಕ್ತಿಯಿರುವವ (Titan), ಪ್ರಾಣಿಕ ದೈತ್ಯ ಮತ್ತು ಕೆಡುಕು ದೇವತೆ (demon) ಇವರೆಲ್ಲ ಔನ್ನತ್ಯ (pitch), ಶಕ್ತಿ ಮತ್ತು ಚಲನೆ, ಹಾಗೂ ಅವರ ಗುಣಲಕ್ಷಣದ ಸ್ವಭಾವದಲ್ಲಿ ತಯಾರಾದ ರೀತಿ ಇವುಗಳಲ್ಲಿ ಅತಿಮಾನುಷರಾಗಿರುತ್ತಾರೆ, ಆದರೆ ಇವರು ದೈವಿಕವಾದವರಲ್ಲ ಮತ್ತು ಪರಮೋಚ್ಚ ರೀತಿಯಲ್ಲಿ ದೈವಿಕವಾಗಿರದೆ ಇದ್ದವರು, ಏಕೆಂದರೆ ಅವರು

ಶ್ರೇಷ್ಠತರ ಮಾನಸಿಕ ಸಾಮರ್ಥ್ಯ ಇಲ್ಲವೆ ಪ್ರಾಣದ ಸಾಮರ್ಥ್ಯದಲ್ಲಿ ಮಾತ್ರ ಜೀವಿಸುತ್ತಾರೆ, ಆದರೆ ಅವರು ಪರಮೋಚ್ಚ ದೈವೀ ಸತ್ಯದಲ್ಲಿ ಜೀವಿಸುವುದಿಲ್ಲ ಮತ್ತು ಕೇವಲ ಪರಮೋಚ್ಚ ದೈವೀ ಸತ್ಯ ಭಗವಂತನಾಗಿರುತ್ತದೆ. ಕೇವಲ ಪರಮೋಚ್ಚ ದೈವೀ ಸತ್ಯ ಪ್ರಜ್ಞೆಯಲ್ಲಿ ಜೀವಿಸುವವರು ಆಂತರಿಕವಾಗಿ ರಚನೆ–ಗೊಂಡಿರುತ್ತಾರೆ ಇಲ್ಲವೆ ದೈವೀ ಪ್ರತೀಕದಲ್ಲಿ ಮರುರಚನೆಗೆ ಒಳಗಾಗಿರುತ್ತಾರೆ.

ಅತಿಮಾನಸ ಯೋಗದ ಗುರಿ ಈ ಪರಮೋಚ್ಚ ಸತ್ಯ–ಪ್ರಜ್ಞೆಯಲ್ಲಿ ಬದಲಾಗುವುದಾಗಿದೆ, ಆದರೆ ಈ ಸತ್ಯ ಮನಸ್ಸಿನಾಚೆಗೆ ಇರುವ ಏನೋ ಒಂದು ಮತ್ತು ಈ ಪ್ರಜ್ಞೆ ಮನಸ್ಸಿನ ಅತ್ಯುಚ್ಚ ಪ್ರಜ್ಞೆಯಾಚೆಗೆ ಬಹಳ ಎತ್ತರದ ಮೇಲೆ ಇರುವಂತಹದು, ಏಕೆಂದರೆ ಮನಸ್ಸಿನ ಸತ್ಯ ಸಾಪೇಕ್ಷವಾದದ್ದು, ಅನಿಶ್ಚಿತವಾದದ್ದು ಮತ್ತು ಭಾಗಶಃವಾದದ್ದು, ಆದರೆ ಈ ಶ್ರೇಷ್ಠತರ ಸತ್ಯ ನಿರ್ಧಾರಕ ಮತ್ತು ಇಡಿಯಾದದ್ದು. ಮನಸ್ಸಿನ ಸತ್ಯ ಪ್ರತಿನಿಧಿಸುವಿಕೆಯಾಗಿರುತ್ತದೆ, ಅದು ಯಾವಾಗಲೂ ಅಸಮರ್ಪಕವಾದದ್ದು, ಬಹಳಷ್ಟು ಸಲ ದಾರಿ ತಪ್ಪಿಸುವ ಪ್ರತಿನಿಧಿಸುವಿಕೆ, ಅದು ಅತ್ಯಂತ ಸರಿಯಾದದ್ದು ಆಗಿರುವಾಗಲೂ, ಅದೊಂದು ಪರ್ಯಾಲೋಚನೆ, ದೈವೀ ಸತ್ಯದ ಛಾಯೆ, ಆದರೆ ಅದರ ಸತ್ವವಲ್ಲ. ಮನಸ್ಸು ದೈವೀ ಸತ್ಯದಲ್ಲಿ ಜೀವಿಸುವುದಿಲ್ಲ ಇಲ್ಲವೆ ಅದನ್ನು ವಶಪಡಿಸಿಕೊಂಡಿರುವುದಿಲ್ಲ, ಆದರೆ ಕೇವಲ ಅದನ್ನು ಬೆಂಬತ್ತಿರುತ್ತದೆ ಮತ್ತು ಅತಿ ಹೆಚ್ಚೆಂದರೆ ಅದರ ನಿಲುವಂಗಿಯ ಕೆಲವು ಎಳೆಗಳನ್ನು ಹಿಡಿದುಕೊಳ್ಳುತ್ತದೆ; ಅತಿಮನಸ್ಸು ದೈವೀ ಸತ್ಯದಲ್ಲಿ ಜೀವಿಸುತ್ತದೆ ಮತ್ತು ಆ ಸತ್ಯ ಅದರ ಸ್ವಭಾವಸಿದ್ಧ ದ್ರವ್ಯ, ರೂಪ ಮತ್ತು ಅಭಿವ್ಯಕ್ತಿ, ಆ ಸತ್ಯವನ್ನು ಅರಸಿಕೊಂಡು ಹೋಗಬೇಕಾಗಿರುವುದಿಲ್ಲ, ಆದರೆ ಯಾವಾಗಲೂ ಅದನ್ನು ತನ್ನ ವಶದಲ್ಲಿಟ್ಟುಕೊಂಡಿರುತ್ತದೆ ಮತ್ತು ವಶದಲ್ಲಿದ್ದದ್ದೇ ತಾನಾಗುತ್ತದೆ. ಇದು (ಮನಸ್ಸು ಹಾಗೂ ಅತಿಮನಸ್ಸು) ಇವುಗಳ ನಡುವಿರುವ ವ್ಯತ್ಯಾಸದ ಹೃದಯ. ಮನಸ್ಸಿನಿಂದ ಅತಿಮನಸ್ಸಿನವರೆಗೆ ಸಂಕ್ರಮಣದಿಂದ ಪರಿಣಾಮಕಾರಿಯಾಗಿರಿಸಿದ ಬದಲಾವಣೆ ಜ್ಞಾನದಲ್ಲಾದ ಕ್ರಾಂತಿಯಷ್ಟೇ ಅಲ್ಲ ಜ್ಞಾನಕ್ಕಾಗಿರುವ ಸಾಮರ್ಥ್ಯಕ್ಕಾಗಿಯೂ ಇರುತ್ತದೆ. ಅದು ಸಂಪೂರ್ಣ ಹಾಗೂ ಸ್ಥಿರವಾಗಬೇಕಾದರೆ, ನಮ್ಮ ಸಂಕಲ್ಪ, ಭಾವನೆಗಳು, ಸಂವೇದನೆಗಳು, ನಮ್ಮ ಪ್ರಾಣದ ಹಾಗೂ ಅದರ ಎಲ್ಲ ಶಕ್ತಿಗಳ ಸಾಮರ್ಥ್ಯ, ಕೊನೆಯಲ್ಲಿ ನಮ್ಮ ದೇಹದ ದ್ರವ್ಯವೇ ಸ್ವತಃ ಮತ್ತು ಕಾರ್ಯ ನಿರ್ವಹಣೆ ಇವೆಲ್ಲವುಗಳ ದೈವೀ ರೂಪಪರಿವರ್ತನೆ ಆಗಬೇಕಾಗುತ್ತದೆ. ಆಗ ಮಾತ್ರ ಅತಿಮನಸ್ಸು ಪೃಥ್ವಿಯ

ಮೇಲಿದೆ ಎಂದು ಹೇಳಬಹುದು, ಅದು ಪೃಥ್ವಿ ದ್ರವ್ಯದಲ್ಲಿ ಬೇರುಬಿಟ್ಟಿರುತ್ತದೆ, ದೈವೀಕರಣಗೊಂಡ ಜೀವಿಗಳ ಹೊಸ ಕುಲದಲ್ಲಿ ಮೈವೆತ್ತಿರುತ್ತದೆ. ಅತಿಮನಸ್ಸು ಅದರ ಅತ್ಯುಚ್ಚ ನಿಲುವಿನಲ್ಲಿ ದೇವನ ಪರಮೋಚ್ಚ ರಹಸ್ಯ ಆಧ್ಯಾತ್ಮಿಕ ಜ್ಞಾನ, ದೈವೀ ವಿವೇಕ–ಸಾಮರ್ಥ್ಯ–ಪ್ರಕಾಶ–ದಿವ್ಯಾನಂದವಾಗಿರುತ್ತದೆ. ಅದರ ಮೂಲಕ ಭಗವಂತ ತಿಳಿದುಕೊಳ್ಳುತ್ತಾನೆ. ವಿಶ್ವವನ್ನು ಮೇಲಕ್ಕೆತ್ತಿ ಹಿಡಿಯುತ್ತಾನೆ ಹಾಗೂ ಅದರ ಮೇಲೆ ಆಳಿಕೆ ನಡೆಸುತ್ತಾನೆ ಮತ್ತು ಸಂತೋಷಪಡುತ್ತಾನೆ.

**(CWSA, 12/365–66)** **– ಶ್ರೀ ಅರವಿಂದರು**

*

**ಅಭೀಪ್ಸೆ, ತೆರೆದಿರಿಸಿಕೊಳ್ಳುವಿಕೆ, ಗ್ರಹಣಶಕ್ತಿ ಇವೆಲ್ಲ ಅವಶ್ಯವಾಗಿವೆ**

ಅತಿಮಾನಸ ಯೋಗ ಒಂದೇ ವೇಳೆಗೆ ದೇವನೆಡೆಗೆ ಆರೋಹಣ ಮತ್ತು ಮೈವೆತ್ತ ಸ್ವಭಾವದಲ್ಲಿ ದೇವ ಪ್ರಮುಖನ ಅವರೋಹಣವಾಗಿರುತ್ತದೆ.

ಆತ್ಮದ, ಮನಸ್ಸಿನ, ಪ್ರಾಣದ ಹಾಗೂ ದೇಹದ ಏಕತ್ರಗೊಂಡ, ಊರ್ಧ್ವಮುಖದ ಅಭೀಪ್ಸೆಯ ಮೂಲಕ ಮಾತ್ರ ಆರೋಹಣವನ್ನು ಸಿದ್ಧಿಸಿಕೊಳ್ಳಬಹುದು, ಅನಂತ ಮತ್ತು ಸನಾತನ ಭಗವಂತನತ್ತ ಇಡೀ ಸತ್ತೆ ಕರೆ ಕೊಡುವುದರ ಮೂಲಕ ಅವರೋಹಣ ಬರಬಲ್ಲದು. ಈ ಕರೆ ಹಾಗೂ ಅಭೀಪ್ಸೆಗಳಿದ್ದರೆ, ಇಲ್ಲವೆ ಯಾವುದೇ ಸಾಧನದ ಮೂಲಕ ಅವು ಜನ್ಮ ತಾಳಬಲ್ಲವಾದರೆ, ಸತತ ಬೆಳೆಯಬಲ್ಲವಾದರೆ ಹಾಗೂ ಎಲ್ಲ ಸ್ವಭಾವವನ್ನು ಹಿಡಿದುಕೊಳ್ಳಬಲ್ಲವಾದರೆ ಆಗ ಮಾತ್ರ ಅತಿಮಾನಸದ ಮೇಲೆತ್ತಿ ಹಿಡಿಯುವಿಕೆ ಮತ್ತು ಪರಿವರ್ತನೆ ಸಾಧ್ಯವಾಗುವವು.

ಕರೆ ಕೊಡುವಿಕೆ ಮತ್ತು ಅಭೀಪ್ಸೆ ಇವು ಮೊದಲ ಷರತ್ತುಗಳು, ಅವುಗಳ ಜೊತೆಗೆ ಮತ್ತು ಅವುಗಳು ತರುವ ಪರಿಣಾಮಕಾರಿ ಗಾಢತೆಯೊಂದಿಗೆ ಭಗವಂತನಿಗೆ ಎಲ್ಲ ಸತ್ತೆಯ ತೆರೆದಿರಿಸಿಕೊಳ್ಳುವಿಕೆ ಮತ್ತು ಇಡಿಯಾದ ಶರಣಾಗತಿ ಇರಬೇಕು.

ಈ ತೆರೆದಿರಿಸಿಕೊಳ್ಳುವಿಕೆ ಎಲ್ಲ ಸ್ವಭಾವವನ್ನು ಅದರ ಎಲ್ಲ ಸ್ತರಗಳಲ್ಲಿ ಮತ್ತು ಎಲ್ಲ ಭಾಗಗಳಲ್ಲಿ ವಿಸ್ತಾರವಾಗಿ ಚೆಲ್ಲಿಕೊಡುವುದಾಗಿದೆ, ಅದರಿಂದಾಗಿ ಅದು ತನ್ನಲ್ಲಿ ಶ್ರೇಷ್ಠತರ ದೈವೀ ಪ್ರಜ್ಞೆಯನ್ನು ಸ್ವೀಕರಿಸಬಹುದು, ಆ ಪ್ರಜ್ಞೆ ಅದಾಗಲೇ ಈ ಮರ್ತ್ಯ ಅರ್ಧ ಪ್ರಜ್ಞೆಯ ಅಸ್ತಿತ್ವದ ಮೇಲ್ಗಡೆ, ಹಿಂದೆ ಇದೆ, ಅದನ್ನು ಸುತ್ತು

ವರಿದಿದೆ. ಆ ಸ್ವೀಕರಿಸುವಿಕೆಯಲ್ಲಿ ಒಳಗಿರಿಸಿಕೊಳ್ಳುವುದಕ್ಕೆ ಅಶಕ್ತತೆ, ರೂಪ ಪರಿವರ್ತನೆಗೆ ಒಳಪಡಿಸುವ ಒತ್ತಡದಡಿಯಲ್ಲಿ ವ್ಯವಸ್ಥೆ, ಮನಸ್ಸು ಇಲ್ಲವೆ ಪ್ರಾಣ ಇಲ್ಲವೆ ನರ ಇಲ್ಲವೆ ದೇಹ ಇವಾವುಗಳಲ್ಲಿ ಮುರಿದು ಬೀಳುವಿಕೆ ಇರಬಾರದು. ಅಲ್ಲಿ ಕೊನೆರಹಿತ ಗ್ರಹಣಶಕ್ತಿ ಇರಬೇಕು, ದೈವೀ ಶಕ್ತಿಯ ಎಂದೆಂದಿಗೂ ಬಲವತ್ತರವಾಗಿರುವ, ಮತ್ತು ಹೆಚ್ಚು ಹೆಚ್ಚಾಗಿ ಪಟ್ಟು ಹಿಡಿಯುವ ಕ್ರಿಯೆಯನ್ನು ಸಹಿಸಿಕೊಳ್ಳುವ ಕ್ಷಮತೆ ಇರಬೇಕು. ಹಾಗಿಲ್ಲದಿದ್ದರೆ ಶ್ರೇಷ್ಠವಾಗುವಂತಹ, ಶಾಶ್ವತವಾಗುವಂತಹ ಏನನ್ನೂ ಕೈಕೊಳ್ಳಲಾಗದು, ಆ ಯೋಗದ ವಿಧಾನದಲ್ಲಿ ಕುಸಿತವುಂಟಾಗುವುದು, ಇಲ್ಲವೆ ಜಡತೆಯಿಂದ ಸ್ಥಗಿತಗೊಳ್ಳುವಿಕೆ ಇರುವುದು, ಇಲ್ಲವೆ ನಿರರ್ಥಕ ಇಲ್ಲವೆ ಅನರ್ಥಕಾರಕ ಅಡ್ಡಿ ಉಂಟಾಗುವುದು, ಆ ವಿಧಾನ ವಿಫಲವಾಗದೆ ಇರಬೇಕಾದರೆ ಅದು ಪರಿಪೂರ್ಣವಾದದ್ದು ಮತ್ತು ಸಮಗ್ರವಾದದ್ದು ಆಗಿರಬೇಕು.

**CWSA, 12/169** **– ಶ್ರೀ ಅರವಿಂದರು**

*

**ಪ್ರಗತಿಪರ ಹಾಗೂ ಇಡಿಯಾದ ಶರಣಾಗತಿಯ ಆವಶ್ಯಕತೆ**

ಆದರೆ ಯಾವ ಮಾನವ ಪದ್ಧತಿಯೂ ಈ ಕೊನೆರಹಿತ ಗ್ರಹಣಶಕ್ತಿ ಮತ್ತು ವಿಫಲವಾಗದ ಕ್ಷಮತೆಯನ್ನು ಹೊಂದಿರದೆ ಇರುವ ಕಾರಣದಿಂದಾಗಿ ಅತಿಮಾನಸ ಯೋಗ ಯಶಸ್ವಿಯಾಗಬೇಕಾದರೆ ದೈವೀ ಶಕ್ತಿ ಅವರೋಹಣ ಮಾಡುತ್ತಿದ್ದ ಹಾಗೆಯೇ ಅದು ವೈಯಕ್ತಿಕ ಸಾಮರ್ಥ್ಯವನ್ನು ಹೆಚ್ಚಿಸಬೇಕು, ಆ ಶಕ್ತಿಯೊಂದಿಗೆ ಸ್ವೀಕರಿಸುತ್ತಿರುವ ಬಲದೊಂದಿಗೆ ಆ ಸಾಮರ್ಥ್ಯ ಸಮನಾಗಬೇಕು, ಸ್ವಭಾವದಲ್ಲಿ ಕಾರ್ಯ ಕೈಕೊಳ್ಳಲು ಆ ದೈವೀ ಶಕ್ತಿ ಮೇಲ್ಗಡೆಯಿಂದ ಪ್ರವೇಶಿಸುತ್ತದೆ. ಇದು ಸಾಧ್ಯವಾಗಬೇಕಾದರೆ ನಮ್ಮ ವತಿಯಿಂದ ಸತ್ತೆಯ ಪ್ರಗತಿಪರ ಶರಣಾಗತಿಯನ್ನು ಭಗವಂತನ ಹಸ್ತಗಳಲ್ಲಿರಿಸಬೇಕು, ಅಲ್ಲಿ ಸಂಪೂರ್ಣ, ನಿರಂತರವಿರುವ ಸಮ್ಮತಿ ಇರಬೇಕು, ಅವಶ್ಯವಾಗಿ ಕೈಕೊಳ್ಳಲೇಬೇಕಾದುದನ್ನು ಕೈಕೊಳ್ಳುವುದಕ್ಕಾಗಿ ದೈವೀ ಸಾಮರ್ಥ್ಯಕ್ಕೆ ಅನುವು ಮಾಡಿಕೊಡಲು ಧೈರ್ಯದಿಂದ ಕೂಡಿದ ಸಮ್ಮತಿ ಇರಬೇಕು. ಮನುಷ್ಯ ತನ್ನದೇ ಪ್ರಯತ್ನದಿಂದ ತನ್ನನ್ನು ಮನುಷ್ಯನಿಗಿಂತ ಹೆಚ್ಚಿನವನನ್ನಾಗಿ ಮಾಡಲಾರ; ಮಾನಸಿಕ ಸತ್ತೆ ತನ್ನದೇ ಸಹಾಯರಹಿತ ಶಕ್ತಿಯಿಂದ ತನ್ನನ್ನು ಅತಿಮಾನಸ ಆತ್ಮವನ್ನಾಗಿ ಮಾಡಲಾರದು.

ದೈವೀ ಪ್ರಕೃತಿಯ ಅವರೋಹಣ ಮಾತ್ರ ಮಾನವ ಪಾತ್ರೆಯನ್ನು ದೈವಿಕವಾದದ್ದನ್ನಾಗಿ ಮಾಡಬಹುದು.

ಏಕೆಂದರೆ ನಮ್ಮ ಮನಸ್ಸು, ಪ್ರಾಣ ಹಾಗೂ ದೇಹ ಇವುಗಳ ಸಾಮರ್ಥ್ಯಗಳು ತಮ್ಮದೇ ಮಿತಿಗಳಿಂದ ಬಂಧನಕ್ಕೊಳಗಾಗಿರುತ್ತವೆ ಮತ್ತು ಎಷ್ಟೇ ಉಚ್ಚಮಟ್ಟಕ್ಕೆ ಅವು ಏರಿ ಹೋಗಲಿ, ಎಷ್ಟೇ ವಿಸ್ತಾರವಾಗಿ ಚಾಚಿಕೊಳ್ಳಲಿ, ಅವು ತಮ್ಮ ಸ್ವಾಭಾವಿಕ ಕೊನೆಯ ಮಿತಿಯ ಮೇಲೆ ಏರಿ ಹೋಗಲಾರವು, ಇಲ್ಲವೆ ಅವುಗಳಾಚೆಗೆ ವಿಸ್ತರಿಸಿಕೊಳ್ಳಲಾರವು. ಹಾಗಿದ್ದಾಗ್ಯೂ ಮಾನಸಿಕ ಮನುಷ್ಯ ತನ್ನಾಚೆಗಿರುವುದಕ್ಕೆ ತನ್ನನ್ನು ತೆರೆದಿರಿಸಿಕೊಳ್ಳಬಲ್ಲನು ಮತ್ತು ಅತಿಮಾನಸ ದೈವೀ ಪ್ರಕಾಶಕ್ಕೆ, ಸತ್ಯಕ್ಕೆ ಹಾಗೂ ಸಾಮರ್ಥ್ಯಕ್ಕೆ ಕರೆ ಕೊಡಬಲ್ಲನು, ತನ್ನ ಮನಸ್ಸು ಕೈಕೊಳ್ಳಲಾರದ್ದನ್ನು ಅವೆಲ್ಲ ಅವನಲ್ಲಿ ಕಾರ್ಯ ಮಾಡುವಂತಾಗುವುದು. ಮನಸ್ಸು ತನ್ನ ಪ್ರಯತ್ನದಿಂದ ಮನಸ್ಸಿನಾಚೆಗೆ ಇರುವುದರಂತಾಗಲು ಸಾಧ್ಯವಾಗದೇ ಹೋದರೂ ಅತಿಮನಸ್ಸು ಅವರೋಹಣ ಮಾಡಬಲ್ಲದು ಮತ್ತು ಮನಸ್ಸನ್ನು ತನ್ನದೇ ದ್ರವ್ಯವಾಗುವಂತೆ ಪರಿವರ್ತನೆಗೆ ಒಳಪಡಿಸಬಲ್ಲದು. ಮನುಷ್ಯ ತನ್ನ ಭೇದ ಗ್ರಹಿಸುವ ಒಪ್ಪಿಗೆ ಮತ್ತು ಜಾಗರೂಕ ಶರಣಾಗತಿ ಇವುಗಳ ಮೂಲಕ ತನ್ನಲ್ಲಿ ಅತಿಮಾನಸ ತನ್ನದೇ ಗಾಢ ಹಾಗೂ ಸೂಕ್ಷ್ಮ ಅಂತರ್ದೃಷ್ಟಿ ಮತ್ತು ನಮ್ಯ ವರ್ಚಸ್ಸು ಇವುಗಳಿಗನುಗುಣವಾಗಿ ಕಾರ್ಯ ಮಾಡಲು ಅನುವು ಮಾಡಿಕೊಟ್ಟರೆ ಅದು ನಿಧಾನಗತಿಯಲ್ಲಿ ಇಲ್ಲವೆ ತೀವ್ರಗತಿಯಲ್ಲಿ ನಮ್ಮ ಸದ್ಯದ ಅರ್ಧಪರಿಪೂರ್ಣ ಸ್ವಭಾವ ದೈವೀ ಪರಿವರ್ತನೆಗೆ ಒಳಗಾಗುವಂತೆ ಮಾಡುವುದು.

*

**ಪ್ರಜ್ಞಾಪೂರ್ಣ ಮತ್ತು ಸಮಗ್ರ ಶರಣಾಗತಿಯಿಂದ ಸುರಕ್ಷಿತತೆ**

ಈ ಅವರೋಹಣ, ಈ ಕಾರ್ಯಗತಿ ಅವುಗಳ ಕಡುಸಂಕಟದ ಪತನ ಹಾಗೂ ಅಪಾಯಗಳಿಲ್ಲದೆ ಇಲ್ಲ. ಮಾನವ ಮನಸ್ಸು ಇಲ್ಲವೆ ಪ್ರಾಣಿಕ ಆಸೆ ಅವರೋಹಣ ಮಾಡುತ್ತಿರುವ ಶಕ್ತಿಯ ಮೇಲೆ ಹಿಡಿತ ಸಾಧಿಸಿದರೆ ಮತ್ತು ಅದನ್ನು ತನ್ನದೇ ಸೀಮಿತ ಮತ್ತು ತಪ್ಪು ಮಾಡುವ ವಿಚಾರಗಳಿಗನುಗುಣವಾಗಿ ಇಲ್ಲವೆ ಕಳಂಕಕ್ಕೊಳಗಾದ ಅಹಂಮನ್ಯತೆಯ ಪ್ರಚೋದನೆಗಳಿಗನುಗುಣವಾಗಿ ಉಪಯೋಗಿಸಲು ಪ್ರಯತ್ನಿಸಿದರೆ – ಮತ್ತು ಇದು ಆ ಶ್ರೇಷ್ಠತರ ಅಮರ ಸ್ವಭಾವದ ರೀತಿಯ ಒಂದಿಷ್ಟನ್ನು ನಿಮ್ನ ಮರ್ತ್ಯ ಕಲಿತುಕೊಂಡಿರುವವರೆಗೆ

ಅನಿವಾರ್ಯವಾದದ್ದು – ಮುಗ್ಗರಿಸುವಿಕೆಗಳು, ಮಾರ್ಗಚ್ಯುತಿಗಳು, ಕಠಿಣ ಮತ್ತು ತೋರಿಕೆಗೆ ಪರಿಹರಿಸಲಾಗದ ಅಡೆತಡೆಗಳು ಹಾಗೂ ಗಾಯಗಳು ಮತ್ತು ವೇದನೆಗಳು ಇವೆಲ್ಲವುಗಳಿಂದ ಪಾರಾಗಿ ಹೋಗಲಾಗುವುದಿಲ್ಲ ಮತ್ತು ಮೃತ್ಯು ಇಲ್ಲವೆ ಕೊನೆಯ ಅಧಃಪತನ ಇವು ಅಸಾಧ್ಯವಾಗಿರುವುದಿಲ್ಲ. ಮನಸ್ಸು, ಪ್ರಾಣ ಹಾಗೂ ದೇಹ ಇವು ಭಗವಂತನಿಗೆ ಪ್ರಜ್ಞಾಪೂರ್ಣವಾಗಿ, ಸಮಗ್ರ ರೀತಿಯಲ್ಲಿ ಶರಣಾಗುವುದನ್ನು ಕಲಿತುಕೊಂಡಾಗ ಮಾತ್ರ ಯೋಗದ ರೀತಿ ಸುಲಭವಾಗುತ್ತದೆ, ನೇರವಾಗುತ್ತದೆ, ತೀವ್ರಗತಿಯದು ಹಾಗೂ ಸುರಕ್ಷಿತವಾದದ್ದು ಆಗುತ್ತದೆ. ಮತ್ತು ಅದು ಭಗವಂತನಿಗೆ ಮಾತ್ರ ಮಾಡಿಕೊಂಡ ಶರಣಾಗತಿ ಮತ್ತು ತೆರೆದಿರಿಸಿಕೊಳ್ಳುವಿಕೆ ಆಗಿರಬೇಕು, ಮತ್ತಾವುದಕ್ಕೂ ಅಲ್ಲ. ಏಕೆಂದರೆ ನಮ್ಮಲ್ಲಿರುವ ಮಬ್ಬಾದ ಮನಸ್ಸು ಇಲ್ಲವೆ ಅಶುದ್ಧ ಪ್ರಾಣಿಕ ಶಕ್ತಿ ದೈವಿಕವಲ್ಲದ ವಿರೋಧೀ ಶಕ್ತಿಗಳಿಗೆ ಶರಣಾಗುವ, ಮತ್ತು ಅವುಗಳೇ ದೈವಿಕವಾದವುಗಳು ಎಂದು ತಪ್ಪು ಅರ್ಥಮಾಡಿಕೊಳ್ಳುವ ಸಾಧ್ಯತೆ ಇರುತ್ತದೆ. ಇದಕ್ಕಿಂತ ಹೆಚ್ಚು ಸಂಕಟಕರ ದೋಷ ಬೇರಾವುದೂ ಇರುವುದಿಲ್ಲ. ಆದ್ದರಿಂದ ನಮ್ಮ ಶರಣಾಗತಿ ಎಲ್ಲ ಪ್ರಭಾವಗಳಿಗೆ, ಇಲ್ಲವೆ ಯಾವುದೇ ಪ್ರಭಾವಕ್ಕೆ ಕುರುಡಾದದ್ದು ಹಾಗೂ ಜಡ ನಿಷ್ಕ್ರಿಯತೆಯದು ಆಗಿರಬಾರದು; ಆದರೆ ಶರಣಾಗತಿ ನಿಷ್ಕಾಪಟ್ಯದ್ದು, ಪ್ರಜ್ಞಾಪೂರ್ಣವಾದದ್ದು, ಜಾಗರೂಕವಾದದ್ದು, ಏಕೈಕ ಅತ್ಯುಚ್ಚನಾದವನಿಗೆ ಮಾತ್ರ ಮಾಡಿಕೊಂಡದ್ದಾಗಿರ–ಬೇಕು.

ಅನಂತ ದೈವೀ ಮಾತೆಗೆ ಸ್ವ–ಸಮರ್ಪಣ, ಅದೆಷ್ಟೇ ಕಠಿಣವಾಗಿರಲಿ, ಏಕೈಕ ಪರಿಣಾಮಕಾರಿ ಸಾಧನವೆಂದಾಗಿ, ಏಕ ಮಾತ್ರ ಶಾಶ್ವತ ಆಶ್ರಯವೆಂದಾಗಿ ಉಳಿದುಕೊಳ್ಳುತ್ತದೆ. ಅವಳಿಗೆ ಸ್ವ–ಸಮರ್ಪಣ ಮಾಡಿಕೊಳ್ಳುವುದರ ಅರ್ಥ ನಮ್ಮ ಸ್ವಭಾವ ಅವಳ ಹಸ್ತಗಳಲ್ಲಿ ಒಂದು ಉಪಕರಣವಾಗುವುದಾಗಿದೆ, ಆತ್ಮ ಅವಳ ತೋಳುಗಳಲ್ಲಿ ಒಂದು ಕೂಸಾಗುವುದಾಗಿದೆ.

**CWSA, 12/170–71** – ಶ್ರೀ ಅರವಿಂದರು

*

**ಸ್ವ–ಸಮರ್ಪಣೆ ಅತಿಮಾನಸ ಯೋಗದಲ್ಲಿ ಮಹತ್ವದ್ದಾದ ಶಬ್ದ**

ಶ್ರೇಷ್ಠತರ ದೈವೀ ಪ್ರಜ್ಞೆಯನ್ನು ಸ್ವೀಕರಿಸಲು ಹಾಗೂ ಅದರಲ್ಲಿ ಪ್ರವೇಶಿಸಲು ಇಡೀ ಸ್ವಭಾವದ ತೆರೆದಿರಿಸಿಕೊಳ್ಳುವಿಕೆ ಹಾಗೂ ಸಮರ್ಪಣವಿರಬೇಕು, ಆ ದೈವೀ

ಪ್ರಜ್ಞೆ ಈ ಮರ್ತ್ಯ, ಅರ್ಧಪ್ರಜ್ಞೆಯ ಅಸ್ತಿತ್ವದ ಮೇಲ್ಗಡೆ, ಹಿಂದೆ ಹಾಗೂ ಅದರ ಸುತ್ತ ಯಾವಾಗಲೂ ಇರುತ್ತದೆ. ಆತ್ಮ ಶ್ರೀಮಾತೆಯವರ ಹಸ್ತಗಳಲ್ಲಿ ಕೂಸಾಗುವವರೆಗೆ ಎಂದೆಂದಿಗೂ ಬಲವತ್ತರವಾದ ಮತ್ತು ಹೆಚ್ಚು ಒತ್ತು ನೀಡುವ ದೈವೀ ಸಾಮರ್ಥ್ಯದ ಕ್ರಿಯೆಯನ್ನು ಸಹಿಸಿಕೊಳ್ಳುವ ಕ್ಷಮತೆಯಿರಬೇಕು. ಬೇರೆ ಯೋಗಕ್ಕೆ ಪರಿಚಿತವಾದ ಎಲ್ಲ ಇತರ ಸಾಧನಗಳನ್ನು ಉಪಯೋಗಿಸಬಹುದು ಮತ್ತು ಕಾಲಕಾಲಕ್ಕೆ ಗೌಣ ವಿಧಾನಗಳೆಂದು ಈ ಯೋಗದಲ್ಲಿಯೂ ಕೂಡ ಉಪಯೋಗಿಸಲಾಗಿದೆ. ಆದರೆ ಈ ಶ್ರೇಷ್ಠತರ ಷರತ್ತುಗಳಿಲ್ಲದಿದ್ದರೆ ಅವು ಶಕ್ತಿಹೀನವಾಗಿರುತ್ತವೆ, ಮತ್ತು ಷರತ್ತುಗಳನ್ನು ಪಾಲಿಸಿದಾಗ ಆ ಸಾಧನಗಳು ಅತ್ಯಗತ್ಯವಾಗಿರುವುದಿಲ್ಲ.

ಈ ಯೋಗವನ್ನು ಮನಸ್ಸು, ಪ್ರಾಣ ಹಾಗೂ ದೇಹ ಇವುಗಳ ಯಾವುದೇ ಬಗೆಯ ಪ್ರಯತ್ನದಿಂದ, ಯಾವುದೇ ಮನೋವೈಜ್ಞಾನಿಕ ಇಲ್ಲವೆ ಭೌತಿಕ ವಿಧಾನದಿಂದ ಕೈಕೊಳ್ಳಲಾಗುವುದಿಲ್ಲ, ಆದರೆ ಕೇವಲ ಪರಮೋಚ್ಚ ದೈವೀ ಶಕ್ತಿಯಿಂದ ಕೈಕೊಳ್ಳಲಾಗುತ್ತದೆ ಎಂಬುದನ್ನು ಕೊನೆಯಲ್ಲಿ ಕಂಡುಕೊಳ್ಳಲಾಗುವುದು. ಆದರೆ ಅವಳ ರೀತಿ ಒಮ್ಮೆಗೆ ಬಹಳ ರಹಸ್ಯಪೂರ್ಣವಾಗಿ ನೇರವಾದದ್ದು, ಬಾಹ್ಯದಲ್ಲಿ ಜಟಿಲವಾದದ್ದು, ಅತಿ ಶ್ರೇಷ್ಠವಾದದ್ದು, ಅತಿ ಸಂಪೂರ್ಣವಾದದ್ದು ಹಾಗೂ ಸೂಕ್ಷ್ಮವಾದದ್ದು ಆಗಿರುವುದರಿಂದ ಮಾನವ ಬುದ್ಧಿಯಿಂದ ಗ್ರಾಹ್ಯವಾಗಿಸಿಕೊಂಡು ಅನುಸರಿಸಲು, ಒಂದು ಸೂತ್ರ ರೂಪದಲ್ಲಿ ವ್ಯಾಖ್ಯೆ ನೀಡಿ ಕತ್ತರಿಸಿಡಲು ಕಷ್ಟದಾಯಕವಾಗಿದೆ.

ಮನುಷ್ಯ ತನ್ನದೇ ಪ್ರಯತ್ನದಿಂದ ತನ್ನನ್ನು ಮನುಷ್ಯನಿಗಿಂತ ಹೆಚ್ಚಿನವನನ್ನಾಗಿ ಮಾಡಲಾರ, ಆದರೆ ತನ್ನಲ್ಲಿ ಕಾರ್ಯ ಮಾಡಲು ದೈವೀ ಸತ್ಯ ಹಾಗೂ ಅದರ ಸಾಮರ್ಥ್ಯಕ್ಕೆ ಕರೆ ಕೊಡಬಲ್ಲ. ದೈವೀ ಸ್ವಭಾವದ ಒಂದು ಅವರೋಹಣ ಮಾತ್ರ ಮಾನವ ಪಾತ್ರೆಯನ್ನು ದೈವಿಕವಾಗಿಸಬಹುದು. ಪರಮೋಚ್ಚ, ರೂಪಪರಿವರ್ತನೆಗೆ ಒಳಪಡಿಸುವ ದೈವೀ ಸಾಮರ್ಥ್ಯಕ್ಕೆ ಸ್ವ–ಸಮರ್ಪಣ ಈ ಯೋಗದ ಮಹತ್ವದ ಶಬ್ದವಾಗಿದೆ.

**CWSA, 12/365** – ಶ್ರೀ ಅರವಿಂದರು

*

ಭಗವಂತ ಇರುವಲ್ಲೆಲ್ಲ ಪ್ರತಿಯೊಂದೂ ಇದೆ – ಅದು ಕೇವಲ ಮರೆಸಿಟ್ಟುಕೊಂಡಿರುತ್ತದೆ, ಅಸ್ತಿತ್ವದಲ್ಲಿ ಇಲ್ಲ ಎಂದಲ್ಲ. ಕೆಳಗೆ ಅಚೇತನದಲ್ಲಿಯೇ ಸ್ವತಃ ಭಗವಂತನಿದ್ದಾನೆ – ಮನಸ್ಸು ಮತ್ತು ಪ್ರಾಣ ಭೌತದ್ರವ್ಯದಲ್ಲಿ ಅಡಗಿವೆ, ಅದೇ ರೀತಿಯಲ್ಲಿ ಅತಿಮನಸ್ಸು ಹಾಗೂ ಸಚ್ಚಿದಾನಂದ ಅಡಗಿವೆ. ಕೆಳ ಸ್ತರದಲ್ಲಿರುವುದು ದೈವೀ ಅಸ್ತಿತ್ವದ ಹೊರಗಿಲ್ಲ ದೈವೀ ಮನಸ್ಸಿನ ಅವರೋಹಣ ಮನಸ್ಸನ್ನು ಸೃಷ್ಟಿಯಲ್ಲಿ ತೆರೆದಿರಿಸಿದ ನಂತರ ಅದು ಭೌತದ್ರವ್ಯದಲ್ಲಿ ಪ್ರಕಟವಾಯಿತು, ಅತಿಮನಸ್ಸು ಕೂಡ ಅದೇ ರೀತಿಯಲ್ಲಿ ಪ್ರಕಟವಾಗುವುದು.

**CWSA, 28/6** **– ಶ್ರೀ ಅರವಿಂದರು**

*

"ನಮಗೆ ಇಷ್ಟವಾದ ರೀತಿಯಲ್ಲಿ ಕೈಕೊಳ್ಳಲು" ಇಲ್ಲವೆ ನಮಗಿಷ್ಟವಾದ ರೀತಿಯಲ್ಲಿ ಕೈಕೊಳ್ಳಲು ಕೊನೆಗೆ ಶಕ್ತರಾಗುವುದಕ್ಕೆ ಜಗತ್ತೊಂದನ್ನು ಸೃಷ್ಟಿಸಲು ನಮ್ಮಲ್ಲಿ ಯಾರೂ ಇಲ್ಲಿರುವುದಿಲ್ಲ. ಭಗವಂತ ಸಂಕಲ್ಪಿಸಿದ್ದನ್ನು ಕೈಕೊಳ್ಳಲು ಮತ್ತು ಭಗವಂತನ ಸಂಕಲ್ಪ ತನ್ನ ಸತ್ಯವನ್ನು ಪ್ರಕಟಿಸಲು ಸಾಧ್ಯವಾಗುವಂತಹ ಜಗತ್ತನ್ನು ಸೃಷ್ಟಿಸಲು ನಾವಿಲ್ಲಿದ್ದೇವೆ, ಅಲ್ಲಿ ಆ ಸತ್ಯವನ್ನು ಇನ್ನು ಮುಂದೆ ಅಜ್ಞಾನದಿಂದ ಪ್ರಾಣಿಕ ಆಸೆಯಿಂದ ವಿರೂಪಗೊಳಿಸಲಾಗುವುದಿಲ್ಲ, ಇಲ್ಲವೆ ವಿಕೃತಗೊಳಿಸ-ಲಾಗುವುದಿಲ್ಲ ಮತ್ತು ತಪ್ಪು ತರ್ಜುಮೆಗೆ ಒಳಪಡಿಸಲಾಗುವುದಿಲ್ಲ. ಅತಿಮಾನಸ ಯೋಗದ ಸಾಧಕ ಕೈಕೊಳ್ಳಬೇಕಾದ ಕಾರ್ಯ ಅವನದೇ ಕಾರ್ಯವಾಗಿರುವುದಿಲ್ಲ, ತನ್ನ ಕಾರ್ಯಕ್ಕಾಗಿ ಅವನು ತನ್ನದೇ ಷರತ್ತುಗಳನ್ನು ಇರಿಸಲಾಗುವುದಿಲ್ಲ, ಆದರೆ ಅವನು ಕೈಕೊಳ್ಳಬೇಕಾದ ಭಗವಂತನ ಕಾರ್ಯವನ್ನು ಭಗವಂತ ಇರಿಸಿದ ಷರತ್ತುಗಳ ಪ್ರಕಾರ ಕೈಕೊಳ್ಳಬೇಕಾಗುತ್ತದೆ. ನಮ್ಮ ಯೋಗ ನಮ್ಮ ಸಲುವಾಗಿ ಅಲ್ಲ, ಆದರೆ ಭಗವಂತನಿಗಾಗಿ ಇದೆ. ನಮ್ಮದೇ ವ್ಯಕ್ತಿವಿಶಿಷ್ಟ ಪ್ರಕಟಣೆಯನ್ನಾಗಲಿ, ಎಲ್ಲ ಬಂಧನಗಳು ಹಾಗೂ ಮಿತಿಗಳಿಂದ ಮುಕ್ತವಾದ ವೈಯಕ್ತಿಕ ಅಹಂಕಾರವನ್ನಾಗಲಿ ಅರಸುವುದಲ್ಲ, ಆದರೆ ಭಗವಂತನ ಪ್ರಕಟಣೆಯನ್ನು ಅರಸಬೇಕು. ನಮ್ಮದೇ ಆಧ್ಯಾತ್ಮಿಕ ಮುಕ್ತಿ, ಪರಿಪೂರ್ಣತೆ, ಸಂಪೂರ್ಣತೆ ಇದೆಲ್ಲ ಆ ದೈವೀ ಪ್ರಕಟಣೆಯ ಪರಿಣಾಮ ಸ್ವರೂಪದಲ್ಲಿ ಮತ್ತು ಅದರ ಭಾಗವೆಂದು ಆಗಬೇಕು, ಆದರೆ

ಯಾವುದೇ ಅಹಂಮನ್ಯತೆಯ ಅರ್ಥದಲ್ಲಲ್ಲ ಇಲ್ಲವೆ ಸ್ವ–ಅನ್ವೇಷಣೆಯ ಉದ್ದೇಶಕ್ಕಾಗಿ ಅಲ್ಲ. ಈ ಮುಕ್ತಿಯನ್ನು, ಪರಿಪೂರ್ಣತೆಯನ್ನು, ಸಂಪೂರ್ಣತೆಯನ್ನು ನಮ್ಮ ಸಲುವಾಗಿ ಅಲ್ಲ, ಆದರೆ ಭಗವಂತನಿಗಾಗಿ ಬೆಂಬತ್ತಬೇಕು. ಸೃಷ್ಟಿಯ ಈ ಗುಣಲಕ್ಷಣದ ಮೇಲೆ ಒತ್ತುಕೊಡುತ್ತೇನೆ. ಏಕೆಂದರೆ ಈ ಸರಳ ಮತ್ತು ಪ್ರಧಾನ ಸತ್ಯದ ಸತತ ವಿಸ್ಮರಣೆ, ಅದನ್ನು ಕುರಿತು ಪ್ರಜ್ಞಾಪೂರ್ಣ, ಅರ್ಧಪ್ರಜ್ಞೆಯ ಇಲ್ಲವೆ ಇಡಿಯಾದ ಅಜ್ಞಾನ ಇವುಗಳಿಂದ ಉಂಟಾದ ಗೊಂದಲ ಅನೇಕ ಪ್ರಾಣಿಕ ಬಂಡಾಯಗಳ ಮೂಲದಲ್ಲಿದೆ, ಆ ಬಂಡಾಯಗಳು ಇಲ್ಲಿ ಬಹಳಷ್ಟು ವೈಯಕ್ತಿಕ ಸಾಧನವನ್ನು ಹಾಳುಮಾಡಿವೆ ಮತ್ತು ಸರ್ವಸಾಧಾರಣ ಆಂತರಿಕ ಕಾರ್ಯ ಮತ್ತು ಆಧ್ಯಾತ್ಮಿಕ ವಾತಾವರಣ ಇವುಗಳ ಪ್ರಗತಿಗೆ ಅಡ್ಡಿಯನ್ನುಂಟು ಮಾಡಿವೆ.

**CWSA, 31/161–62** **– ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ


ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 16ನೇ ಏಪ್ರಿಲ್ 2016ರ ಶನಿವಾರದಂದು ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ "Ascent of Love in Savitri" ಎಂಬ ವಿಷಯದ ಬಗ್ಗೆ ಶ್ರೀ ಧರಣೀಧರ್ ಪಾಲ್, ಧರ್ಮದರ್ಶಿ, ಶ್ರೀ ಅರವಿಂದೋ ಶ್ರೀಕ್ಷೇತ್ರ ಟ್ರಸ್ಟ್, ದಾಲಿಜೋಡ, ಕಟಕ್ ಇವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ತತ್ಸಂಬಂಧ ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು, ಇತರರು ಹಾಜರಿದ್ದರು.

ದಿನಾಂಕ 17ನೇ ಏಪ್ರಿಲ್ 2016ರ ಭಾನುವಾರದಂದು ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ಹಾಗೂ ಸಾವಿತ್ರಿ ಮ್ಯೂಸಿಕಲ್ ಟ್ರಸ್ಟ್ ಜಂಟಿಯಾಗಿ "ಶ್ರೀ ಅರವಿಂದರ ಸಾವಿತ್ರಿಯ ಮ್ಯೂಸಿಕಲ್ ಸಿ.ಡಿ.–3 ಹಾಗೂ ಡಾ॥ ಜಿ.ಎನ್. ನಾರಾಯಣ ರೆಡ್ಡಿ ಬರೆದ "Towards a Greater Dawn"

ಪುಸ್ತಕ ಬಿಡುಗಡೆ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಗೌರವಾನ್ವಿತ ಜಸ್ಟೀಸ್ ಶ್ರೀ ಎಂ.ಎನ್. ವೆಂಕಟಾಚಲಯ್ಯ, ಮಾಜಿ ಮುಖ್ಯ ನ್ಯಾಯಾಧೀಶರು, ಸರ್ವೋಚ್ಚ ನ್ಯಾಯಾಲಯ, ಇವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಪುಸ್ತಕ ಹಾಗೂ ಸಿ.ಡಿ.ಯನ್ನು ಲೋಕಾರ್ಪಣೆ ಗೊಳಿಸಿದರು. ನಂತರ ಪುಸ್ತಕದಲ್ಲಿ ಅಡಕವಾಗಿರುವ ಉಪಯುಕ್ತ ಮಾಹಿತಿಯನ್ನು ಸಂಕ್ಷಿಪ್ತವಾಗಿ ಸಭಿಕರಿಗೆ ವಿವರಿಸಿದರು. ಗೌರವಾನ್ವಿತ ಅತಿಥಿಗಳಾಗಿ ಆಗಮಿಸಿದ ಶ್ರೀ ಧರಣೀಧರ್ ಪಾಲ್, ಧರ್ಮದರ್ಶಿ, ಶ್ರೀ ಅರವಿಂದ ಶ್ರೀಕ್ಷೇತ್ರ ಟ್ರಸ್ಟ್, ದಾಲಿಜೋಡ, ಕಟಕ್‌ರವರು ಶ್ರೀಮಾತೆಯವರು ಹಾಗೂ ಶ್ರೀ ಅರವಿಂದರ 'ಸಾವಿತ್ರಿ' ಬಗ್ಗೆ ಉಪನ್ಯಾಸ ನೀಡಿದರು. ಶ್ರೀ ಮಂಗಪತಿ ರಾವ್, ಕಾರ್ಯನಿರ್ವಾಹಕ ಧರ್ಮದರ್ಶಿ, ಸಾವಿತ್ರಿ ಮ್ಯೂಸಿಕಲ್ ಟ್ರಸ್ಟ್‌ರವರು ಮಾತನಾಡಿ ಶ್ರೀ ಅರವಿಂದರ ಸಾವಿತ್ರಿಯನ್ನು ಇಂಪಾದ ಸಂಗೀತಕ್ಕೆ ಅಳವಡಿಸಿ ಹಂತ ಹಂತವಾಗಿ ಸಿ.ಡಿ. ರೂಪದಲ್ಲಿ ತರುವ ಪ್ರಯತ್ನ, ಪರಿಕಲ್ಪನೆ ಮತ್ತು ಆ ಸಾಧನೆಯ ವಿಶಿಷ್ಟ ಯಶಸ್ಸನ್ನು ಸಭಿಕರೊಂದಿಗೆ ಹಂಚಿಕೊಂಡರು. ಶ್ರೀ ಅರವಿಂದೋ ಸಂಕೀರ್ಣದ ಕಾರ್ಯನಿರ್ವಾಹಕ ಧರ್ಮದರ್ಶಿಗಳಾದ ಶ್ರೀ ಅಜಿತ್ ಸಬ್ನೀಸ್ ರವರು ಪುಸ್ತಕ ಹಾಗೂ ಮ್ಯೂಸಿಕಲ್ ಸಿ.ಡಿ. ಬಗ್ಗೆ ಮಾತನಾಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಕಾರ್ಯಕ್ರಮಕ್ಕೆ ಸುಮಾರು 150 ಜನರು ಆಗಮಿಸಿದ್ದರು. ಕಾರ್ಯಕ್ರಮವು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

ದಿನಾಂಕ 24ನೇ ಏಪ್ರಿಲ್ 2016ರ ಭಾನುವಾರದಂದು ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.30 ಗಂಟೆಯವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ 10.45 ರಿಂದ 12.15ರವರೆಗೆ ಶ್ರೀ ಭಾಸ್ಕರ ರೆಡ್ಡಿಯವರಿಂದ "The Ultimate Answer to conflicts in Life" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. 24ನೇ ಏಪ್ರಿಲ್‌ನಿಂದ 9ನೇ ಜೂನ್ 2016ರವರೆಗೆ "The Sunlit Path" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ.



*To be able to be regular is a great force,*
*one becomes master of one's time*
*and one's movements.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.